ಸಂಪುಟ: 05 ಸಂಚಿಕೆ: 45 ಪುಟಗಳು: 08 ಮಂಗಳವಾರ 29 ಏಪ್ರಿಲ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

# ಉದಯ ವಾಹಿನಿ

UV

ಸರ್ವ ಸಮಾನತೆಯ

ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ವಿಶಿಷ್ಟವಾಗಲು, ನಿಮ್ಮ ಗಮ್ಯಸ್ಥಾನವನ್ನು ತಲುಪುವವರೆಗೆ ಯಾರಾದರೂ ಊಹಿಸಬಹುದಾದ ಕಠಿಣ ಯುದ್ಧವನ್ನು ಮಾಡುವುದು ಸವಾಲಾಗಿದೆ.

## ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸುವವರಿಗೆ ನೀರು, ಕರೆಂಟ್ ಕಟ್

**ಜಲಮಂಡಳಿ ಮತ್ತು ಬೆಸ್ಕಾಂ ಸಾಥ್**

• ಉದಯವಾಹಿನಿ, ಬೆಂಗಳೂರು

ಕಟ್ಟಡ ನಿರ್ಮಾಣ ಮಾಡುವಾಗ ನಿಯಮ ಉಲ್ಲಂಘಿಸಿದವರ ವಿರುದ್ಧ ಬಿಬಿಎಂಪಿ ಕೈಗೊಳ್ಳುವ ಶಿಸ್ತು ಕ್ರಮಕ್ಕೆ ಬೆಂಗಳೂರು ಜಲಮಂಡಳಿ ಮತ್ತು ಬೆಸ್ಕಾಂ ಸಾಥ್ ಕೊಡಲು ಮುಂದಾಗಿವೆ.

ಅಕ್ಟೋಬರ್ 22, 2024 ರಂದು ಒಂಬತ್ತು ಜನರ ಸಾವಿಗೆ ಕಾರಣವಾದ ಬಾಬುಸಾಬ್ ಪಾಳ್ಯದಲ್ಲಿ ಕಟ್ಟಡದ ಕುಸಿತ ಪ್ರಕರಣ ನಂತರ, ನಿಯಮ ಉಲ್ಲಂಘಿಸಿರುವ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಮತ್ತು ಒಳಚರಂಡಿ ಸಂಪರ್ಕಗಳನ್ನು ಕಡಿತಗೊಳಿಸುವಂತೆ ಲೋಕಾಯುಕ್ತರು ಸೂಚಿಸಿದ್ದರು. ಉತ್ತರ ಬೆಂಗಳೂರಿನಲ್ಲಿ ಒಂಬತ್ತು ಮಂದಿಯನ್ನು ಬಲಿ ತೆಗೆದುಕೊಂಡ ದುರಂತದ ನಂತರ, ಏಳು ದಿನಗಳ ಒಳಗೆ ನಿಯಮ ಉಲ್ಲಂಘಿಸಿದ ಕಟ್ಟಡಕ್ಕೆ ಶಾಶ್ವತವಾಗಿ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಬೆಸ್ಕಾಂಗೆ ಪಾಲಿಕೆ ನವೆಂಬರ್ 28, 2024 ರಂದು ಸುತ್ತೋಲೆ ಹೊರಡಿಸಿತು.

ಸರ್ವೋಚ್ಚ ನ್ಯಾಯಾಲಯವು ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಎಲ್ಲಾ ಹೈಕೋರ್ಟ್‌ಗಳ ರಿಜಿಸ್ಟ್ರಾರ್‌ಗಳಿಗೆ 12 ನಿರ್ದಿಷ್ಟ ನಿರ್ದೇಶನಗಳೊಂದಿಗೆ



ಆದೇಶವನ್ನು ನೀಡಿದೆ, ನಿರ್ಮಾಣ ಹಂತದ ಕಟ್ಟಡಗಳಿಗೆ ಆಕ್ಯುಪೆನ್ಸಿ ಪ್ರಮಾಣಪತ್ರಗಳಿಲ್ಲದೆ ಯಾವುದೇ ಸೇವೆಗಳನ್ನು ಒದಗಿಸಬಾರದು ಎಂದು ಸ್ಪಷ್ಟಪಡಿಸಿದೆ.

ಸುಪ್ರೀಂ ಕೋರ್ಟ್ ಆದೇಶವನ್ನು ತ್ವರಿತವಾಗಿ ಅನುಸರಿಸದ ಯಾವುದೇ ಅಧಿಕಾರಿಯನ್ನು ಸ್ಥಳೀಯ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದೆ.

ಹಲವಾರು ಬಾರಿ ಮನವಿ ಮಾಡಿದ ನಂತರ ಬೆಸ್ಕಾಂ ಅಂತಿಮವಾಗಿ 2025ರ ಏಪ್ರಿಲ್ 4 ರಂದು ಸುತ್ತೋಲೆ ಹೊರಡಿಸಿತು, ಸೇವಾ ಸಂಪರ್ಕಕ್ಕಾಗಿ ಪ್ರಾರಂಭ ಪ್ರಮಾಣಪತ್ರ ಮತ್ತು ಆಕ್ಯುಪೆನ್ಸಿ ಪ್ರಮಾಣಪತ್ರ ಅವಶ್ಯಕತೆಗಳನ್ನು ಕಡ್ಡಾಯಗೊಳಿಸಿತು ಬಿಬಿಎಂಪಿ ವಿನಂತಿಗಳನ್ನು ತ್ವರಿತವಾಗಿ ಅನುಸರಿಸಲು ಸ್ಥಳೀಯ ಕಚೇರಿಗಳಿಗೆ ನಿರ್ದೇಶನ ನೀಡಿದೆ ಎಂದು ಬೆಂಗಳೂರು ಒಕ್ಕೂಟದ ಸಂಚಾಲಕ ರಾಜಗೋಪಾಲನ್ ಹೇಳಿದರು. ನೀರು ಮತ್ತು ಒಳಚರಂಡಿ ಸಂಪರ್ಕ ಪಡೆಯಲು ಬಿಬಿಎಂಪಿಯಿಂದ ಕಡ್ಡಾಯವಾಗಿ ಪ್ರಮಾಣಪತ್ರ ತರಬೇಕು ಎಂದು ಸುತ್ತೋಲೆಯನ್ನು ಹೊರಡಿಸಲಿದೆ ಎಂದು ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ಇನ್ಫೋಸಿಸ್ ವಿರುದ್ಧದ ಎಸ್ ಎಸ್‌ಟಿ ದೌರ್ಜನ್ಯ ತಡೆ ಪ್ರಕರಣ ರದ್ದು

• ಉದಯವಾಹಿನಿ, ಬೆಂಗಳೂರು



ಇನ್ಫೋಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್ ಮತ್ತಿತರರ ವಿರುದ್ಧದ 1989ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆಯಡಿ ದಾಖಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್‌ರದ್ದುಗೊಳಿಸಿದೆ

ಕ್ರಿಸ್ ಗೋಪಾಲಕೃಷ್ಣನ್ ಸೇರಿದಂತೆ 16 ಮಂದಿ ಆರೋಪಿಗಳು ಸಲ್ಲಿಸಿದ್ದ ಅರ್ಜಿ ಪರಿಶೀಲಿಸಿದ ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ವಾದ - ಪ್ರತಿವಾದ ಆಲಿಸಿದ ನ್ಯಾಯಪೀಠ, ''ಅರ್ಜಿದಾರರಿಗೆ ಕಿರುಕುಳ ನೀಡುವ ದುರುದ್ದೇಶಪೂರಿತ ಪ್ರಯತ್ನ ಇದಾಗಿದೆ. ದೌರ್ಜನ್ಯದ ದೂರು ನೀಡಿರುವುದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಿದೆ'' ಎಂದು ಆದೇಶ ನೀಡಿದ್ದು, ದೂರುದಾರರ ವಿರುದ್ಧ ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲಿಸಲು ಅವಕಾಶ ಒದಗಿಸಿದೆ.

''ಅರ್ಜಿದಾರರ ವಿರುದ್ಧ ಮಾಡಲಾದ ಆರೋಪಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ - 1989 ರಡಿಯಲ್ಲಿಅಪರಾಧಗಳಾಗಿ ಪರಿಗಣಿಸಲ್ಪಡುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಇಲಾಖಾ ವಿಚಾರಣೆಯ ನಂತರ ಲೈಂಗಿಕ ಕಿರುಕುಳಕ್ಕಾಗಿ ದೂರುದಾರರನ್ನು ಸೇವೆಯಿಂದ ವಜಾಗೊಳಿಸಲಾಯಿತು. ನಂತರ ಅದನ್ನು ರಾಜೀನಾಮೆಯಾಗಿ ಪರಿವರ್ತಿಸಲಾಯಿತು. ಈ ವಜಾಗೊಳಿಸುವಿಕೆಯನ್ನು ದೂರುದಾರರು 2015 ರಲ್ಲಿ ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಆ ಪ್ರಕ್ರಿಯೆಯನ್ನು ಜಂಟಿ ಮೆಮೊ ಸಲ್ಲಿಸಿದ ನಂತರ ಇತ್ಯರ್ಥಗೊಳಿಸಲಾಯಿತು. ಅದರ ಪ್ರಕಾರ, ವಜಾ ಆದೇಶವನ್ನು ರಾಜೀನಾಮೆಯಾಗಿ ಪರಿವರ್ತಿಸಲಾಯಿತು. ರಾಜೀನಾಮೆ ನಂತರ ಎಲ್ಲಾ ಭತ್ಯೆಗಳನ್ನು ಪಡೆಯಲು ಅರ್ಹರಾಗಿದ್ದರು'' ಎಂದು ನ್ಯಾಯಾಲಯ ಹೇಳಿದೆ.500 ರೂ. ದಂಡ ವಿಧಿಸಲು ಮಾರ್ಷಲ್‌ಗಳಿಗೆ ಅಧಿಕಾರ ನೀಡಲಾಗಿದೆ.

## ಪಾಕ್ ವಿರುದ್ಧ ಯುದ್ಧ ಮಾಡಿ, ಉಗ್ರರನ್ನು ಕೊಂದು ಬಿಡಿ

• ಉದಯವಾಹಿನಿ, ಬೆಂಗಳೂರು

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದನಾ ದಾಳಿಯ ಹಿನ್ನೆಲೆಯಲ್ಲಿ ಪಾಕಿಸ್ತಾನದ ಜೊತೆಗೆ ಯುದ್ಧದ ಅಗತ್ಯ ಇಲ್ಲ ಎಂದು ಅತ್ತ ಸಿಎಂ ಸಿದ್ದರಾಮಯ್ಯ ಹೇಳಿದರೆ, ಇತ್ತ ಸಿಎಂ ಸಿದ್ದರಾಮಯ್ಯ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರು ಪಾಕಿಸ್ತಾನದ ವಿರುದ್ಧ ಯುದ್ಧ ಘೋಷಿಸಿ ಹಾಗೂ ಬಾಂಬ್ ಹಾಕಿ ಉಗ್ರರ ನೆಲೆಗಳನ್ನು ನಾಶ ಮಾಡಿ ಎಂದು ಸಲಹೆ ಕೊಟ್ಟಿದ್ದಾರೆ.

ಸಿದ್ದರಾಮಯ್ಯ ಹೇಳಿಕೆ ವಿವಾದಕ್ಕೆ ಕಾರಣವಾಗುತ್ತಿರುವ ಹಿನ್ನೆಲೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ನಿಲುವನ್ನು ಸಮರ್ಥನೆ ಮಾಡುವುದರ ಜೊತೆ ಜೊತೆಗೆ ಭಯೋತ್ಪಾದನೆಯನ್ನು ನಿಗ್ರಹಿಸುವ ನಿಟ್ಟಿನಲ್ಲಿ ಪಾಕಿಸ್ತಾನದ ಜೊತೆಗೆ ಯುದ್ಧ ಘೋಷಿಸಿ ಭಯೋತ್ಪಾದಕರ ಅಡಗು ತಾಣಗಳ ಮೇಲೆ ಆಕ್ರಮಣ ಮಾಡಿ ನೆಲಸಮಗೊಳಿಸಿ ಎಂದು ಸಲಹೆ ನೀಡಿದ್ದಾರೆ.

ದೇಶದ ಭದ್ರತಾ ವಿಷಯದಲ್ಲಿ ಏಕತೆಯನ್ನು ತೋರದ ಬಿಜೆಪಿ ನಾಯಕರು ಅನಗತ್ಯವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಟೀಕಿಸುತ್ತಿರುವುದನ್ನು ನಾನು ಖಂಡಿಸುತ್ತೇನೆ. ರಾಜ್ಯ ಬಿಜೆಪಿ ಅಧ್ಯಕ್ಷರು ಹಾಗೂ ರಾಜ್ಯದಲ್ಲಿನ ವಿರೋಧ ಪಕ್ಷದ ನಾಯಕರು ಮುಖ್ಯಮಂತ್ರಿಗಳ ವಿರುದ್ಧದ ತಮ್ಮ ಹೇಳಿಕೆಯನ್ನು ಕೂಡಲೇ ಹಿಂಪಡೆದು ಕ್ಷಮಾಪಣೆ ಕೇಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಕೇಂದ್ರ ಸರ್ಕಾರ ಕೂಡಲೇ ಸಂಸತ್ತಿನ ವಿಶೇಷ ಅಧಿವೇಶನ ಕರೆದು ದೇಶದ ಭದ್ರತಾ ವಿಷಯಗಳ ಬಗ್ಗೆ ಹಾಗೂ ಭಯೋತ್ಪಾದನೆಗೆ ಗಡಿಯಾಚೆಯಿಂದ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ಥಾನದ ವಿರುದ್ಧ ಕೈಗೊಳ್ಳಬೇಕಾದ ಕಠಿಣ ಕ್ರಮಗಳ ಕುರಿತು ಚರ್ಚಿಸಬೇಕು.

ಹತ್ಯಾಕಾಂಡದ ನಂತರ ಈವರೆಗೂ ಪ್ರಧಾನಿಯವರು ಕಾಶ್ಮೀರಕ್ಕೆ ಭೇಟಿ ನೀಡಿರುವುದಿಲ್ಲ. ಪ್ರಧಾನಿ ಮೋದಿಯವರು ಕಾಶ್ಮೀರಕ್ಕೆ ಭೇಟಿ ನೀಡಿ ಸಂಪೂರ್ಣ ಭದ್ರತಾ ಪರಿಸ್ಥಿತಿಯನ್ನು ಪರಿಶೀಲಿಸಬೇಕು ಎಂದು ಒತ್ತಾಯಿಸಿದರು.

# ಪಿಓಕೆ ವಶಕ್ಕೆ ಮೋದಿ ಸ್ಕೆಚ್

• ಉರಿಗೆ ಸರ್ಜಿಕಲ್ ಸ್ಟ್ರೈಕ್, ಪುಲ್ವಾಮಾಗೆ ಏರ್‌ಸ್ಟ್ರೈಕ್, ಪಹಲ್ಗಾಮ್ ದಾಳಿಗೆ ಪಿಓಕೆ ವಶಕ್ಕೆ ನಡಿತಿದ್ಯಾ ಪ್ಲಾನ್? • ಭಾರತ ಸರ್ಕಾರವು ಪಹಲ್ಗಾಮ್ ದಾಳಿಯ ಪ್ರತೀಕಾರವಾಗಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರವನ್ನು ಮರುವಶಪಡಿಸಲು ಚಿಂತನೆ • ಶಿಮ್ಲಾ ಒಪ್ಪಂದವನ್ನು ಪಾಕಿಸ್ತಾನ ರದ್ದುಗೊಳಿಸಿರುವುದು ಭಾರತಕ್ಕೆ ಹೆಚ್ಚಿನ ಮಿಲಿಟರಿ ಸ್ವಾತಂತ್ರ್ಯ ನೀಡಿದೆ • ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಭಾರತೀಯ ಜನತಾ ಪಕ್ಷದ ಪ್ರಮುಖ ಅಜೆಂಡಾಗಳಲ್ಲಿ ಪಿಓಕೆ ಮರುವಶಪಡಿಸಿಕೊಳ್ಳುವುದು ಇದೆ

**ಮೋದಿ ಪ್ರತೀಕಾರ ಏನು?**

## ಇಂದಿರಾಗಾಂಧಿ ಹಾದಿ ಹಿಡಿತಾರಾ ಪ್ರಧಾನಿ?

• ಉದಯವಾಹಿನಿ, ಹೊಸದಿಲ್ಲಿ




ಪಹಲ್ಗಾಮ್ ದಾಳಿ ಬೆನ್ನಲ್ಲೇ ಭಾರತ ಹಾಗೂ ಪಾಕಿಸ್ತಾನದ ನಡುವೆ ಯುದ್ಧದ ಸನ್ನಿವೇಶ ಸೃಷ್ಟಿಯಾಗಿದೆ. 2016ರ ಉರಿ ದಾಳಿ ಬಳಿಕ ಸರ್ಜಿಕಲ್ ಸ್ಟ್ರೈಕ್ ನಡೆಸಿ ತಿರುಗೇಟು ನೀಡಿದ್ದ ಮೋದಿ ಸರ್ಕಾರ, 2019ರ ಪುಲ್ವಾಮಾ ದಾಳಿಗೆ ಬಾಲಾಕೋಟ್ ಮೇಲೆ ಏರ್‌ಸ್ಟ್ರೈಕ್ ನಡೆಸಿ ಪ್ರತೀಕಾರ ತೀರಿಸಿಕೊಂಡಿದ್ದರು. ಇದಕ್ಕೆ 140 ಕೋಟಿ ಭಾರತೀಯರು ಸಾಕ್ಷಿಯಾಗಿದ್ದರು. ಈಗ ಪಹಲ್ಗಾಮ್ ಉಗ್ರರ ದಾಳಿಗೆ ಮೋದಿ ಸರ್ಕಾರವೂ ಹೇಗೆ ಪ್ರತೀಕಾರ ತೀರಿಸಿಕೊಳ್ಳುತ್ತದೆ ಎಂದು ದೇಶವಾಸಿಗಳು ಕುತೂಹಲದ ಕಣ್ಣಿನಿಂದ ನೋಡುತ್ತಿದ್ದಾರೆ. ಸದ್ಯದ ಪರಿಸ್ಥಿತಿಗಳನ್ನು ನೋಡಿದರೆ ಏನೋ ದೊಡ್ಡ ಬೆಳವಣಿಗೆ ನಡೆಯುತ್ತಿರುವಂತೆ ಕಾಣುತ್ತಿದೆ. ಭಾರತವೂ ಈಗ ತಾನು ಬಯಸಿದ್ದನ್ನು ಮಾಡುವ, ಪಡೆಯುವ ಎಲ್ಲಾ ಸಾಮರ್ಥ್ಯ ಹಾಗೂ ಶಸ್ತ್ರಾಸ್ತ್ರಗಳನ್ನು ಹೊಂದಿದೆ. ಅದಲ್ಲದೇ ಪಾಕಿಸ್ತಾನವೂ ಶಿಮ್ಲಾ ಒಪ್ಪಂದದಿಂದ ಹಿಂದೆ ಸರಿದಿರುವುದು ಭಾರತಕ್ಕೆ ಪಾಕ್ ಆಕ್ರಮಿತ ಕಾಶ್ಮೀರವನ್ನು ಪಡೆಯಲು ಬಾಗಿಲನ್ನು ತೆರೆದಂತಾಗಿದೆ. ಹೌದು, ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆದು ವಾರವಾಗುತ್ತಾ ಬಂದಿದೆ. ರಾಜತಾಂತ್ರಿಕ ಕ್ರಮಗಳನ್ನು ಹೊರತುಪಡಿಸಿ ಸೇನಾ ಕ್ರಮಗಳನ್ನು ಇನ್ನೂ ಮೋದಿ ಸರ್ಕಾರ ತೆಗೆದುಕೊಂಡಿಲ್ಲ. ಆದರೆ, ದಿಲ್ಲಿಯಲ್ಲಿ ಪ್ರಧಾನಿ, ಗೃಹ, ರಕ್ಷಣಾ, ವಿದೇಶಾಂಗ ಸಚಿವರ, ಸೇನಾ ಮುಖ್ಯಸ್ಥರ ನಡುವೆ ಭಾರೀ ಚರ್ಚೆ, ಮಾತುಕತೆಗಳು ನಡೆದಿದೆ. ಅತ್ತ ಸೇನೆಯೂ ಕೂಡ ಎಲ್ಲಾದಕ್ಕೂ ಸಿದ್ಧ ಎನ್ನುವ ರೀತಿಯಲ್ಲಿದೆ. ಈ ಎಲ್ಲಾ ಬೆಳವಣಿಗೆಗಳು ಕೇಂದ್ರ ಸರ್ಕಾರ ಏನೋ ದೊಡ್ಡ ಕಾರ್ಯಕ್ಕೆ ಕೈ ಹಾಕಿರುವಂತೆ ಕಾಣುತ್ತಿದೆ. ಶಿಮ್ಲಾ ಒಪ್ಪಂದದಿಂದ ಪಾಕಿಸ್ತಾನ ಹಿಂದಕ್ಕೆ ಸರಿದಿರುವುದು ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಪ್ರವೇಶಿಸಲು ಭಾರತಕ್ಕೆ ಅವಕಾಶ ಮಾಡಿಕೊಟ್ಟಿದೆ. ಇದು ಈ ಹಿಂದೆ ಪಾಕಿಸ್ತಾನವನ್ನು ಎರಡು ಭಾಗಗಳಾಗಿ ಮಾಜಿ ಪ್ರಧಾನಿ ಇಂದಿರಾ ಗಾಂಧಿ ವಿಭಜಿಸಿದಂತೆ ಈಗ ಪ್ರಧಾನಿ ಮೋದಿ ಪಿಓಕೆಯನ್ನು ಮತ್ತೆ ವಶಕ್ಕೆ ಪಡೆಯಬಹುದು ಎಂಬ ಸಾಧ್ಯತೆಯನ್ನು ತೆರೆದಿಟ್ಟಿದೆ. ಇದಕ್ಕಾಗಿ ಮೋದಿ ಸರ್ಕಾರ ಹಾಗೂ ಸೇನೆ ಸಿದ್ಧತೆ ನಡೆಸಿವೆ ಎನ್ನಲಾಗುತ್ತಿದೆ.

ಒಟ್ಟಿನಲ್ಲಿ, ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಮೋದಿ ಸರ್ಕಾರ ಪಾಕ್ ಆಕ್ರಮಿತ ಕಾಶ್ಮೀರವನ್ನು ಮರುವಶಕ್ಕೆ ಚಿಂತನೆ ನಡೆಸಿದೆ. ಇದಕ್ಕೆ ಶಿಮ್ಲಾ ಒಪ್ಪಂದವನ್ನು ಪಾಕಿಸ್ತಾನ ರದ್ದುಗೊಳಿಸಿರುವುದು ಕೂಡ ಭಾರತಕ್ಕೆ ಹೆಲ್ಪ್ ಆಗಲಿದೆ. ಇಂದಿರಾ ಗಾಂಧಿ ಅವರಂತೆ ಮೋದಿ ದೊಡ್ಡ ನಿರ್ಧಾರ ತೆಗೆದುಕೊಂಡು ಪಾಕ್‌ಗೆ ಪಾಠ ಕಲಿಸ್ತಾರಾ? ಪಿಓಕೆಯನ್ನು ವಶಕ್ಕೆ ಪಡೆಯುತ್ತಾರಾ? ಎಂಬುದನ್ನು ಕಾದು ನೋಡಬೇಕಿದೆ.

### ಮೋದಿ ಸರ್ಕಾರದ ಮೇನ್ ಅಜೆಂಡಾ ಈಡೇರುತ್ತಾ?

ಈಗ ಶಿಮ್ಲಾ ಪ್ಯಾಕ್ಟ್ ಅನ್ನು ಪಾಕಿಸ್ತಾನ ರದ್ದುಗೊಳಿಸಿರುವುದು ಗಡಿ ನಿಯಂತ್ರಣ ರೇಖೆಯ ಸ್ಥಿತಿಯನ್ನು ಬದಲಾಯಿಸಲು ಭಾರತಕ್ಕೆ ಅವಕಾಶ ಸಿಕ್ಕಂತಾಗಿದೆ. ಇದರಿಂದ ಭಾರತ ಪಾಕ್ ಆಕ್ರಮಿತ ಕಾಶ್ಮೀರವನ್ನು ಪ್ರವೇಶಿಸಬಹುದಾಗಿದ್ದು, ಅಫ್ಘಾನಿಸ್ತಾನದ ಗಡಿವರೆಗೂ ಭಾರತದ ಸೇನೆ ತೆರಳಬಹುದಾಗಿದೆ. ಇದು ಎರಡು ದೇಶಗಳ ನಡುವೆ ಸೇನಾ ಮುಖಾಮುಖಿಗೆ ಕಾರಣವಾಗಬಹುದು. ಮೋದಿ ಸರ್ಕಾರ ಮತ್ತು ಭಾರತೀಯ ಜನತಾ ಪಕ್ಷದ ಪ್ರಮುಖ ಅಜೆಂಡಾಗಳಲ್ಲಿ ಪಿಓಕೆಯನ್ನು ಮರುವಶಪಡಿಸಿಕೊಳ್ಳುವುದು ಒಂದಾಗಿದೆ. ಈ ಬಗ್ಗೆ ಮೋದಿ, ಅಮಿತ್ ಶಾ, ರಾಜನಾಥ್ ಸಿಂಗ್ ಸೇರಿ ಹಲವರು ಹೇಳಿಕೆ ನೀಡಿದ್ದು, ಪಿಓಕೆ ಭಾರತದಲ್ಲಿ ಶೀಘ್ರದಲ್ಲೇ ವಿಲೀನವಾಗಲಿದೆ ಎಂದು ಹೇಳಿದ್ದರು. ಇದರ ಬೆನ್ನಲ್ಲೇ ಪಿಓಕೆ ವಶಕ್ಕೆ ಪಡೆಯಲು ಭಾರತಕ್ಕೆ ಈಗ ಅವಕಾಶ ಸಿಕ್ಕಿದೆ. ಈಗಾಗಲೇ ಸಿಂಧೂ ಜಲ ಒಪ್ಪಂದವನ್ನು ರದ್ದುಗೊಳಿಸಿರುವ ಭಾರತ ಪಾಕಿಸ್ತಾನವನ್ನು ಪ್ರತಿ ಹನಿ ನೀರಿಗಾಗಿ ಹೋರಾಡುವಂತೆ ಮಾಡಿದೆ.

### ಪಾಕಿಸ್ತಾನಕ್ಕೂ ಪಾಠ ಕಲಿಸ್ತೀವಿ

ಪಹಲ್ಗಾಮ್ ದಾಳಿ ಬಗ್ಗೆ ಪ್ರತಿಕ್ರಿಯಿಸಿದ್ದ ಪ್ರಧಾನಿ ಮೋದಿ, ಪಹಲ್ಗಾಮ್ ದಾಳಿ ನಡೆಸಿದ ಉಗ್ರರು ಹಾಗೂ ದಾಳಿಗೆ ಸಂಚು ರೂಪಿಸಿದವರಿಗೆ ಕಲ್ಪನೆಗೂ ಮೀರಿದ ಶಿಕ್ಷೆ ಆಗಲಿದೆ. ಅವರು ಎಲ್ಲೇ ಇರಲಿ ಹುಡುಕಿ, ಹುಡುಕಿ ಹೊಡೆದುರುಳಿಸುತ್ತೇವೆ ಎಂದು ನೇರ ಎಚ್ಚರಿಕೆಯನ್ನು ನೀಡಿದ್ದರು. ಈ ಮಾತುಗಳು ಕೇವಲ ಉಗ್ರರನ್ನು ಶಿಕ್ಷಿಸುವ ಬಗ್ಗೆ ಇದ್ದಿಲ್ಲ, ಪಾಕಿಸ್ತಾನಕ್ಕೆ ಪಾಠ ಕಲಿಸುವ ಬಗ್ಗೆಯೂ ಇದ್ದವು. ಅಂದ್ರೆ ಕೇವಲ ಉಗ್ರರ ಶಿಬಿರಗಳು ಮಾತ್ರವಲ್ಲದೇ, ಉಗ್ರರಿಗೆ ಪ್ರೋತ್ಸಾಹ ನೀಡುತ್ತಿರುವ ಸೇನೆಗೂ ಪಾಠ ಕಲಿಸುವ ಬಗ್ಗೆ ಮೋದಿ ಸುಳಿವನ್ನು ನೀಡಿದ್ದರು. ಪಾಕಿಸ್ತಾನ ಸೇನಾ ಮುಖ್ಯಸ್ಥ ಆಸೀಫ್ ಮುನೀರ್ ನೀಡಿದ ಹೇಳಿಕೆಯೇ ಪಹಲ್ಗಾಮ್ ದಾಳಿಗೆ ಕಾರಣವಾಗಿರುವುದು ಭಾರತದ ಕಣ್ಣು ಕೆಂಪಾಗಿಸಿದೆ.



### ಶಿಮ್ಲಾ ಒಪ್ಪಂದ ರದ್ದುಗೊಳಿಸಿದ್ದು ಭಾರತಕ್ಕೆ ಪ್ಲಸ್!

ಪಾಕ್ ಆಕ್ರಮಿತ ಕಾಶ್ಮೀರ ಭಾರತಕ್ಕೆ ಸೇರುವ ಸಮಯ ಹತ್ತಿರ ಬಂದಿದೆ ಎಂದು ಹೇಳಲು ಪ್ರಮುಖ ಕಾರಣ ಪಹಲ್ಗಾಮ್ ದಾಳಿ ಹಾಗೂ ಪಾಕಿಸ್ತಾನ ಶಿಮ್ಲಾ ಒಪ್ಪಂದಿಂದ ಹೊರಬಂದಿರುವುದು. ಶಿಮ್ಲಾ ಒಪ್ಪಂದಕ್ಕೆ ಗೌರವ ಕೊಡುತ್ತಿದ್ದ ಭಾರತ 1971ರ ಯುದ್ಧದ ಬಳಿಕ ಎರಡು ದೇಶಗಳ ನಡುವೆ ಎಳೆದಿದ್ದ ಗಡಿ ನಿಯಂತ್ರಣ ರೇಖೆಯನ್ನು ದಾಟುತ್ತಿದ್ದಿಲ್ಲ. ಆದರೆ, ಈಗ ಪಾಕಿಸ್ತಾನವೇ ಶಿಮ್ಲಾ ಒಪ್ಪಂದವನ್ನು ರದ್ದುಗೊಳಿಸಿರುವುದು ಭಾರತಕ್ಕೆ ಲಾಭ ತರುವ ಸಾಧ್ಯತೆ ಇದೆ. ಶಿಮ್ಲಾ ಒಪ್ಪಂದ ರದ್ದಾಗಿರುವುದು ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಭಾರತಕ್ಕೆ ಹೆಚ್ಚಿನ ಮಿಲಿಟರಿ ಸ್ವಾತಂತ್ರ್ಯವನ್ನು ನೀಡುತ್ತದೆ. ಸೇನಾ ಕಾರ್ಯಾಚರಣೆ ವೇಳೆ ಭಾರತೀಯ ಸೇನೆ ಗಡಿಯನ್ನು ದಾಟುವ ಸಾಧ್ಯತೆ ಇದೆ. 1999ರಲ್ಲಿ ಕಾರ್ಗಿಲ್ ಯುದ್ಧದ ವೇಳೆ ಪಾಕಿಸ್ತಾನ ಶಿಮ್ಲಾ ಒಪ್ಪಂದ ಉಲ್ಲಂಘಿಸಿ ಎಲ್‌ಒಸಿಯನ್ನು ದಾಟಿತ್ತು. ಆದರೆ, ಭಾರತವೂ ಯಾವತ್ತೂ ಒಪ್ಪಂದವನ್ನು ಉಲ್ಲಂಘಿಸಿದ್ದಿಲ್ಲ.

## ಕೃಷಿಗೆ, ಕುಡಿಯಲು ನೀರಿಲ್ಲ; ಕಾವೇರಿ ಆರತಿ ಹೆಸರಲ್ಲಿ ಕೋಟ್ಯಂತರ ರೂ. ದುಂದುವೆಚ್ಚ

• ಉದಯವಾಹಿನಿ, ಮಳವಳ್ಳಿ

ಜಿಲ್ಲೆಯ ಬಹುತೇಕ ಹಳ್ಳಿಗಳಿಗೆ ಕುಡಿಯಲು ಶುದ್ಧ ಕಾವೇರಿ ನೀರಿಲ್ಲ, ರೈತರ ಜಮೀನುಗಳಿಗೆ ವ್ಯವಸಾಯ ಮಾಡಲು ಸಮರ್ಪಕವಾಗಿ ನೀರು ಕೊಡಲು ಸಾಮರ್ಥ್ಯವಿಲ್ಲದ ಸರಕಾರ ಕಾವೇರಿ ಆರತಿ ಹೆಸರಲ್ಲಿ ಸಾರ್ವಜನಿಕರ 92 ಕೋಟಿ ರೂ.ಗಳನ್ನು ದುಂದುವೆಚ್ಚ ಮಾಡುತ್ತಿದ್ದು, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಹಣದ ಲೂಟಿಗೆ ರಹದಾರಿಯಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಜನವಾದಿ ಮಹಿಳಾ ಸಂಘಟನೆಗಳು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ಸರ್ವಾಧಿಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿವೆ. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕರಾದ ಎನ್.ಎಲ್. ಭರತ್



ರಾಜ್ ಮಾತನಾಡಿ, ''ಕೆರೆ ಕಟ್ಟೆ,ನದಿಗಳು, ರಾಜ ಕಾಲುವೆಗಳನ್ನು ಒತ್ತುವರಿ ಮಾಡಿಕೊಂಡವರ ಪೈಕಿ ಬಲಾಢ್ಯ ರಾಜಕಾರಣಿಗಳೇ ಸೇರಿದ್ದಾರೆ,'' ಎಂದು ಆರೋಪಿಸಿದರು.

''ನದಿಗಳಿಗೆ ಕೈಗಾರಿಕೆಗಳಿಂದ ಬರುವ ಕಲುಷಿತ ನೀರು ಸೇರ್ಪಡೆಯಾಗುತ್ತಿದೆ. ಬೆಂಗಳೂರಿಗೆ ಆರನೇ ಹಂತದ ಕುಡಿಯುವ ನೀರು ಯೋಜನೆಗೆ ಹೋಗುತ್ತಿದೆ ನಾಲ್ವಡಿ ಕೃಷ್ಣದೇವರಾಯರು ಕೆ.ಆರ್.ಎಸ್. ಅಣೆಕಟ್ಟೆಯನ್ನು ನಿರ್ಮಾಣ ಮಾಡಿದ್ದು, ಮಂಡ್ಯ ಜಿಲ್ಲೆಯಲ್ಲಿ ಕೃಷಿಗೆ ನೀರು ಕೊಡುವುದರ ಮೂಲಕ ಆಹಾರ ಧಾನ್ಯಗಳನ್ನು ಬೆಳೆಯುವ ಉದ್ದೇಶದಿಂದ ಆದರೆ ಅವರ ಉದ್ದೇಶವನ್ನೆ ಆಳುವ ಸರಧಿಕಾರಗಳು ಹಾಳು ಮಾಡಿವೆ,'' ಎಂದರು. ''ಕಾಲುವೆಗಳ ದುರಸ್ತಿ ಮಾಡಲು ಕೆರೆ ಕಟ್ಟೆಗಳ ಹೂಳೆತ್ತಿಸಲು ಆಗುತ್ತಿಲ್ಲ, ಸರ್ವಾಧಿಕಾರಿ ಕಚೇರಿಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಮಾಡುತ್ತಿಲ್ಲ, ಹಲವಾರು ಪಟ್ಟಣಗಳಲ್ಲಿ ಸಾರ್ವಜನಿಕ ಶೌಚಾಲಯಗಳಿಲ್ಲ, ಸರಧಿಕಾರಿ ಆಸ್ಪತ್ರೆಗಳಲ್ಲಿ ಔಷಧಿ. ಎಕ್ಸರೆ, ಸ್ಕ್ಯಾನಿಂಗ್ ಸೌಲಭ್ಯಗಳು ಇಲ್ಲದೆ ರೋಗಿಗಳು ಪರದಾಡುತ್ತಿದ್ದಾರೆ. ಸ್ವಾತಂತ್ರ್ಯ ಬಂದು 78 ವರ್ಷಗಳು ಕಳೆದರೂ ಹಲವು ಹಳ್ಳಿಗಳಿಗೆ ಬಸ್ ಸೌಕರ್ಯವೂ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಕಾವೇರಿ ಆರತಿ ಮಾಡುವುದು ಸಮಂಜಸವಲ್ಲ ಕೂಡಲೇ ಈ ಕುರಿತು ಎಚ್ಚೆತ್ತುಕೊಂಡು ರದ್ದುಪಡಿಸಬೇಕು,'' ಎಂದು ಆಗ್ರಹಿಸಿದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ, ಜಿಲ್ಲಾಕಾರ್ಯದರ್ಶಿ ಸುಶೀಲ, ಅಧ್ಯಕ್ಷರಾದ ಡಿಕೆ ಲತಾ, ಜಯಶೀಲಾ ಕರ್ನಾಟಕ ಪ್ರಾಂತ ರೈತ ಸಂಘದ ಗುರುಸ್ವಾಮಿ, ಎ ಎಲ್.ಶಿವಕುಮಾರ್, ಚಿಕ್ಕಸ್ವಾಮಿ. ಹಿಪ್ಜುಲ್ಲಾ, ವಿಷಕಂಠ ಮಹಾದೇವಮ್ಮ, ಮಹಾದೇವು ಸೇರಿದಂತೆ ಹಲವು ರೈತರು ಮಹಿಳೆಯರು ಭಾಗವಹಿಸಿದ್ದರು.

## ಬೆಳಗಾವಿಯಲ್ಲಿ ಪೊಲೀಸ್ ಅಧಿಕಾರಿ ಮೇಲೆ ಸಿದ್ದರಾಮಯ್ಯ ಗರಂ!

### ■ ಏಯ್.. ಯಾರಿಲ್ಲಿ ಎಸ್‌ಪಿ?, ವೇದಿಕೆ ಮೇಲೆಯೇ ಹಿರಿಯ ಪೊಲೀಸ್‌ಗೆ ಹೊಡೆಯಲು ಹೋದ ಸಿದ್ದರಾಮಯ್ಯ

• ಉದಯವಾಹಿನಿ, ಬೆಳಗಾವಿ

ಗಡಿನಾಡು ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಸಿಎಂ ಸಿದ್ದರಾಮಯ್ಯ ಅವರು ಪೊಲೀಸ್ ಅಧಿಕಾರ ವಿರುದ್ಧವೇ ಗರಂ ಆದ ಘಟನೆ ನಡೆಯಿತು. ಸಿಟ್ಟಾದ ಸಿಎಂ ಪೊಲೀಸ್ ಅಧಿಕಾರಿಗೆ ಹೇ ಎಂದು ಗದರಿ ಕೈ ಎತ್ತಿ ಹೊಡೆಯಲು ಮುಂದಾದರು. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ವೈರಲ್ ಆಗಿದೆ.

ಕಾಂಗ್ರೆಸ್‌ನಿಂದ ಆಯೋಜಿಸಿದ್ದ ಕೇಂದ್ರ ಸರ್ಕಾರದ ಬೆಲೆ ಏರಿಕೆ, ಜನ ವಿರೋಧಿ ನೀತಿ ಹಾಗೂ ದೇಶ ವಿರೋಧಿ ಆಡಳಿತ ವಿರೋಧಿ ಖಂಡನಾ ಸಮಾವೇಶದಲ್ಲಿ ಈ ಘಟನೆ ನಡೆಯಿತು.

ಕೇಂದ್ರ ಸರ್ಕಾರದ ಬೆಲೆ ಏರಿಕೆ ಧೋರಣೆಯನ್ನು ಖಂಡಿಸಿ ಕಾಂಗ್ರೆಸ್ ಆಯೋಜಿಸಿರುವ ಜನಾಕ್ರೋಶ ಸಭೆಯಲ್ಲಿ ಸಿಎಂ ಭಾಷಣ ಮಾಡುವಾಗ, ಬಿಜೆಪಿಯ ಮಹಿಳಾ ಮೋರ್ಚಾದಿಂದ ಪ್ರತಿಭಟನೆ ಮಾಡಿ ಅಡ್ಡಿಪಡಿಸಲಾಯಿತು. ಜತೆಗೆ ಬಿಜೆಪಿ ಕಾರ್ಯಕರ್ತರು ವೇದಿಕೆ ಕೆಳಗೆ ಗಲಾಟೆ ಮಾಡುತ್ತಿದ್ದರು. ಜತೆಗೆ ಕಾರ್ಯಕರ್ತರು ಓಡಾಟ ಹೆಚ್ಚಿತ್ತು. ಈ ವೇಳೆ ಸಿಟ್ಟಾದ ಸಿಎಂ ಸಿದ್ದರಾಮಯ್ಯ ಪೊಲೀಸರ ಮೇಲೆ ಗರಂ ಆದರು.

ಸಿದ್ದರಾಮಯ್ಯ ಹೇಳಿಕೆಗೆ ಉತ್ತರ ಕೊಡದೇ, ಕೇಂದ್ರದ ಜೊತೆ ಇರ್ತೀವೆ ಎಂದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೋಗುವವರಾದರೆ ಹೋಗಲಿ, ಕುಳಿತುಕೊಳ್ಳುವವರಾದರೆಕುಳಿತುಕೊಳ್ಳಲಿ. ಹೇ ಕುಳಿತುಕೊಳ್ಳಿ. ಯಾರು ಅದು ಎಂದು ಕೇಳಿದರು.




**ಹೇ ಎಂದು ಗದರಿ ಕೈ ಎತ್ತಿದ ಸಿಎಂ**

ಹೇ ಪೊಲೀಸ್ ಬಾರಯ್ಯ ಇಲ್ಲಿ ಯಾವನು ಅವನು ಬಾರಯ್ಯ ಇಲ್ಲಿ. ಯಾವನು ಅವನು ಎಸ್‌ಪಿ. ಏನು ಮಾಡ್ತಾ ಇದ್ದೀರಾ ಇಲ್ಲಿ ಎಂದು ಪ್ರಶ್ನೆ ಮಾಡಿದರು. ಆ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ವೇದಿಕೆ ಮೇಲೆ ಬಂದು ಸಿಎಂ ಬಳಿ ಆಗಮಿಸಿದಾಗ ಗದರಿದ ಸಿಎಂ ಅವರ ಮೇಲೆ ಕೈ ಎತ್ತಲು ಮುಂದಾದರು. ಅಷ್ಟರದಲ್ಲಿ ವೇದಿಕೆ ಮೇಲೆ ಇದ್ದ ಸಚಿವ ಎಂ ಬಿ ಪಾಟೀಲ್, ಎಚ್‌ಕೆ ಪಾಟೀಲ್ ಅವರು ಸಿಎಂ ಬಳಿ ಮಾತನಾಡಿ ಪರಿಸ್ಥಿತಿ ತಿಳಿಗೊಳಿಸಿದರು. ಆ ಬಳಿಕ ಸಿಎಂ ಅಲ್ಲಿಯೇ ಇದ್ದ ಸಚಿವ ಲಕ್ಷ್ಮೀ ಹೆಬ್ಬಾಳ್ಕರ್ ಮೇಲೆಗೂ ಸಿಟ್ಟಾದರು. ಅವರನ್ನು ಕರೆದು ಪರಿಸ್ಥಿತಿ ನಿಭಾಯಿಸಲು ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಆರ್‌ಎಸ್‌ಎಸ್ ಹಾಗೂ ಬಿಜೆಪಿಗರನ್ನು ನೋಡಿಕೊಳ್ಳಿ ಅಂತಾ ನಮ್ಮ ಕಾರ್ಯಕರ್ತರಿಗೆ ಸೂಚನೆ ನೀಡಿದರೆ ಸಾಕು, ಇವರಿಗೆ ಬಾಲ ಬಿಚ್ಚದಂತೆ ಮಾಡ್ತಾರೆ. ಬಾಲ ಬಿಚ್ಚಲು ಸಾಧ್ಯವೇ ಇಲ್ಲ ಎಂದು ಹೇಳಿದರು.

ಬಿಜೆಪಿಯವರಿಂದ ಶಾಂತಿ ಕದಡುವ, ಸಮಾಜದಲ್ಲಿ ಬೆಂಕಿ ಹಚ್ಚುವ ಕೆಲಸ ಮಾಡಲಾಗುತ್ತದೆ. ಅವರ ಗೊಡ್ಡು ಬೆದರಿಕೆಗಳಿಗೆ ನಾವು ಹೆದರಲ್ಲ. ಸಾರ್ವಜನಿಕವಾಗಿ ಅವರನ್ನು ಎದುರಿಸುವ ಶಕ್ತಿ ನಮಗಿದೆ. ಈ ರೀತಿ ದುಷ್ಕೃತ್ಯ ಮಾಡುವವರಿಗೆ ಇಡೀ ಕಾಂಗ್ರೆಸ್ ನಿಂದ ಧಿಕ್ಕಾರ ಎಂದು ಸಿಎಂ ಕಿಡಿಕಾರಿದರು.

### ರಾಜ್ಯದಲ್ಲಿ ಬಿಜೆಪಿಯವರಿಗೆ ಒಂದೇ ಒಂದು ಸಭೆ ಮಾಡಲು ಬಿಡಲ್ಲ

ರಾಜ್ಯದಲ್ಲಿ ಬಿಜೆಪಿಯವರಿಗೆ ಒಂದೇ ಒಂದು ಸಭೆ ಮಾಡಲು ಬಿಡಲ್ಲ. ಇದು ಕಾಂಗ್ರೆಸ್ ಪಕ್ಷದ ಪ್ರತಿಜ್ಞೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಬಿಜೆಪಿ ನಾಯಕರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಸಿಎಂ ಸಿದ್ದರಾಮಯ್ಯ ಭಾಷಣದ ವೇಳೆ ಬಿಜೆಪಿ ಕಾರ್ಯಕರ್ತರ ಅಡ್ಡಿ ವಿಚಾರವಾಗಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಿಜೆಪಿ ನಾಯಕರಿಗೆ ಒಂದು ಹೇಳಲು ಬಯಸುತ್ತೇನೆ. ನೀವು ಒಂದು ಸಭೆ ಮಾಡಲು ಬಿಡಲ್ಲ. ನಾನು ಕಾರ್ಯಕರ್ತರಿಗೆ ಒಂದು ಸಂದೇಶ ಕೊಡುತ್ತೇವೆ. ಇದೇ ವರ್ತನೆ ಮುಂದುವರಿಸಿದರೆ ಹುಷಾರ್ ಎಂದು ವಾರ್ನಿಂಗ್ ಕೊಟ್ಟರು. ನಿಮಗಿಂತ ಕಾರ್ಯರೂಪ ಮಾಡುವ ಶಕ್ತಿ ಜನ ನನಗೆ ಕೊಟ್ಟಿದ್ದಾರೆ. ಬಿಜೆಪಿ ಕಾರ್ಯಕರ್ತರಿಗೆ ಬುದ್ದಿವಾದ ಹೇಳಿದ್ರೆ ಸರಿ, ಇದು ವಾರ್ನಿಂಗ್ ಎಂದು ಖಡಕ್ ಸಂದೇಶ ಕೊಟ್ಟರು.

### ಪೊಲೀಸರೊಂದಿಗೆ ಸಚಿವೆ ವಾಗ್ವಾದ..!



ಘಟನೆಯ ನಂತರ ಸಮಾವೇಶದ ಹೊರಗೆ ಬಿಜೆಪಿ ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಜಟಾಪಟಿ ನಡೀತು. ಸ್ಥಳಕ್ಕೆ ಎಂಟ್ರಿಕೊಟ್ಟ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಪೊಲೀಸರಿಗೆ ಅವಾಜ್ ಹಾಕಿದ್ರು. ಬಿಜೆಪಿ ಕಾರ್ಯಕರ್ತರನ್ನ ಒಳಗೆ ಹೇಗೆ ಬಿಟ್ರಿ..? ನೀವು ಎಲ್ಲಿಗೆ ಹೋಗಿದ್ರಿ ಎಂದು ಡಿಸಿಪಿ ರೋಹನ್ ಜಗದೀಶ್ ಅವರಿಗೆ ಏರುಧ್ವನಿಯಲ್ಲಿ ಕ್ಲಾಸ್ ತೆಗೆದುಕೊಂಡ್ರು. ಸಿಎಂ ಸಿದ್ದರಾಮಯ್ಯ ಭಾಷಣಕ್ಕೆ ಅಡ್ಡಿ ಪಡಿಸಿದ ಕುರಿತು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪ್ರತಿಕ್ರಿಯಿಸಿದ್ದು, ನಮ್ಮಲ್ಲೂ ಕಾರ್ಯಕರ್ತರು ಇದ್ದಾರೆ. ಇಂತಹ ಬೆದರಿಕೆ ನಾವು ಹೆದರಲ್ಲ ಅಂದ್ರು, ಇನ್ನೂ, ಬಿಜೆಪಿಯವರಿಗೆ ಒಂದೇ ಒಂದು ಸಭೆ ಮಾಡಲು ಬಿಡಲ್ಲ ಎಂದರು.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,753/Gram24ct ₹8,940/Gram22ct | ಬೆಳ್ಳಿ: ₹100.50/Gram



● ಉದಯವಾಹಿನಿ, ಬೆಂಗಳೂರು: ನಾಡಿನ ಛಾಯಾಗ್ರಾಹಕರನ್ನು ಕಾರ್ಮಿಕ ಇಲಾಖೆಯಲ್ಲಿ ಗುರುತಿಸಿ, ಛಾಯಾಗ್ರಾಹಕರಿಗೆ ಸಾಮಾಜಿಕ ಭದ್ರತೆ ಕಲ್ಪಿಸಿಕೊಟ್ಟ ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಸಂತೋಷ್ ಎಸ್. ಲಾಡ್ ರವರನ್ನು ನಾಡಿನ ಸಮಸ್ತ ಛಾಯಾಗ್ರಾಹಕರ ಪರವಾಗಿ ಹೃದಯ ಪೂರ್ವಕವಾಗಿ ಕೆಪಿಎ ವತಿಯಿಂದ ಅಭಿನಂದಿಸಲಾಯಿತು. ಕರ್ನಾಟಕ ಛಾಯಾಚಿತ್ರ ಗ್ರಾಹಕರ ಸಂಘದ ಅಧ್ಯಕ್ಷರಾದ ಎಚ್ ಎಸ್ ನಾಗೇಶ್, ಸಂಡೂರು ತಾಲ್ಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷರಾದ ಎಸ್‌ಎಂ ವಿನಯ್, ಕೆಪಿಎ ಮಾಜಿ ನಿರ್ದೇಶಕರು ಚಂದ್ರಶೇಖರ್ ಬೆಳಗುಂಬ ಹಾಲಪ್ಪ, ಕೆಪಿಎ ಗಣೇಶ್ ಉಪಸ್ಥಿತರಿದ್ದರು.

# ಪ್ರಾಂಶುಪಾಲರಾದ ಸಿ.ವೆಂಕಟಾಚಲಯ್ಯ ರವರಿಗೆ ಅಭಿನಂದನಾ ಸಮಾರಂಭ

## ಉತ್ತಮ ಉದ್ದೇಶ ಇಟ್ಟುಕೊಂಡು ಮಕ್ಕಳ ಶಿಕ್ಷಣಕ್ಕೆ ಅವರ ಹಗಲಿರುಳ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದರು

● ಉದಯವಾಹಿನಿ, ಶ್ರೀರಾಮಪುರ

ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜು ಪ್ರಾಂಶುಪಾಲರಾದ ಸಿ.ವೆಂಕಟಾಚಲಯ್ಯರವರ ಸೇವಾ ನಿವೃತ್ತಿಯಾದ ಶುಭ ಸಂದರ್ಭದಲ್ಲಿ ಕಾಲೇಜಿನ ಶಿಕ್ಷಕ ವೃಂದವರು ಆತ್ಮೀಯವಾಗಿ ಅಭಿನಂದಿಸಿ, ಸನ್ಮಾನಿಸಿದರು.

**ವಿದ್ಯೆ ನೀಡುವಲ್ಲಿ ಬಡತನ ವಿರಬಾರದು**

ಸಿ.ವೆಂಕಟಾಚಲಯ್ಯರವರು ಬಿಬಿಎಂಪಿ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಆರಂಭಿಸಿದರು. ಬಿಬಿಎಂಪಿ ಶಾಲೆಯ ಮಕ್ಕಳು ವಿದ್ಯಾವಂತರಾಗಬೇಕು, ಅವರ ಸಹ ಶ್ರೀಮಂತರ ಮಕ್ಕಳಂತೆ ಉನ್ನತ ಸ್ಥಾನ ಮಾನ ಸಿಗಬೇಕು. ನಮ್ಮಲ್ಲಿ ಬಡತನವಿರಬಹುದು, ವಿದ್ಯೆ ನೀಡುವಲ್ಲಿ ಬಡತನ ಇರಬಾರದು ಎಂಬ ಉತ್ತಮ ಉದ್ದೇಶ ಇಟ್ಟುಕೊಂಡು ಮಕ್ಕಳ



ಶಿಕ್ಷಣಕ್ಕೆ ಅವರು ಹಗಲಿರುಳ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದರು. ಕಳೆದ ನಾಲ್ಕು ವರ್ಷಗಳಿಂದ ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಅವರ ಆಡಳಿತ ಅವಧಿಯಲ್ಲಿ ದ್ವಿತೀಯ ಪಿ.ಯು.ಸಿ.ಯಲ್ಲಿ ಉತ್ತಮ ಫಲಿತಾಂಶ ಬಂದಿದೆ.

> ಮಕ್ಕಳು ದೇವರ ಸಮಾನ ಅವರಿಗೆ ತಂದೆ, ತಾಯಿ ಮತ್ತು ಗುರುಗಳ ಮಾರ್ಗದರ್ಶನ ಲಭಿಸಿದರೆ ಉತ್ತಮ ಪ್ರಜೆಯಾಗಿ ದೇಶ ಕಟ್ಟಬಲ್ಲರು. ವಿದ್ಯೆ ಯಾರು ಕದಿಯಲಾರದ ಅಮೂಲ್ಯ ಜ್ಞಾನ, ಬಿಬಿಎಂಪಿ ಬರುವ ಮಕ್ಕಳು ಬಡವರು, ಮಧ್ಯಮವರ್ಗದವರು ಅವರ ಬಳಿ ಅಪಾರ ಜ್ಞಾನವಿರುತ್ತಾದೆ, ಗುರುಗಳಾಗಿ ನಾವು ನಮ್ಮಲ್ಲಿರುವ ಜ್ಞಾನವನ್ನು ಅವರಿಗೆ ಧಾರೆಎರೆದರೆ ಸಾಕು ಅವರು ಸಮಾಜದಲ್ಲಿ ಉತ್ತಮ ನಾಗರಿಕರಿಗೆ ಸೇವೆ ಮಾಡುತ್ತಾರೆ
> – ಸಿ.ವೆಂಕಟಾಚಲಯ್ಯ, ಪ್ರಾಂಶುಪಾಲ

## ಕಾರ್ಗೋ ಸಂಸ್ಥೆಯ ಮಾಲೀಕರನ್ನು ಅಪಹರಿಸಿ ಕೊಲೆ

● ಉದಯವಾಹಿನಿ, ನೆಲಮಂಗಲ

ಹೋಟೆಲ್‌ಗೆ ನುಗ್ಗಿ ಮಾರಕಾಸ್ತ್ರಗಳಿಂದ ಬೆದರಿಸಿ ಕಾರ್ಗೋ ಸಂಸ್ಥೆಯೊಂದರ ಮಾಲೀಕರನ್ನು ಅಪಹರಿಸಿ ಹಂತಕರು ಕೊಲೆ ಮಾಡಿರುವ ಘಟನೆ ಕಳೆದ ರಾತ್ರಿ ಇಲ್ಲಿ ನಡೆದಿದೆ. ತುಮಕೂರು ಮೂಲದ ದಿಲೀಪ್ ಕೊಲೆಯಾದ ಮಾಲೀಕ. ತಾಲ್ಲೂಕಿನ ದಾಬಸ್‌ಪೇಟೆಯಲ್ಲಿ ಕಾರ್ಗೋ ಸಂಸ್ಥೆಯನ್ನು ನಡೆಸುತ್ತಿರುವ ದಿಲೀಪ್ ಮೊದಲ ಪತ್ನಿಯನ್ನು ತೊರೆದು ಸೋಲೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸ ಮಾಡುತ್ತಿದ್ದರು. ಇತ್ತೀಚೆಗೆ ಮನೆ ಮಾಲೀಕನ ಪತ್ನಿ ಅಮೃತ ಅವರ ಪರಿಚಯವಾಗಿದ್ದು, ನಂತರ ಅವರು ತಮ್ಮ ಪತಿಯನ್ನು ತೊರೆದು ದಿಲೀಪ್‌ರೊಡನೆ ಬಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಇದರಿಂದ ಹಲವರ ದ್ವೇಷ ಬೆಳೆಸಿಕೊಂಡಿದ್ದ ದಿಲೀಪ್ ಗೆ ಹಲವಾರು ಬೆದರಿಕೆ ಕರೆಗಳು ಬರುತ್ತಿತ್ತು. ಎಂದಿನಂತೆ ನೆಲಮಂಗಲದ ಗಾರ್ಡನ್ ಹೋಟೆಲ್‌ನಲ್ಲಿ ಅಮೃತ ಅವರೊಂದಿಗೆ ಊಟ ಮಾಡಲು ಹೋದಾಗ ಸುಮಾರು ಐದಾರು ಜನ ಮಾರಕಾಸ್ತ್ರಗಳನ್ನು ಹಿಡಿದು ನುಗ್ಗಿದ್ದಾರೆ. ನಂತರ ದಿಲೀಪ್‌ನನ್ನು ಅಲ್ಲಿಂದ ಬೆದರಿಸಿ ಕರೆದೊಯ್ದಿದ್ದು, ತುಮಕೂರಿನ ಬಳಿ ಸೋಮವಾರ ಬೆಳಿಗ್ಗೆ ಆತನ ಶವ ಪತ್ತೆಯಾಗಿದೆ. ಅಮೃತ ಅವರ ಕುಟುಂಬದವರು ಈ ಕೊಲೆ ಮಾಡಿಸಿರಬಹುದೆಂಬ ಶಂಕೆ ವ್ಯಕ್ತವಾಗಿದೆ. ನೆಲಮಂಗಲ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಕಸ ಎಸೆದಿದ್ದನ್ನು ಪ್ರಶ್ನಿಸಿದ್ದಕ್ಕೆ ಪ್ರಾಧ್ಯಾಪಕನಿಗೆ ಹಲ್ಲೆ: ಆರೋಪಿಗಳ ಬಂಧನ

● ಉದಯವಾಹಿನಿ, ಬೆಂಗಳೂರು

ಚಲಿಸುತ್ತಿದ್ದ ಆಟೊದಲ್ಲಿ ಕುಳಿತು ಕಸ ಎಸೆದು ಹೋಗುತ್ತಿದ್ದವರನ್ನು ತಡೆದು ಪ್ರಶ್ನಿಸಿದ್ದ ಪ್ರಾಧ್ಯಾಪಕರೊಬ್ಬರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಪೊಲೀಸರು ಬಂಧಿಸಿದ್ದಾರೆ. ಏಪ್ರಿಲ್ 21ರಂದು ದಯಾನಂದ ಸಾಗರ್ ಕಾಲೇಜಿನ ಪ್ರಾಧ್ಯಾಪಕ ಅರಬಿಂದೊ ಗುಪ್ತಾ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುಪ್ರಸಾದ್ (26), ಶರತ್ (23), ಅಮೃತ್ ಕುಮಾರ್ (24) ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆಟೋದಲ್ಲಿ ಕುಳಿತಿದ್ದ ಆರೋಪಿಗಳು ಕಸ, ಗಾಜುಗಳನ್ನು ರಸ್ತೆಗೆ ಎಸೆಯುತ್ತಿದ್ದರು. ಈ ಸಂದರ್ಭದಲ್ಲಿ ಬೈಕ್‌ನಲ್ಲಿ ಸಾಗುತ್ತಿದ್ದ ಅರಬಿಂದೊ ಗುಪ್ತಾ, ಈ ರೀತಿ ಕಸ ಎಸೆಯಬೇಡಿ, ಇತರೆ ವಾಹನಗಳಿಗೆ ತೊಂದರೆ ಆಗುವ ಸಾಧ್ಯತೆಯಿರುತ್ತದೆ ಎಂದು ಆರೋಪಿಗಳಿಗೆ ಸೂಚಿಸಿದ್ದರು. ಸಿಟ್ಟಿಗೆದ್ದ ಆರೋಪಿಗಳು ಆಟೋದಿಂದ ಇಳಿದು ಅವರ ಮೇಲೆ ಹಲ್ಲೆ ನಡೆಸಿದ್ದರು. ಕಸ, ಗಾಜುಗಳನ್ನು ರಸ್ತೆಗೆ ಎಸೆಯುತ್ತಿದ್ದನ್ನು ಪ್ರಶ್ನಿಸಿದ್ದಕ್ಕೆ ಮೂವರು ತಮ್ಮ ಮೇಲೆ ಹಲ್ಲೆ ಮಾಡಿದ್ದಾರೆ. 20-30 ವರ್ಷಗಳ ಹಿಂದೆ ಸುರಕ್ಷಿತ ನಗರ ಎಂದು ಬೆಂಗಳೂರನ್ನು ಕರೆಯಲಾಗುತ್ತಿತ್ತು. ಆದರೆ, ಇಂದು ಬೆಂಗಳೂರಿನ ಹೆಸರನ್ನು ಹಾಳು ಮಾಡಲಾಗುತ್ತಿದೆ. ಈ ರೀತಿಯ ಗೂಂಡಾವರ್ತನೆ ಸಹಿಸಲು ಸಾಧ್ಯವಿಲ್ಲ ಎಂದು ಅರಬಿಂದೊ ಗುಪ್ತಾ ತಿಳಿಸಿದ್ದರು.

## ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ: ಸೆಟ್‌ಬ್ಯಾಕ್ ನಿಯಮ ಸಡಿಲಿಕೆ; ಕಟ್ಟಡ ನಿರ್ಮಾಣ ಸುರಕ್ಷತೆಗೆ ಧಕ್ಕೆ ಎಂದ ತಜ್ಞರು

# ಕಟ್ಟಡ ಸುರಕ್ಷತೆ ನೆರೆಹೊರೆಯವರಿಗೆ ತೊಂದರೆ ಕಟ್ಟಿಟ್ಟ ಬುತ್ತಿ

● ಉದಯವಾಹಿನಿ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯನ್ನು ವಿಸ್ತರಿಸುವುದು, ಬೆಂಗಳೂರಿಗೆ ಸಂಬಂಧಿಸಿದಂತೆ ಗರಿಷ್ಠ ಏಳು ನಗರ ಪಾಲಿಕೆಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರುವ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ-2024ಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಒಪ್ಪಿಗೆ ನೀಡಿದ್ದಾರೆ. ಈ ಕಾಯ್ದೆಯಲ್ಲಿ ಕಟ್ಟಡಗಳ ಸುತ್ತ ಬಿಡಬೇಕಾದ ಜಾಗದ ನಿಯಮಗಳನ್ನು ಸಡಿಲಗೊಳಿಸಲಾಗಿದೆ. ಇದರಿಂದ ಮನೆಗಳ ಗಾತ್ರ, ಎತ್ತರ ಹೆಚ್ಚಾಗಬಹುದು. ಆದರೆ, ಈ ಬದಲಾವಣೆಗಳು ನಗರದ ನಾಗರಿಕರಿಗೆ ತೊಂದರೆ ಉಂಟುಮಾಡಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ. ಹೊಸದಾಗಿ ನಿರ್ಮಿಸುವ ವಸತಿ ಕಟ್ಟಡದ ಸೆಟ್‌ಬ್ಯಾಕ್ ನಿಯಮಗಳಿಗೆ ವಿನಾಯಿತಿ ಸಿಕ್ಕಿದೆ. ಈ ಯೋಜನೆ ತಕ್ಷಣಕ್ಕೆ ಜಾರಿಗೆ ತರುವುದಿಲ್ಲ, ಆದರೆ, ಇಂತಹ ನಿಯಮಗಳು ಮುಂದೆ ತೊಂದರೆ ತರಬಹುದು ಎಂದು ಸುಪ್ರೀಂ ಕೋರ್ಟ್ ಎಚ್ಚರಿಸಿದೆ.

**ಸುಪ್ರೀಂ ಕೋರ್ಟ್ ಎಚ್ಚರಿಕೆ**

**ಎಷ್ಟು ವಿನಾಯಿತಿ ಸಿಗಬಹುದು ಇದರಿಂದಾಗುವ ತೊಂದರೆ ಏನು?** ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಪ್ರಕಾರ, ವಸತಿ ಕಟ್ಟಡಗಳಿಗೆ ಶೇ.50ರಷ್ಟು, ವಾಣಿಜ್ಯ ಕಟ್ಟಡಗಳಿಗೆ ಶೇ.25ರಷ್ಟು ಸೆಟ್‌ಬ್ಯಾಕ್ ಅನ್ನು ಕಡಿಮೆ ಮಾಡಬಹುದು. ಇದರಿಂದ ನೆರೆಹೊರೆಯವರ ಖಾಸಗಿತನಕ್ಕೆ ತೊಂದರೆಯಾಗಬಹುದು. ಅವರ ಮನೆಗಳಿಗೆ ಗಾಳಿ, ಬೆಳಕು ಸರಿಯಾಗಿ ಬರದೇ ಇರಬಹುದು. ಈ ಕಾಯ್ದೆಯ ಸೆಕ್ಷನ್ 249ರ



ಉದಯವಾಹಿನಿ ಚಿತ್ರ

ಪ್ರಕಾರ, ನಿಯಮಗಳನ್ನು ಪಾಲಿಸದ ಕಟ್ಟಡಗಳನ್ನು ಸರಿಪಡಿಸುವ ಅಧಿಕಾರವನ್ನು ಮುನ್ಸಿಪಲ್ ಕಮಿಷನರ್ ಹೊಂದಿದ್ದಾರೆ. ಕಾಯ್ದೆ ಜಾರಿಗೆ ಬರುವ ಒಂದು ವರ್ಷದ ಮೊದಲು ಕಟ್ಟಲಾದ ಕಟ್ಟಡಗಳಿಗೂ ಇದು ಅನ್ವಯಿಸುತ್ತದೆ. ನಿಯಮ ಉಲ್ಲಂಘಿಸಿದರೆ, ಕಟ್ಟಡದ ಮಾರುಕಟ್ಟೆ ಬೆಲೆ ನೋಡಿಕೊಂಡು ಶೇ.6% ರಿಂದ ಶೇ.35ವರೆಗೆ ಶುಲ್ಕವನ್ನು ಕಟ್ಟಬೇಕಾಗುತ್ತದೆ. ಈ ಹಣವನ್ನು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಬಳಸಲಾಗುತ್ತದೆ.

**ಉದಾಹರಣೆ:** ರಸ್ತೆ, ಪಾರ್ಕ್, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲು ಬಳಸಲಾಗುತ್ತದೆ ಎಂದು ಕಾಯ್ದೆಯಲ್ಲಿ ಹೇಳಲಾಗಿದೆ.

**ಸೆಟ್‌ಬ್ಯಾಕ್ ನಿಯಮ ಸಡಿಲಿಕೆ ಜನ ಸಾಮಾನ್ಯರಿಗೆ ತೊಂದರೆ**

ಸೆಟ್‌ಬ್ಯಾಕ್ ನಿಯಮ ಎಂದರೆ ಕಟ್ಟಡದ ಸುತ್ತ ಬಿಟ್ಟಿರುವ ಜಾಗ. ಇದು ಕಟ್ಟಡದ ನಿಯಮಗಳನ್ನು ಪಾಲಿಸಿದೆಯೇ ಎಂದು ತಿಳಿಸುತ್ತದೆ. ನಿಯಮಗಳನ್ನು ಉಲ್ಲಂಘಿಸಿದರೆ, ನೆರೆಹೊರೆಯವರಿಗೆ ತೊಂದರೆಯಾಗುತ್ತದೆ. ಅಷ್ಟೇ ಅಲ್ಲದೆ, ಕಟ್ಟಡದ ಭದ್ರತೆಗೂ ಅಪಾಯವಾಗಬಹುದು. ಈ ವರ್ಷದ ಫೆಬ್ರವರಿಯಲ್ಲಿ, ನ್ಯೂ ತಿಪ್ಪಸಂದ್ರದಲ್ಲಿ ಒಂದು ಮನೆಯ ಪಿಲ್ಲರ್ ಅನ್ನು ನೆರೆಹೊರೆಯವರು ಹಾಳು ಮಾಡಿದ್ದರಿಂದ ಎರಡು ಅಂತಸ್ತಿನ ಮನೆ ಕುಸಿದುಬಿತ್ತು.

**ಈ ಕಾಯ್ದೆಯ ಪ್ರಮುಖ ಅಂಶಗಳು ಹೀಗಿವೆ**

- ಸೆಟ್‌ಬ್ಯಾಕ್ ಎಂದರೆ ಕಟ್ಟಡದ ಗಾತ್ರ ಮತ್ತು ಎತ್ತರವನ್ನು ನಿರ್ಧರಿಸುವ ನಿಯಮ.
- ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಅಡಿಯಲ್ಲಿ, ವಸತಿ ಕಟ್ಟಡಗಳಿಗೆ 50% ಮತ್ತು ವಾಣಿಜ್ಯ ಕಟ್ಟಡಗಳಿಗೆ 25% ರಷ್ಟು ಸೆಟ್ ಬ್ಯಾಕ್ ಕಡಿಮೆ ಮಾಡಬಹುದು.
- ಇದರಿಂದ ನೆರೆಹೊರೆಯವರ ಖಾಸಗಿತನ ಮತ್ತು ಸುರಕ್ಷತೆಗೆ ತೊಂದರೆಯಾಗಬಹುದು.
- ಕಾಯ್ದೆಯ ಪ್ರಕಾರ, ನಿಯಮಗಳನ್ನು ಪಾಲಿಸದ ಕಟ್ಟಡಗಳನ್ನು ಸರಿಪಡಿಸುವ ಅಧಿಕಾರವನ್ನು ಮುನ್ಸಿಪಲ್ ಕಮಿಷನರ್ ಹೊಂದಿದ್ದಾರೆ.
- – ಕಾಯ್ದೆ ಜಾರಿಗೆ ಬರುವ ಒಂದು ವರ್ಷದ ಮೊದಲು ಕಟ್ಟಲಾದ ಕಟ್ಟಡಗಳಿಗೂ ಇದು ಅನ್ವಯಿಸುತ್ತದೆ.

**ಅಕ್ರಮ ಸಕ್ರಮ ಕಾಯ್ದೆಯ ಮೇಲಿನ ತಡೆಯಾಜ್ಞೆ ತೆರವುಗೊಳಿಸಲಿ**

ಅಕ್ರಮ ಸಕ್ರಮ ಕಾಯ್ದೆಯ ಮೇಲಿನ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ತೆರವುಗೊಳಿಸುವವರೆಗೆ ಈ ಕಾಯ್ದೆಯನ್ನು ತಕ್ಷಣಕ್ಕೆ ಜಾರಿಗೆ ತರುವುದಿಲ್ಲ ಎಂದು ಬಿಬಿಎಂಪಿ ಹೇಳಿದೆ. ಟೌನ್ ಪ್ಲಾನಿಂಗ್ ವಿಭಾಗದ ಹೆಚ್ಚುವರಿ ನಿರ್ದೇಶಕ ಗಿರೀಶ್ ಎನ್, ಈ ನಿಯಮವು 2020ರ ಬಿಬಿಎಂಪಿ ಕಾಯ್ದೆಯಲ್ಲೇ ಇತ್ತು. ಆದರೆ, ಕಳೆದ ಐದು ವರ್ಷಗಳಲ್ಲಿ ನಾವು ಅದನ್ನು ಜಾರಿಗೆ ತಂದಿಲ್ಲ. ಸುಪ್ರೀಂ ಕೋರ್ಟ್ ತಡೆಯಾಜ್ಞೆ ತೆರವುಗೊಳಿಸುವವರೆಗೆ ನಾವು ಕಾಯುತ್ತೇವೆ ಎಂದು ಹೇಳಿದ್ದಾರೆ.

**ನಿಯಮವನ್ನು ದುರುಪಯೋಗಪಡಿಸಿಕೊಳ್ಳಬಹುದು:** ಆದರೆ ಕಾನೂನು ತಜ್ಞರು ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಸುಪ್ರೀಂ ಕೋರ್ಟ್ ಅಂತಿಮ ತೀರ್ಪು ನೀಡುವ ಮೊದಲೇ ಸೆಟ್‌ಬ್ಯಾಕ್ ಸಡಿಲಿಕೆಗಳನ್ನು ಕಾನೂನಿನಲ್ಲಿ ಸೇರಿಸುವುದು ಸರಿಯಲ್ಲ, ವಕೀಲರಾಗಿದ್ದ ಸುಹಾಸ್ ಅನಂತ್ ರಾಜ್‌ಕುಮಾರ್, ಈ ನಿಯಮವನ್ನು ದುರುಪಯೋಗಪಡಿಸಿಕೊಳ್ಳಬಹುದು ಎಂದು ಹೇಳಿದ್ದಾರೆ. ನಿಯಮ ಉಲ್ಲಂಘನೆಯ ಕಟ್ಟಡಗಳನ್ನು ಸರಿಪಡಿಸಲು 2014 ರವರೆಗೆ ಅವಕಾಶ ನೀಡಲಾಗಿತ್ತು. ಆದರೆ, ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ನಂತರ 2020ರಲ್ಲಿ ಮತ್ತೆ ಅದೇ ನಿಯಮವನ್ನು ತರಲಾಯಿತು. ಈಗ 2024ರವರೆಗೆ ಅವಕಾಶ ನೀಡಲಾಗಿದೆ. ಇದು ನ್ಯಾಯಾಲಯಕ್ಕೆ ನೀಡಿದ ಭರವಸೆಗೆ ವಿರುದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

## ಮೂರು ಪಾಲಿಕೆಗಳಾಗಲಿದೆ ಬಿಬಿಎಂಪಿ ವಿಭಜನೆ

● ಉದಯವಾಹಿನಿ, ಬೆಂಗಳೂರು





ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮೂರು ಪಾಲಿಕೆಗಳಾಗಿ ವಿಭಜನೆಯಾಗುವ ಸಾಧ್ಯತೆಗಳಿವೆ. ಗ್ರೇಟರ್ ಬೆಂಗಳೂರು ವಿಧೇಯಕ್ಕೆ ರಾಜ್ಯಪಾಲರು ಅನುಮೋದನೆ ನೀಡುತ್ತಿದ್ದಂತೆ ಪಾಲಿಕೆ ವಿಭಜನೆಗೆ ಸರ್ಕಾರ ಮುಂದಾಗಿದೆ. ಏಳು ಪಾಲಿಕೆಗಳಿಗೆ ಮೀರದಂತೆ ಬಿಬಿಎಂಪಿ ವಿಭಜನೆ ಮಾಡಲು ರಾಜ್ಯಪಾಲರು ಸಮ್ಮತಿಸಿರುವ ಹಿನ್ನೆಲೆಯಲ್ಲಿ ಒಂದೂವರೆ ಕೋಟಿ ಜನಸಂಖ್ಯೆಯ ಬೆಂಗಳೂರು ನಗರವನ್ನು ಮೂರು ಪಾಲಿಕೆಗಳನ್ನಾಗಿ ವಿಭಜನೆ ಮಾಡುವುದು ಸರ್ಕಾರದ ಉದ್ದೇಶವಾಗಿದೆ.

50 ಲಕ್ಷ ಜನ ಸಂಖ್ಯೆಗೊಂದು ಪಾಲಿಕೆ ಮಾಡಿ ಅವುಗಳನ್ನು ಕೇಂದ್ರ, ಉತ್ತರ ಮತ್ತು ದಕ್ಷಿಣ ಬೆಂಗಳೂರು ಪಾಲಿಕೆಗಳನ್ನಾಗಿ ವಿಭಜಿಸಲು ತೀರ್ಮಾನಿಸಲಾಗಿದೆ ಎಂದು ತಿಳಿದುಬಂದಿದೆ. ಪ್ರತಿ ಪಾಲಿಕೆ ವ್ಯಾಪ್ತಿಯಲ್ಲಿ 150 ವಾರ್ಡ್‌ಗಳನ್ನು ಮಾಡಿ ಎಲ್ಲಾ ಮೂರು ಪಾಲಿಕೆಗಳ ಮೇಲ್ವಿಚಾರಣೆಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ವಹಿಸಿಕೊಡಲು ಸರ್ಕಾರ ಚಿಂತನೆ ನಡೆಸಿದೆ ಎನ್ನಲಾಗಿದೆ.

ಇದರ ಜೊತೆಗೆ ಹೊಸ ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಕೆಲ ಹೊಸ ಪ್ರದೇಶಗಳು ಸೇರ್ಪಡೆ ಮಾಡುವುದು ಸರ್ಕಾರ ಉದ್ದೇಶವಾಗಿದೆ. ಈ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಿ 30 ದಿನಗಳ ಕಾಲ ಸಾರ್ವಜನಿಕ ಆಕ್ಷೇಪಣೆಗೆ ಅವಕಾಶ ನೀಡಿದ ನಂತರ ಅಂತಿಮ ಅಧಿಸೂಚನೆ ಹೊರಡಿಸಲು ಸರ್ಕಾರ ನಿರ್ಧರಿಸಿದೆ. ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಬರುವ ಕೆಲವು ಗ್ರಾಪಂಗಳು ಅಸ್ತಿತ್ವ ಕಳೆದುಕೊಳ್ಳಲಿವೆ ಎನ್ನಲಾಗಿದೆ. ಮೂರು ಪಾಲಿಕೆ ರಚನೆಯಾಗುವವರೆಗೆ ರಾಜ್ಯ ಸರ್ಕಾರ ಎಲ್ಲಾ ಹೊಣೆಗಾರಿಕೆ ನಿರ್ವಹಣೆ ಮಾಡಲಿದೆ.

ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ ಕೈಗಾರಿಕೆ ಪ್ರದೇಶ, ಬೊಮ್ಮಸಂದ್ರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ, ಮಾಕಳಿ, ತಾವರೆಕೆರೆ, ಕುಂಬಳಗೋಡು, ಕಗ್ಗಲಿಪುರ, ಹಾರೋಹಳ್ಳಿಗಳು ಸೇರ್ಪಡೆಗೊಳ್ಳುವ ಸಾಧ್ಯತೆಗಳಿವೆ ಎನ್ನಲಾಗಿದೆ.

## ಬಿಬಿಎಂಪಿ ವ್ಯಾಪ್ತಿಯ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಬೈಸಿಕಲ್

● ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಸೈಕಲ್ ವಿತರಿಸಲು ತೀರ್ಮಾನಿಸಲಾಗಿದೆ. ಮುಂದಿನ ಶೈಕ್ಷಣಿಕ ವರ್ಷ ಆರಂಭಗೊಳ್ಳುತ್ತಿದಂತೆ ಸೈಕಲ್ ವಿತರಣೆ ಮಾಡಲು ತೀರ್ಮಾನ ಮಾಡಲಾಗಿದೆ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ. ಜೆಡಿಎಸ್-ಬಿಜೆಪಿ ಮೈತ್ರಿಸರ್ಕಾರದಲ್ಲಿ ವಿದ್ಯಾರ್ಥಿಗಳಿಗೆ ಸೈಕಲ್ ವಿತರಿಸುವ ಯೋಜನೆ ಸಾಕಷ್ಟು ಗಮನ ಸೆಳೆದಿತ್ತು. ಇದೀಗ ಬಿಬಿಎಂಪಿಯು ತನ್ನ ವ್ಯಾಪ್ತಿಯಲ್ಲಿನ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ ಮಾಡುವುದಕ್ಕೆ ಮುಂದಾಗಿದೆ. ಬಿಬಿಎಂಪಿಯ ಪ್ರಸಕ್ತ 2025-26ನೇ ಸಾಲಿನ ಆಯುವ್ಯಯದಲ್ಲಿ 721.40 ಕೋಟಿ ರು. ಮೀಸಲಿಡಲಾಗಿದೆ. ಕಳೆದ ವರ್ಷ 554.05 ಕೋಟಿ ರು. ಮೀಸಲಿಡಲಾಗಿತ್ತು. ಈ ಬಾರಿ ಹೆಚ್ಚುವರಿಯಾಗಿ 167 ಕೋಟಿ ರು. ಮೀಸಲಿಟ್ಟಿದ್ದು, ಹೆಚ್ಚುವರಿ ಅನುದಾನ ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಬಿಬಿಎಂಪಿಯ ಕಲ್ಯಾಣ ವಿಭಾಗದ ಅಧಿಕಾರಿಗಳು ಹೊಸ ಹೊಸ



ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಬಿಬಿಎಂಪಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ ಮಾಡುವುದಕ್ಕೆ ತೀರ್ಮಾನಿಸಲಾಗಿದೆ.

ಸೈಕಲ್ ಕೇವಲ ಬಿಬಿಎಂಪಿಯ ಶಾಲೆಯ ವಿದ್ಯಾರ್ಥಿಗಳಿಗೆ ಮಾತ್ರವಲ್ಲ. ಬಿಬಿಎಂಪಿ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಯಾವುದೇ ವಿದ್ಯಾರ್ಥಿಯಾದರೂ ಸೈಕಲ್ ಪಡೆಯಬಹುದಾಗಿದೆ ಎಂದು ಮೂಲಗಳು ಉಲ್ಲೇಖಿಸಿವೆ. ಆದರೆ, ಬಿಬಿಎಂಪಿಗೆ ಅರ್ಜಿ ಸಲ್ಲಿಸಿದವರಿಗೆ ಮಾತ್ರ ಸೈಕಲ್ ದೊರೆಯಲಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಎಷ್ಟು ವಿದ್ಯಾರ್ಥಿಗಳು 8ನೇ ತರಗತಿಗೆ ಈ ಬಾರಿ ದಾಖಲಾತಿ ಪಡೆಯಲಿದ್ದಾರೆ ಎಂಬುದರ ಕುರಿತು ಮಾಹಿತಿ ಸಂಗ್ರಹ ಸಹ ಮಾಡುವುದಕ್ಕೆ ಕಲ್ಯಾಣ ವಿಭಾಗದ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

> ಪರಿಸರ ಪ್ರೇಮ ಬೆಳೆಸುವುದು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಈಗಾಗಲೇ ಪರಿಸರ ಪ್ರೇಮದ ಬಗ್ಗೆ ಜಾಗೃತಿ ಮೂಡಿಸುವುದಕ್ಕೆ ಸಾಕಷ್ಟು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ನಡುವೆ ನಗರದಲ್ಲಿ ಹೆಚ್ಚಾಗುತ್ತಿರುವ ಸಂಚಾರ ದಟ್ಟಣೆಯಿಂದ ಉಂಟಾಗುತ್ತಿರುವ ಮಾಲಿನ್ಯ ಕಡಿಮೆ ಮಾಡುವುದಕ್ಕೆ ಸೈಕಲ್ ಬಳಕೆಯೂ ಒಂದು ಪರಿಹಾರವಾಗಿದೆ. ಈ ಕುರಿತು ಮಕ್ಕಳಿಗೆ ಸೈಕಲ್ ವಿತರಿಸುವ ಮೂಲಕ ತಿಳುವಳಿಕೆ ನೀಡಿಸುವುದು ಬಿಬಿಎಂಪಿಯ ಉದ್ದೇಶವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ಕನ್ನಡಿಗರು ತಲೆ ತಗ್ಗಿಸುವಂತಹ ಸನ್ನಿವೇಶ ನಿರ್ಮಾಣವಾಗದಂತೆ ವರ್ತಿಸಿ

● ಉದಯವಾಹಿನಿ, ಬೆಂಗಳೂರು

ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ. ಇನ್ನು ಮುಂದಾದರೂ ತಮ್ಮ ಹೇಳಿಕೆಗಳಿಂದ ಕನ್ನಡಿಗರು ತಲೆ ತಗ್ಗಿಸುವಂತಹ ಸನ್ನಿವೇಶ ನಿರ್ಮಾಣವಾಗದಂತೆ ವರ್ತಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಿಜೆಪಿ ಸಲಹೆ ನೀಡಿದೆ. ಪಹಲ್ಗಾಮ್ ಉಗ್ರರ ದಾಳಿ ಘಟನೆ ಕುರಿತು ಹೇಳಿಕೆ ನೀಡಿ ಭಾರೀ ಟೀಕೆಗೆ ಒಳಗಾಗಿ ನಂತರ ಮುಖ್ಯಮಂತ್ರಿಗಳು ಸಮರ್ಥನೆ ಕೊಟ್ಟ ಹಿನ್ನೆಲೆಯಲ್ಲಿ ಬಿಜೆಪಿ ಸಲಹೆ ನೀಡಿದೆ. ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು, ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ ಸಿಎಂ ಸಿದ್ದರಾಮಯ್ಯ ನವರೇ, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು. ಕೆಟ್ಟ ಮೇಲಾದರೂ ತಮಗೆ ಬುದ್ಧಿ ಬಂತಲ್ಲ ಎನ್ನುವ ಸಮಾಧಾನ ಒಂದು ಕಡೆಯಾದರೆ, ಓಲೈಕೆ ರಾಜಕಾರಣಕಾಗಿ ರಾಷ್ಟ್ರೀಯ ಭದ್ರತೆ ವಿಷಯದಲ್ಲೂ ರಾಜಿ ಮಾಡಿಕೊಳ್ಳಲು ಹೇಸುವುದಿಲ್ಲವಲ್ಲ ಎಂಬ ಆತಂಕ ಮತ್ತೊಂದು ಕಡೆ. ತಮ್ಮ ಬಾಲಿಶ ಹೇಳಿಕೆ ಶತ್ರುರಾಷ್ಟ್ರದ ಷಡ್ಯಂತ್ರ, ಕುತಂತ್ರಕ್ಕೆ ಆಹಾರವಾಯಿತು, ತಮ್ಮ ಬೇಜವಾಬ್ದಾರಿ ಹೇಳಿಕೆ ಭಾರತಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮುಜುಗರ ಉಂಟುಮಾಡಿತು ಎಂಬ ವಾಸ್ತವದ ಅರಿವು ತಮಗಾಗಿದೆ ಎಂದು ಭಾವಿಸುತ್ತೇನೆ. ಇನ್ನು ಮುಂದಾದರೂ ತಮ್ಮ ಸ್ಥಾನಕ್ಕೆ ತಕ್ಕಂತೆ ನಡೆದುಕೊಳ್ಳಿ. ತಮ್ಮ ಸ್ಥಾನಕ್ಕೆ ತಕ್ಕಂತಹ ಗಾಂಭೀರ್ಯತೆ, ಸಮಯ ಪ್ರಜ್ಞೆ, ಮುತ್ಸದ್ದಿತನ ರೂಢಿಸಿಕೊಳ್ಳಿ. ಇನ್ನು ಮುಂದಾದರೂ ತಮ್ಮ ಹೇಳಿಕೆಗಳಿಂದ ಕನ್ನಡಿಗರು ತಲೆ ತಗ್ಗಿಸುವಂತಹ ಸನ್ನಿವೇಶ ನಿರ್ಮಾಣವಾಗದಂತೆ ವರ್ತಿಸಿ ಎಂದು ಸಲಹೆ ನೀಡಿದ್ದಾರೆ.

## ಅಲ್ಪಾವಧಿ ವೀಸಾ ಹೊಂದಿದ್ದ ನಾಲ್ವರು ಪಾಕ್ ಪ್ರಜೆಗಳ ಗಡಿಪಾರು

● ಉದಯವಾಹಿನಿ, ಬೆಂಗಳೂರು





ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಮ್ ದಾಳಿಗೆ ಪ್ರತೀಕಾರ ಎಂಬಂತೆ ಭಾರತದಲ್ಲಿರುವ ಪಾಕಿಸ್ತಾನದ ಪ್ರಜೆಗಳು ದೇಶ ತೊರೆಯಬೇಕು ಎಂದು ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಹಿನ್ನಲೆಯಲ್ಲಿ ಕರ್ನಾಟದಲ್ಲಿ ಅಲ್ಪಾವಧಿ ವೀಸಾ ಹೊಂದಿದ್ದ ನಾಲ್ವರು ಪಾಕ್ ಪ್ರಜೆಗಳನ್ನು ರಾಜ್ಯದಿಂದ ಗಡಿಪಾರು ಮಾಡಲಾಗಿದೆ.

ಇನ್ನೂ ಹಲವು ಜಿಲ್ಲೆಗಳಲ್ಲಿ ಪಾಕ್ ಪ್ರಜೆಗಳಿದ್ದು ಅವರನ್ನು ಸದ್ಯದಲ್ಲೇ ಹೊರಹಾಕಲಾಗುತ್ತದೆ. ಸದ್ಯ ಅಲ್ಪಾವಧಿ ವೀಸಾ ಹೊಂದಿದ್ದ ನಾಲ್ಕು ಮಂದಿ ಪಾಕ್ ಪ್ರಜೆಗಳನ್ನು ರಾಜ್ಯದಿಂದ ಗಡಿಪಾರು ಮಾಡಲಾಗಿದೆ ಎಂದು ತಿಳಿದುಬಂದಿದೆ. ದೀರ್ಘಾವಧಿ ವೀಸಾ ಹೊಂದಿರುವವರ ಗಡಿಪಾರು ಮಾಡಲು ಕೇಂದ್ರ ಸರ್ಕಾರ ಸೂಚನೆ ನೀಡಿಲ್ಲ. ಹಾಗಾಗಿ ದೀರ್ಘಾವಧಿ ವೀಸಾ ಹೊಂದಿರುವ 91 ಮಂದಿ ಪಾಕ್ ಪ್ರಜೆಗಳು ಸದ್ಯ ರಾಜ್ಯದಲ್ಲೇ ಇದ್ದಾರೆ. ಜಿಲ್ಲಾಡಳಿತಗಳು, ಪೊಲೀಸ್ ಇಲಾಖೆ ಕಾರ್ಯಾಚರಣೆ ವೇಳೆ ವಿವಿಧ ಜಿಲ್ಲೆಗಳಲ್ಲಿ 91 ಮಂದಿ ಪಾಕ್ ಪ್ರಜೆಗಳು ವಾಸವಿರುವುದು ಗೊತ್ತಾಗಿದೆ.

ಕೆಲ ಪಾಕಿಸ್ತಾನಿ ಪ್ರಜೆಗಳು ವೈದ್ಯಕೀಯ ವೀಸಾದಡಿ ಕರ್ನಾಟಕದಲ್ಲಿದ್ದು, ಇವರಿಗೆ ಏಪ್ರಿಲ್ 29 ರವರೆಗೆ ಮಾತ್ರ ಭಾರತದಲ್ಲಿರಲು ವಿನಾಯಿತಿ ನೀಡಲಾಗಿದೆ. ಬಳಿಕ ಅವರನ್ನು ವಾಪಸ್ ಕಳಿಸಲು ಮುಂದಾಗಿದೆ. ದೀರ್ಘಾವಧಿ ವೀಸಾ ಹೊಂದಿರುವವರ ಗಡಿಪಾರಿಗೆ ಕೇಂದ್ರ ಸೂಚಿಸದ ಕಾರಣ ದೀರ್ಘಾವಧಿ ವೀಸಾ ಹೊಂದಿರುವ 91 ಮಂದಿ ಪಾಕ್ ಪ್ರಜೆಗಳು ಇನ್ನೂ ಕರ್ನಾಟಕದಲ್ಲೇ ಇದ್ದಾರೆ. ಪಾಕಿಸ್ತಾನಿ ಪ್ರಜೆಗಳು ವೈದ್ಯಕೀಯ ವೀಸಾದಡಿ ರಾಜ್ಯದಲ್ಲಿದ್ದಾರೆ. ಇವರಿಗೆ ಏ.29ರವರೆಗೆ ಮಾತ್ರ ದೇಶದಲ್ಲಿರಲು ಕೇಂದ್ರವು ವಿನಾಯಿತಿ ನೀಡಿದ್ದು, ಗಡುವಿನೊಳಗೆ ನಿಯಮಾನುಸಾರ ಹೊರ ಕಳುಹಿಸಲಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಪಾಕಿಸ್ತಾನಿ ಪ್ರಜೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಭಟ್ಕಳ, ಕಾರವಾರದಲ್ಲಿ ಹೆಚ್ಚಿನ ಜನ ಕಂಡುಬಂದಿದ್ದಾರೆ. ಇನ್ನು ಬೆಂಗಳೂರು, ಕಲಬುರಗಿ, ಮಂಗಳೂರು, ಮೈಸೂರು ಭಾಗಗಳಲ್ಲೂ ಪಾಕ್ ಪ್ರಜೆಗಳು ನೆಲೆಸಿದ್ದಾರೆ. ಕೇಂದ್ರ ಸರ್ಕಾರದ ಸೂಚನೆಯಂತೆ ಕರ್ನಾಟಕ ರಾಜ್ಯದಲ್ಲಿರುವ ಪಾಕಿಸ್ತಾನಿ ಪ್ರಜೆಗಳ ಬಗ್ಗೆ ಮಾಹಿತಿ ಕಲೆಹಾಕಿ, ಅವರನ್ನು ವಾಪಸ್ ಕಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸರ್ಕಾರ ಹೇಳಿದೆ.

ರಾಜ್ಯದಲ್ಲಿ ಅತಿ ಹೆಚ್ಚು ಪಾಕಿಸ್ತಾನಿ ಪ್ರಜೆಗಳು ಉತ್ತರ ಕನ್ನಡ ಜಿಲ್ಲೆಯಲ್ಲಿದ್ದು, ಭಟ್ಕಳದಲ್ಲಿ 14, ಕಾರವಾರದಲ್ಲಿ ಒಬ್ಬರು ಸೇರಿ ಒಟ್ಟಾರೆ 15 ಮಂದಿ ವಾಸವಾಗಿದ್ದಾರೆ.

## ಕರ್ನಾಟಕ ರಾಜ್ಯೋತ್ಸವ, ವೀರಮರಣ ಹೊಂದಿದವರಿಗೆ ನುಡಿನಮನ

● ಉದಯವಾಹಿನಿ, ಬೆಂಗಳೂರು



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜಮ್ಮು, ಕಾಶ್ಮೀರದ ಪಹಾಲ್ಗಾಮ್‌ನಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಮತ್ತು ವೀರ ಮರಣ ಹೊಂದಿದ ಭಾರತಾಂಬೆ ಮಕ್ಕಳಿಗೆ ನುಡಿನಮನ ಕಾರ್ಯಕ್ರಮವನ್ನು ದಿನಾಂಕ ನವೆಂಬರ್ 22ನೇ ತಾರೀಖು ಹಮ್ಮಿಕೊಳ್ಳಲಾಗಿದೆ ಇದರ ಕುರಿತು ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಮಾಧ್ಯಮಕ್ಕೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಮಾತನಾಡಿ ನಮ್ಮ ಸಂಘವು ನೇಪಾಳದಲ್ಲಿ ಅಂತರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಮತ್ತು ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಕಾಶಿಯಲ್ಲಿ ಆಚರಿಸಲಾಯಿತು. ಈ ವರ್ಷ ಪಹಾಲ್ಗಾಮ್ ನಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಆಚರಿಸಲು ನಿರ್ಧರಿಸಲಾಗಿದೆ. ನವೆಂಬರ್ 22ನೇ ತಾರೀಖು ರಾಷ್ಟ್ರೀಯ

> ಬೆಂಗಳೂರಿನಿಂದ 20ನೇ ತಾರೀಖು ಹೊರಟು 22ನೇ ಕಾರ್ಯಕ್ರಮ ಪಾಲ್ಗೊಳ್ಳಲಿದ್ದೇವೆ. ಸುತ್ತಮುತ್ತಲ ಪವಿತ್ರ ಸ್ಥಳಗಳಾದ ಶಂಕರಾಚಾರ್ಯ ದೇವಸ್ಥಾನ, ಭೂತೇಶ್ವರ ದೇವಸ್ಥಾನ ಮಹಾಜ್ವಾಲಾ ಮಂದಿರ, ಮಾಮಲೇಶ್ವರ ದೇವಸ್ಥಾನ, ಶಂಕರದೇವಿದೇವಸ್ಥಾನ, ಶಾರಿಕಾದೇವಿ ದೇವಸ್ಥಾನ, ಪಾರ್ಕ್ ಉಮಾರೋ, ಸ್ವರ್ಗ ಪ್ಯಾಲೆಸ್ ,ಸ್ಟ್ರೀಟ್ ವ್ಯೂ ದರ್ಶನ ಮಾಡಲಿದ್ದೇವೆ.

ಕರ್ನಾಟಕ ರಾಜ್ಯೋತ್ಸವ ಮತ್ತು ಉಗ್ರವಾದ ವಿರುದ್ಧ ಹೋರಾಟ, ವೀರ ಮರಣ ಅಪ್ಪಿದವರಿಗೆ ನುಡಿನಮನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಬರಲು ಇಚ್ಚಿಸುವ ಕನ್ನಡಾಭಿಮಾನಿಗಳು ಅಕ್ಟೋಬರ್ 15ರ ಒಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಸಂಪರ್ಕ ಸಂಖ್ಯೆ ಮೊಬೈಲ್ ಲಾವಣ್ಯ-8105314213 ಹರೀಶ್-7619543217

## ಮೃತ ಭರತ್ ಭೂಷಣ್ ಪತ್ನಿ ಹೇಳಿಕೆ ದಾಖಲಿಸಿಕೊಂಡ ಎನ್‌ಐಎ

● ಉದಯವಾಹಿನಿ, ಬೆಂಗಳೂರು

ಪೆಹಲ್ಗಾಮ್‌ನಲ್ಲಿ ಉಗ್ರರ ದಾಳಿಯ ತನಿಖೆಯನ್ನ ಎನ್‌ಐಎ ವಹಿಸಿಕೊಂಡಿದೆ. ಅಧಿಕೃತ ತನಿಖೆಯ ಆದೇಶಕ್ಕೂ ಮೊದಲು ಎನ್‌ಐಎ ಫೀಲ್ಡ್‌ಗಡ ಇಳಿದು ತನಿಖೆ ಆರಂಭಿಸಿದೆ. ಕಳೆದ ಶುಕ್ರವಾರ ಮೃತ ಭರತ್ ಭೂಷಣ್‌ರ ಮನೆಗೆ ತೆರಳಿದ್ದ ಎನ್‌ಐಎ, ಸುಧೀರ್ಘ 8 ಗಂಟೆಗಳ ಕಾಲ ಪತ್ನಿ ಡಾ.ಸುಜಾತಾರ ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡಿದೆ. ನೀವೂ ಕಾಶ್ಮೀರಕ್ಕೆ ಯಾವಾಗ ಹೋಗಿದ್ರಿ, ಎಷ್ಟೊತ್ತಿಗೆ ತಲುಪಿದ್ರಿ? ಉಗ್ರರು ಬಂದಾಗ ನೀವು ಎಲ್ಲಿ ಇದ್ರಿ, ಭರತ್ ಭೂಷಣ್ ಎಲ್ಲಿದ್ರು? ಉಗ್ರರು ಬಂದಾಗ ಯಾವ ಭಾಷೆ ಮಾತಾಡಿದ್ರು. ಅವರ ಮುಖದ ಮೇಲೆ ಏನಾದ್ರು ಮಾರ್ಕ್ ಇತ್ತಾ. ಅವರ ಮುಖ ಚಹರೆ, ವೇಷ ಭೂಷಣ ಇವೆಲ್ಲದರ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಅಲ್ಲದೇ ಉಗ್ರರ ಸ್ಕೆಚ್ ತೋರಿಸಿ ಕೂಡ ಮಾಹಿತಿ ಪಡೆದಿರುವ ಎನ್‌ಐಎ, ಅವರ ಬಳಿಯಿದ್ದ ಗನ್ ನೋಡಿದ್ರಾ? ಅದು ಯಾವ ರೀತಿ ಇತ್ತು. ಅವರು ನಿಮ್ಮ ಬಳಿ ಏನಾದ್ರು ಮಾತಾಡಿದ್ರಾ? ನೀವು ಅವರಿಗೆ ಏನಾದ್ರು ಉತ್ತರ ಕೊಟ್ರಾ, ಹೀಗೆ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಕಲೆ ಹಾಕಿರುವ ಎನ್‌ಐಎ ಭರತ್ ಭೂಷಣ್ ಅವರ ಪತ್ನಿ ಹೇಳಿಕೆಯನ್ನು ದಾಖಲು ಮಾಡಿಕೊಂಡು ಹೋಗಿದೆ.


# ರೈಲ್ವೆ ಪರೀಕ್ಷೆಯಲ್ಲಿ ಜನಿವಾರ, ಮಂಗಳಸೂತ್ರ ತೆಗೆಸಬೇಡಿ: ಸೋಮಣ್ಣ

**ಈ ರೀತಿಯ ಧಾರ್ಮಿಕ ವಿರೋಧಿ ಧೋರಣೆ ಸಹಿಸಲು ಅಸಾಧ್ಯ** | **ಪರೀಕ್ಷೆಯಲ್ಲಿ ಹಿಂದೂಗಳ ಭಾವನೆಗೆ ಧಕ್ಕೆ ಆಗ ಬಾರದ**

● ಉದಯವಾಹಿನಿ, ಬೆಂಗಳೂರು

ರೈಲ್ವೆ ನೇಮಕಾತಿ ಮಂಡಳಿಯ ನರ್ಸಿಂಗ್ ಸೂಪರಿಂಟೆಂಡೆಂಟ್ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಜನಿವಾರ, ಮಂಗಳಸೂತ್ರ ತೆಗೆಸಬಾರದು ಎಂದು ರೈಲ್ವೆ ಇಲಾಖೆಯ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ. ಪರೀಕ್ಷೆಗೆ ಹಾಜರಾಗುವವರು ಧಾರ್ಮಿಕ ಸಂಕೇತ ಗಳು, ಮಂಗಳಸೂತ್ರವನ್ನು ತೆಗೆದು ಬರಬೇಕು ಎಂದು ಪ್ರವೇಶ ಪತ್ರದಲ್ಲಿ ಉಲ್ಲೇಖಿಸಿರುವುದಕ್ಕೆ ಹಿಂದೂ ಪರ ಸಂಘಟನೆಗಳಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಕೂಡಲೇ ಈ ವಿಚಾರವನ್ನು ದಕ್ಷಿಣ ಕನ್ನಡ ಬಿಜೆಪಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ರೈಲ್ವೆ ಇಲಾಖೆ ಸಚಿವರ ಗಮನಕ್ಕೆ ತಂದಿದ್ದರು. ಇದರ ಬೆನ್ನಲ್ಲೇ ಸೋಮಣ್ಣ ಸೂಚನೆ ನೀಡಿದ್ದಾರೆ. ನರ್ಸಿಂಗ್ ಸೂಪರಿಂಟೆಂಡೆಂಟ್ ಹುದ್ದೆಗೆ ಪರೀಕ್ಷೆ ಬರೆ ಯುವವರು ಮಂಗಳಸೂತ್ರ, ಜನಿವಾರದಂತಹ ಧಾರ್ಮಿಕ ಸಂಕೇತಗಳು, ಆಭರಣಗಳನ್ನು ತೆಗೆಯುವಂತೆ ಮಾಡಬಾರದು. ಜನಿವಾರ, ಮಂಗಳ ಸೂತ್ರ ತೆಗೆಸದಂತೆ ಅಧಿಕಾರಿಗಳಿಗೆ ರೈಲ್ವೆ ಇಲಾಖೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಸೂಚನೆ ನೀಡಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತಿದೆ. ಮಂಗಳಸೂತ್ರ, ಧಾರ್ಮಿಕ ಸಂಕೇತಗಳನ್ನು ತೆಗೆಯಬೇಕೆಂದು ಪ್ರವೇಶ ಪತ್ರದಲ್ಲಿ ಉಲ್ಲೇಖಿಸಲ್ಪಟ್ಟಿದ್ದ ಬಗ್ಗೆ ನಾವು ಅವರ ಗಮನಕ್ಕೆ ತಂದ್ದೆವು. ಅವರು ಮಧ್ಯಪ್ರವೇಶಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಎಕ್ಸ್ ಮೂಲಕ ಬ್ರಿಜೇಶ್ ಚೌಟ ಸ್ಪಷ್ಟಪಡಿಸಿದ್ದಾರೆ.





ರೈಲ್ವೆ ಇಲಾಖೆಯ ನರ್ಸಿಂಗ್ ಸುಪರಿಂಟೆಂಡೆಂಟ್ ಹುದ್ದೆಗೆ ಪರೀಕ್ಷೆಯು ಏಪ್ರಿಲ್ 28, 29, 30ರಂದು ಬೋಂದೆಲ್‌ನ ವಿದ್ಯಾಕೇಂದ್ರದಲ್ಲಿ ನಡೆಯಲಿದೆ.

**ಬಿಜೆಪಿಗೆ ಮುಜುಗರ**

ಸಿಇಟಿ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣವನ್ನು ರಾಜ್ಯ ಸರ್ಕಾರದ ವಿರುದ್ಧ ಅಸ್ತ್ರವಾಗಿ ಬಿಜೆಪಿ ಬಳಸಿಕೊಂಡಿತ್ತು. ಇದೀಗ ರೈಲ್ವೆ ಪರೀಕ್ಷೆ ವಿವಾದ ಮುಜುಗರ ತರಿಸಿದೆ. ಸಿಇಟಿ ಪರೀಕ್ಷಾ ಪ್ರಕರಣದ ವಿರುದ್ಧ ಅಖಿಲ ಕರ್ನಾಟಕ ಬ್ರಾಹಣ ಮಹಾಸಭಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ರಾಜ್ಯ ಸರ್ಕಾರ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನೋಟಿಸ್ ನೀಡಿದ್ದನ್ನು ಬಿಜೆಪಿ ಸಮರ್ಥಿಸಿತ್ತು.

ಆ ಪರೀಕ್ಷೆ ಬರೆಯಬೇಕಾದರೆ ಹಿಂದೂಗಳು ಅವರ ಧಾರ್ಮಿಕ ಸಂಪ್ರದಾಯಗಳಾದ ಮಂಗಳಸೂತ್ರ, ಜನಿವಾರಗಳನ್ನೂ ತೆಗೆದು ಪರೀಕ್ಷೆ ಬರೆಯುವಂತೆ ಪ್ರವೇಶ ಪತ್ರದಲ್ಲಿ ಉಲ್ಲೇಖಿಸಿದ್ದರು. ಈ ರೀತಿಯ ಧಾರ್ಮಿಕ ವಿರೋಧಿ ಧೋರಣೆ ಸಹಿಸಲು ಅಸಾಧ್ಯ. ಜಿಲ್ಲಾಧಿಕಾರಿಗಳು, ಸಂಸದರು ಇಂತಹ ಆದೇಶವನ್ನು ಕೈಬಿಟ್ಟು ನಡೆಯಲಿರುವ ಪರೀಕ್ಷೆಯಲ್ಲಿ ಹಿಂದೂಗಳ ಭಾವನೆಗೆ ಧಕ್ಕೆಬಾರದ ರೀತಿಯಲ್ಲಿ ಪರೀಕ್ಷಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲು ಆಗ್ರಹಿಸುತ್ತೇನೆ? ಎಂದು ವಿಹಿಂಪ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಆಗ್ರಹಿಸಿದ್ದರು.

ಹಿಂದೂ ಬಹುಸಂಖ್ಯಾತ ನಮ್ಮ ದೇಶದಲ್ಲಿ ಈ ರೀತಿಯ ಹಿಂದೂ ವಿರೋಧಿ ಧೋರಣೆ ಸಹಿಸಲು ಅಸಾಧ್ಯ. ಹಾಗಾಗಿ ಪರೀಕ್ಷಾರ್ಥಿಗಳಿಗೆ ಯಾವುದೇ ಹಿಂದೂ ಧಾರ್ಮಿಕ ಭಾವನೆಗೆ ಧಕ್ಕೆಯಾಗದ ರೀತಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡುತ್ತೇವೆ ಎಂದು ವಿಹಿಂಪ ಮಂಗಳೂರು ವಿಭಾಗ ಪ್ರಚಾರ ಪ್ರಮುಖ್ ಪ್ರದೀಪ್ ಸರಿಪಲ್ಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> ಈ ಬಗ್ಗೆ ವಿಶ್ವ ಹಿಂದೂ ಪರಿಷತ್ ಆಕ್ಷೇಪಿಸಿದ್ದು, ಈ ರೀತಿಯ ಆದೇಶ ಸರಿಯಲ್ಲ. ಇತ್ತೀಚಿಗೆ ಸಿಇಟಿ ಪರೀಕ್ಷೆ ಬರೆಯುವ ಸಂದರ್ಭದಲ್ಲಿ ಹಿಂದೂಗಳ ಪವಿತ್ರ ಜನಿವಾರವನ್ನು ಕಿತ್ತು ಹಾಕಿರುವುದು ಹಿಂದೂಗಳ ಭಾವನೆಗೆ ದಕ್ಕೆ ತಂದಿದೆ. ದೇಶಾದ್ಯಂತ ಹಿಂದೂಗಳ ಆಕ್ರೋಶಕ್ಕೆ ಕಾರಣವಾಗಿದೆ. ಮುತ್ತೈದೆ ಹೆಣ್ಣು ಮಗಳು ತಾಳಿ ಸರ ಕಳಚುವಂತೆ, ಸಿಂಧೂರ ಅಳಿಸುವಂತೆ ಮಾಡುವುದು, ಜನಿವಾರವನ್ನು ಕಿತ್ತು ಹಾಕುವಂತೆ ಹೇಳುವುದು ಕೋಟ್ಯಂತರ ಹಿಂದೂ ಧರ್ಮೀಯರ ಧಾರ್ಮಿಕ ಭಾವನೆಗೆ ನೋವು ತರುತ್ತದೆ
> – ವಿ.ಸೋಮಣ್ಣ, ರಾಜ್ಯ ಖಾತೆ ಸಚಿವ

## ಭೂಹಳ್ಳಿ ಪುಟ್ಟಸ್ವಾಮಿ ಸಮಗ್ರ ಸಂಪುಟ ಹೊರತರಬೇಕು: ಸಾಹಿತಿ ಬೊಮ್ಮನಾಯಕನಹಳ್ಳಿ

• ಉದಯವಾಹಿನಿ, ಚನ್ನಪಟ್ಟಣ



ಉದಯವಾಹಿನಿ ಚಿತ್ರ

ಪರಿಸರವಾದಿ, ಕವಿ ಭೂಹಳ್ಳಿ ಪುಟ್ಟಸ್ವಾಮಿ ಅವರು ಹೊರತಂದಿರುವ ಕೃತಿಗಳ ಸಮಗ್ರ ಸಂಪುಟ ಹೊರತರಬೇಕೆಂದು ಸಾಹಿತಿ ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅಭಿಪ್ರಾಯಪಟ್ಟರು. ಪುಟ್ಟಸ್ವಾಮಿ ಅವರ ಹೆಸರನ್ನು ಮತ್ತಷ್ಟು ಚಿರಸ್ಥಾಯಿಯಾಗಿಸಲು ಅವರು ತಂದಿರುವ ಕೃತಿಗಳ ಜೊತೆಗೆ ಅವರ ಬಗ್ಗೆ ಸಾಹಿತ್ಯಾಸಕ್ತರಿಂದ ಲೇಖನಗಳನ್ನು ಬರೆಸಿ ಸಮಗ್ರ ಸಂಪುಟ ಹೊರತರಬೇಕು ಎಂದರು. ಸಿಂ.ಲಿಂ. ನಾಗರಾಜು ಪ್ರತಿಷ್ಠಾನದ ಅಧ್ಯಕ್ಷ ನಾಗವಾರ ಶಂಭೂಗೌಡ ಮಾತನಾಡಿ, ಭೂಹಳ್ಳಿ ಪುಟ್ಟಸ್ವಾಮಿ ಅವರ ಸಾಹಿತ್ಯ ಹಾಗೂ ಪರಿಸರ ಪ್ರೇಮವನ್ನು ಯುವ ಪೀಳಿಗೆ ಆದರ್ಶವಾಗಿಟ್ಟುಕೊಳ್ಳಬೇಕು. ಅವರಂತೆಯೇ ಗಿಡ ಮರಗಳನ್ನು ಬೆಳೆಸುವ ಸಂಕಲ್ಪ ಮಾಡಬೇಕು. ಜಿಲ್ಲಾಡಳಿತ ಅಥವಾ ತಾಲ್ಲೂಕು ಆಡಳಿತದ ವತಿಯಿಂದ ಇಂತಹ ಮಹನೀಯರನ್ನು ಸ್ಮರಣೆ ಮಾಡುವ ಕೆಲಸವಾಗಬೇಕು ಎಂದರು.

ವಚನ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್ಲೇಗೌಡ ಬೆಸಗರಹಳ್ಳಿ, ಸಾಹಿತಿಗಳಾದ ಕೂರಣಗೆರೆ ಕೃಷ್ಣಪ್ಪ, ಎಲೆಕೇರಿ ಶಿವರಾಮು, ವಿ.ಪಿ. ವರದರಾಜು, ಕಸಾಪ ಜಿಲ್ಲಾ ಕಾರ್ಯದರ್ಶಿ ಪುಟ್ಟಸ್ವಾಮಿ ಇತರರು ಭೂಹಳ್ಳಿ ಪುಟ್ಟಸ್ವಾಮಿ ಅವರ ಸಾಹಿತ್ಯ, ಪರಿಸರ ಪ್ರೇಮವನ್ನು ಸ್ಮರಿಸಿದರು. ಗಾಯಕರಾದ ಬೇವೂರು ರಾಮಯ್ಯ, ರಾಮನಗರ ಪೂರ್ಣಚಂದ್ರ, ವಿನಯ್ ಕುಮಾರ್ ಗೀತಗಾಯನ ನಡೆಸಿಕೊಟ್ಟರು. ಕೂ.ಗಿ. ಗಿರಿಯಪ್ಪ, ಎಸ್.ಎನ್.ಆದರ್ಶಕುಮಾರ್, ಹೇಮಂತ್ ಗೌಡ, ಸುರೇಶ್, ಎಚ್.ನಿರ್ಮಲಾ, ಚನ್ನೇಗೌಡ, ಕರಿಯಪ್ಪ, ಮರಿದೇವರು ಗ್ರಾಮಸ್ಥರು, ಇನ್ನಿತರರು ಭಾಗವಹಿಸಿದ್ದರು.

> ತಾಲ್ಲೂಕಿನ ಭೂಹಳ್ಳಿ ಗ್ರಾಮದ ಬುದ್ದೇಶ್ವರ ವನದಲ್ಲಿ ರಾಮನಗರ ಜಿಲ್ಲಾ ಲೇಖಕರ ವೇದಿಕೆ, ಸಿಂ.ಲಿಂ.ನಾಗರಾಜು ಪ್ರತಿಷ್ಠಾನ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಶನಿವಾರ ಪರಿಸರವಾದಿ ದಿ.ಭೂಹಳ್ಳಿ ಪುಟ್ಟಸ್ವಾಮಿ ಅವರ ನೆನೆಪು ಕಾರ್ಯಕ್ರಮದಲ್ಲಿ ಮಾತನಾಡಿದರು. ಭೂಹಳ್ಳಿ ಪುಟ್ಟಸ್ವಾಮಿ ಅವರು ಭೌತಿಕವಾಗಿ ನಮ್ಮನ್ನು ಅಗಲಿರಬಹುದು. ಆದರೆ ಅವರು ಬೆಳೆಸಿರುವ ವನಗಳ ಮರ ಗಿಡಗಳಲ್ಲಿ, ಪಕ್ಷಿಗಳ ಕಲರವಗಳಲ್ಲಿ, ದುಂಬಿಗಳ ಝೇಂಕಾರಗಳಲ್ಲಿ ಅವರ ಉಸಿರಿದೆ.

ಮೈಸೂರಿಗರೇ ಎಚ್ಚರ: ನೀವು ಕುಡಿಯುತ್ತಿರುವ ನೀರೆಷ್ಟು ಸೇಫ್? 11 ಘಟಕಗಳಿಗೆ ಬಿಳುತ್ತಾ ಬೀಗ

## ಕೋರ್ಟ್‌ನಲ್ಲಿ ಕೇಸ್ ದಾಖಲಿಸಲು ಸ್ಯಾಂಪಲ್ ಸಂಗ್ರಹ

• ಉದಯವಾಹಿನಿ, ಮೈಸೂರು

ಆಹಾರ ಸುರಕ್ಷತಾ ಮತ್ತು ಗುಣಮಟ್ಟದ ಪ್ರಾಧಿಕಾರದ ಅಧಿಕಾರಿಗಳು ನಗರದ ಪ್ಯಾಕೇಜಿಂಗ್ ಕುಡಿಯುವ ನೀರಿನ 13 ಘಟಕಗಳಿಂದ ಸಂಗ್ರಹಿಸಿದ ನೀರಿನ ಸ್ಯಾಂಪಲ್ಸ್‌ನಲ್ಲಿ 11 ಕಡೆ ದೋಷ ಕಂಡು ಬಂದಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಪ್ರಾಧಿಕಾರ ನಿಗದಿ ಪಡಿಸಿರುವ ಮಾನದಂಡದಡಿ ನೀರನ್ನು ಶುದ್ಧೀಕರಿಸಲು ವಿಲವಾದ ಘಟಕಗಳನ್ನು ಇಲಾಖೆ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಅಂತಹ ಘಟಕಗಳ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಲು ಮುಂದಾಗಿದ್ದಾರೆ.

- ಮೈಸೂರು ನಗರದಲ್ಲಿ ಸಿಗುತ್ತಿರುವ ಬಾಟಲ್ ನೀರು ಸಹ ಕುಡಿಯಲು ಸುರಕ್ಷಿತವಲ್ಲ
- ರಾಸಾಯನಿಕ, ಸೂಕ್ಷ್ಮ ಜೀವಾಣು ಪರೀಕ್ಷೆಯಲ್ಲಿ ಬಹಿರಂಗ
- ಪ್ಯಾಕೇಜಿಂಗ್ ಘಟಕಗಳ ಮೇಲೆ ನಡೆಸಿದ ದಾಳಿಯಲ್ಲಿ ದೋಷ ಪತ್ತೆ

**ನೀರಿನ ಶುದ್ಧತೆ ಬಗ್ಗೆ ರಾಸಾಯನಿಕ ಪರೀಕ್ಷೆ:** ಪ್ರಾಧಿಕಾರದ ಅಧಿಕಾರಿಗಳು 5 ಘಟಕಗಳಿಗೆ ಭೇಟಿ ನೀಡಿ ಅಲ್ಲಿನ ನೀರಿನ ಶುದ್ಧತೆ ಬಗ್ಗೆ ರಾಸಾಯನಿಕ ಪರೀಕ್ಷೆ ನಡೆಸಲಾಗಿದ್ದು, ಅದರಲ್ಲಿ ನಾಲ್ಕು ಘಟಕಗಳಲ್ಲಿ ಕಳಪೆ ಗುಣಮಟ್ಟ ಎಂದು ವರದಿ ಬಂದಿದೆ. 7 ಕಡೆ ಸೂಕ್ಷ್ಮ ಜೀವಾಣು ವಿಶ್ಲೇಷಣೆ ಪರೀಕ್ಷೆ ನಡೆಸಲಾಗಿದ್ದು, ದೋಷ ಕಂಡು ಬಂದಿದೆ. ಈ ಘಟಕಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ಲೀಗಲ್ ಸ್ಯಾಂಪಲ್ ಸಂಗ್ರಹಿಸಲಾಗಿದೆ. ಅನಧಿಕೃತವಾಗಿ ಪ್ಯಾಕೇಜಿಂಗ್ ಡ್ರಿಂಕಿಂಗ್ ವಾಟರ್ ತಯಾರಕರಿಂದ ಸಮಸ್ಯೆಯಾಗಿದೆ.



ಉದಯವಾಹಿನಿ ಚಿತ್ರ

> ಮೈಸೂರು ನಗರದಲ್ಲಿರುವ ಪ್ಯಾಕೇಜಿಂಗ್ ಡ್ರಿಂಕಿಂಗ್ ವಾಟರ್ ಘಟಕಗಳಲ್ಲಿ ಉತ್ಪಾದನೆಯಾಗುವ ನೀರನ್ನು ಎಎಸ್‌ಎಸ್‌ಎಐ ನಿಗದಿಪಡಿಸಿರುವ ಗುಣಮಟ್ಟದಡಿ ಇದೆಯೋ ಇಲ್ಲವೋ ಎಂಬುದನ್ನು ಆಗಾಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದ್ದು, ಕಳೆದ ಮೂರು ತಿಂಗಳಲ್ಲಿ 11 ಕಡೆ ದೋಷ ಪತ್ತೆ ಹಚ್ಚಿ ಕಾನೂನಿನಡಿ ಕ್ರಮ ಜರುಗಿಸಲಾಗಿದೆ
> –ಡಾ.ಎಸ್.ಎಲ್.ರವೀಂದ್ರ, ಆಹಾರ ಸುರಕ್ಷತಾ, ಗುಣಮಟ್ಟದ ಪ್ರಾಧಿಕಾರದ ಅಂಕಿತ ಅಧಿಕಾರಿ

ಕಡಿಮೆ ಬೆಲೆಗೆ ಪೂರ್ಣ ಪ್ರಮಾಣ ದಲ್ಲಿ ಶುದ್ಧೀಕರಿಸದ ನೀರನ್ನು ನೀಡುತ್ತಿರುವುದರಿಂದ ತೊಂದರೆಯಾಗಿದೆ. ಇಲಾಖೆಯ ಅಧಿಕಾರಿಗಳು ಅನಧಿಕೃತ ಘಟಕ ನಡೆಸುವವರ ವಿರುದ್ದ ಕ್ರಮ ಜರುಗಿಸಬೇಕಿದೆ ಎಂದು ಮೈಸೂರು ಪ್ಯಾಕೇಜಿಂಗ್ ಡ್ರಿಂಕಿಂಗ್ ವಾಟರ್ ಅಸೋಸಿಯೇಷನ್ ಮಾಜಿ ಸದಸ್ಯ ಮೆಹುಲ್ ಜಿ.ಪಟೇಲ್ ಹೇಳಿದರು.

### ಈ ಘಟಕಗಳಿಗೆ ಬೋರ್‌ವೆಲ್ ನೀರೇ ಆಧಾರ

ನಗರದಲ್ಲಿನ 4 ಘಟಕಗಳ ರಾಸಾಯನಿಕ ಪರೀಕ್ಷೆಯಲ್ಲಿ ಕಳಪೆ ಎಂಬ ವರದಿ ಬಂದಿದ್ದು, 7 ಘಟಕಗಳು ಸೂಕ್ಷ್ಮ ಜೀವಾಣು ವಿಶ್ಲೇಷಣೆ ಪರೀಕ್ಷೆಯಲ್ಲಿ ದೋಷ ಕಂಡು ಬಂದಿದೆ. ಅಂತಹ ಘಟಕಗಳಿಗೆ ಬೀಗ ಮುದ್ರೆ ಹಾಕಲು ಇಲಾಖೆ ಅಧಿಕಾರಿಗಳು ಮುಂದಾಗಿದ್ದಾರೆ. ನಗರದಲ್ಲಿ 5 ಪ್ಯಾಕೇಜಿಂಗ್ ನೀರು ಘಟಕಗಳು ಪರವಾನಗಿ ಪಡೆದು ನಡೆಯುತ್ತಿದ್ದು, ಸಾಕಷ್ಟು ಘಟಕಗಳು ಪರವಾನಗಿ ಪಡೆಯದೇ ನಡೆಯುತ್ತಿವೆ. ಈ ಘಟಕಗಳಿಗೆ ಬೋರ್‌ವೆಲ್ ನೀರೇ ಆಧಾರವಾಗಿದ್ದು, ಆಹಾರ ಸುರಕ್ಷತಾ ಮತ್ತು ಗುಣಮಟ್ಟದ ಪ್ರಾಧಿಕಾರದ ನಿಗದಿಪಡಿಸಿದ ಮಾನದಂಡಗಳನ್ನು ಇಟ್ಟುಕೊಂಡು ನೀರನ್ನು ಶುದ್ಧೀಕರಿಸದಿರುವುದೇ ಸಮಸ್ಯೆಯಾಗಿದೆ ಎನ್ನುತ್ತಾರೆ ಪ್ರಾಧಿಕಾರದ ಅಧಿಕಾರಿಗಳು. ನಗರದಲ್ಲಿ ಇರುವ ನೀರಿನ ಘಟಕಗಳೊಂದಿಗೆ ಹೊರಗಿನಿಂದ ಬರುವ ನಾನಾ ಬ್ರ್ಯಾಂಡ್‌ಗಳ ಕುಡಿಯುವ ನೀರಿನ ಬಾಟಲ್‌ಗಳನ್ನು ಅಧಿಕಾರಿಗಳ ತಂಡ ನಿರಂತರವಾಗಿ ವ್ಯಾಪಾರ ಸ್ಥಳಗಳಲ್ಲಿ ಪರಿಶೀಲಿಸುವ ಕಾರ್ಯ ನಡೆಸುತ್ತಿದೆ. ಅಂತಹ ಬ್ರ್ಯಾಂಡ್‌ಗಳ ಉತ್ಪನ್ನಗಳಲ್ಲಿಯೂ ಕಳಪೆ ಕಂಡು ಬಂದರೆ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ.

## ಮಿನಿ ನ್ಯೂಸ್

### ಶಿರಾದಲ್ಲಿ ಶಂಕರಚಾರ್ಯ ಉತ್ಸವ

• ಉದಯವಾಹಿನಿ, ಶಿರಾ

ನಗರದ ಲಕ್ಷ್ಮಿನಾರಾಯಣಸ್ವಾಮಿ ದೇವಸ್ಥಾನದಲ್ಲಿ ಏ.30ರಿಂದ ಮೇ2 ರವರೆಗೆ ಶಂಕರ ಸೇವಾ ಟ್ರಸ್ಟ್, ವಿಪ್ರ ಗೆಳೆಯರ ಬಳಗ ಮತ್ತು ಶಾರದಾ ಮಹಿಳಾ ಮಂಡಳಿಯಿಂದ ಶಂಕರ ಜಯಂತಿ ಹಮ್ಮಿಕೊಳ್ಳಲಾಗಿದೆ. ಏ.30ರಂದು ಬೆಳಗ್ಗೆ ಗುರುಪ್ರಾರ್ಥನೆ, ಗಣಪತಿ ಮತ್ತು ಶಾರದಾ ಚಂದ್ರಮೌಳೇಶ್ವರ ದೇವರಿಗೆ ಪಂಚಾಮೃತ ಅಭಿಷೇಕ, ಲೋಕ ಕಲ್ಯಾಣಾರ್ಥವಾಗಿ ಲಲಿತಾ ಸಹಸ್ರನಾಮ ಪಾರಾಯಣ, ಲಲಿತಾ ಹೋಮ, ಪೂರ್ಣಾಹುತಿ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ ಶಾರದಾ ಮಹಿಳಾ ಮಂಡಳಿ ವತಿಯಿಂದ ಲಲಿತಾ ಸಹಸ್ರನಾಮ ಪಾರಾಯಣ, ಸಾಮೂಹಿಕ ಕುಂಕುಮಾರ್ಚನೆ, ಶಾರದಾಂಬೆಗೆ ವಿಶೇಷವಾಗಿ ಲಕ್ಷ ಮಲ್ಲಿಕಾರ್ಚನೆ ನಡೆಯಲಿದೆ. ಮೇ1ರಂದು ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಕಲಶ ಸ್ಥಾಪನೆ, ರುದ್ರಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ.

### ತಹಶೀಲ್ದಾರ್ ಅಮಾನತಿಗೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ, ಕುಣಗಲ್

ತಾಲ್ಲೂಕಿನಲ್ಲಿ ಸರ್ಕಾರಿ ಜಮೀನು ರಕ್ಷಣೆ ಮಾಡದ ಮತ್ತು ಪ್ರಭಾವಿಗಳಿಂದ ಒತ್ತುವರಿಯಾಗಿರುವ ಸರ್ಕಾರ ಜಮೀನು ತೆರವು ಮಾಡಲು ತಹಶೀಲ್ದಾರ್ ವಿಫಲರಾಗಿದ್ದಾರೆ ಎಂದು ಆರೋಪಿಸಿ ರಾಜ್ಯ ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆ ಪದಾಧಿಕಾರಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಎಚ್.ಜಿ.ರಮೇಶ್, ತಾಲ್ಲೂಕಿನ ಕಸಬಾ ಹೋಬಳಿ ಕೆಂಕೆರೆ, ಎಡೆಯೂರು ಹೋಬಳಿ ಬ್ಯಾಲದಕೆರೆ, ನಡೆಮಾವಿನಪುರ, ಹುತ್ರಿದುರ್ಗ ಹೋಬಳಿ ಕುಂದೂರು ಗೊಟ್ಟಿಕೆರೆ ಸೇರಿದಂತೆ ಇನ್ನಿತರ ಕಡೆ ಸರ್ಕಾರಿ ಆಸ್ತಿ ಒತ್ತುವರಿದಾರರ ಜತೆ ತಹಶೀಲ್ದಾರ್ ಶಾಮೀಲಾಗಿದ್ದಾರೆ. ಒತ್ತುವರಿ ತೆರವುಗೊಳಿಸುವಲ್ಲಿ ವಿಫಲರಾಗಿದ್ದಾರೆ ಎಂದು ದೂರಿದರು. ಈ ಬಗ್ಗೆ ಜಿಲ್ಲಾಧಿಕಾರಿ ಗಮನಕ್ಕೂ ತರಲಾಗಿದೆ. ಜಿಲ್ಲಾಧಿಕಾರಿ ಸೂಚನೆಗೂ ಬೆಲೆ ಕೊಡದೆ ಒತ್ತುವರಿದಾರರಿಗೆ ನೋಟಿಸ್ ನೀಡಿ ವಿವರಣೆ ಕೇಳುವ ನೆಪದಲ್ಲಿ ಕ್ರಮ ತೆಗೆದುಕೊಳ್ಳುವಲ್ಲಿ ವಿಳಂಬ ನೀತಿ ಅನುಸರಿಸಿ, ಒತ್ತು ವರಿದಿಗಾರರಿಗೆ ಪರೋಕ್ಷವಾಗಿ ಸಹಕರಿಸುತ್ತಿದ್ದಾರೆ ಎಂದು ಆರೋಪಿ ಸಿದರು. ಪ್ರತಿಭಟನೆಯಲ್ಲಿ ವೇದಿಕೆ ಕೋಲಾರ ಜಿಲ್ಲಾ ಘಟಕ ಅಧ್ಯಕ್ಷ ಸೋಮಸುಂದರ್, ದೀಪಕ್, ವಿಷ್ಣುವಿಜಯ್, ರಂಗಸ್ವಾಮಿ, ಆಕಾಶ್, ಲಿಂಗೇಗೌಡ, ಗಂಗಾಧರ್ ಇದ್ದರು.

### ಎರಡು ಮನೆಗಳ ಕಳ್ಳತನ

• ಉದಯವಾಹಿನಿ, ತುರುವೇಕೆರೆ

ಪಟ್ಟಣದ ಬಸವೇಶ್ವರ ನಗರ ಮತ್ತು ಬ್ರಾಹ್ಮಣರ ಬೀದಿಯಲ್ಲಿ ಬೀಗ ಹಾಕಿದ್ದ ಮನೆಗಳ ಬೀಗ ಮುರಿದು ಕಳ್ಳರು ಕಳ್ಳತನ ಮಾಡಿದ್ದಾರೆ. ಬಸವೇಶ್ವರ ನಗರದ ನಿವಾಸಿ ರವಿಕುಮಾರ್ ಕುಟುಂಬ ಸಹಿತ ಹುಣುಸೆ ಘಟ್ಟಕ್ಕೆ ತೆರಳಿದ್ದರು. ಮರುದಿನ ಮನೆಗೆ ಬಂದು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಕಳ್ಳರು ಮನೆಯ ಕಿಟಿಕಿ ಗಾಜು ಒಡೆದು ಸರಳುಗಳನ್ನು ಕತ್ತರಿಸಿ ಮನೆಯೊಳಗೆ ನುಗ್ಗಿದ್ದಾರೆ. ಬೀರುವಿನಲ್ಲಿಟ್ಟಿದ್ದ 197 ಗ್ರಾಂ ತೂಕದ ವಿವಿಧ ಮಾದರಿ ಚಿನ್ನದ ಆಭರಣ, 30 ಸಾವಿರ ನಗದು ಕದ್ದು ಪರಾರಿಯಾಗಿದ್ದಾರೆ.

ಪಟ್ಟಣದ ಬ್ರಾಹ್ಮಣರ ಬೀದಿಯಲ್ಲಿರುವ ಫೋಟೊ ಗುಂಡಣ್ಣ ಅವರ ಮನೆಯಲ್ಲೂ ಕಳ್ಳತನ ನಡೆದಿದೆ. ಇವರು ಸಹ ಮೂರ್ನಾಲ್ಕು ದಿನದ ಹಿಂದೆ ಆಸ್ಪತ್ರೆಗೆ ತೆರಳಿದ್ದರು. ಮನೆಗೆ ಬಂದು ನೋಡಿದಾಗ ಮನೆ ಮುಂದಿನ ಬಾಗಿಲನ್ನು ಹಾರೆಯಿಂದ ಮೀಟಿ ಲಾಕರ್ ಒಡೆದಿದ್ದಾರೆ. ಒಳನುಗ್ಗಿ ಮನೆಯೊಳಗಿದ್ದ ಎರಡು ಬೀರ್‌ಗಳನ್ನು ಒಡೆದಿದ್ದಾರೆ. ಬೀರುವಿನ ಒಳಗಿದ್ದ ಒಂದು ಕೆ.ಜಿ ಬೆಳ್ಳಿಯ ಪೂಜಾ ಸಾಮಗ್ರಿ, 50 ಸಾವಿರ ದೋಚಿದ್ದಾರೆ. ಎರಡು ಪ್ರತ್ಯೇಕ ಕಳವು ಘಟನೆಯಿಂದ ನಾಗರಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಸ್ಥಳಕ್ಕೆ ಶ್ವಾನದಳ ಮತ್ತು ಬೆರಳಚ್ಚು ತಜ್ಞರು ಹಾಗೂ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದರು.

### ಬೆಟ್ಟಿಂಗ್ ಕಟ್ಟಿ ಮದ್ಯಪಾನ ಮಾಡಿದ ವ್ಯಕ್ತಿ ಸಾವು

• ಉದಯವಾಹಿನಿ, ಮುಳಬಾಗಿಲು

10 ಸಾವಿರ ಬೆಟ್ಟಿಂಗ್ ಕಟ್ಟಿ, ನೀರು ಮಿಶ್ರಣ ಮಾಡದೇ, ಐದು ಬಾಟಲ್ ಮದ್ಯಪಾನ ಮಾಡಿದ ವ್ಯಕ್ತಿ ಆಸ್ಪತ್ರೆಯಲ್ಲಿ ಮೃತಪಟ್ಟ ಘಟನೆ ನಡೆದಿದೆ. ತಾಲ್ಲೂಕಿನ ಪೂಜಾರಹಳ್ಳಿ ಗ್ರಾಮದ ಕಾರ್ತೀಕ್ (21) ಅದೇ ಗ್ರಾಮದ ಸ್ನೇಹಿತ ವೆಂಕಟರೆಡ್ಡಿ, ಸುಬ್ರಮಣಿ ಇತರರ ಜೊತೆಗೆ 10 ಸಾವಿರಕ್ಕೆ ಬೆಟ್ಟಿಂಗ್ ಕಟ್ಟಿದ್ದ. ಅದರಂತೆ ನೀರು ಬೆರೆಸದೇ ಐದು ಬಾಟಲ್ ಒರಿಜಿನಲ್ ಚಾಯ್ಸ್ ಮದ್ಯಪಾನವನ್ನು ನೇರವಾಗಿ ಕುಡಿದ ಪರಿಣಾಮವಾಗಿ ತೀರಾ ಅಸ್ವಸ್ಥನಾಗಿದ್ದ. ಕೂಡಲೇ ಸ್ಥಳೀಯರು ಅವನನ್ನು ಮುಳಬಾಗಿಲು ಆಸ್ಪತ್ರೆಗೆ ಸಾಗಿಸಿದರು. ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ. ಮೃತನಿಗೆ 9 ದಿನಗಳ ಹಿಂದೆಯಷ್ಟೇ ಹೆಣ್ಣು ಮಗು ಜನಿಸಿತ್ತು. ಕಾರ್ತೀಕ್ ಗೆ ಅಪಾಯಕಾರಿಯಾಗಿ, ಅತಿಯಾಗಿ ಮದ್ಯ ಕುಡಿಸಿ ಸಾವಿಗೆ ಪ್ರಚೋದನೆ ನೀಡಿದ ಕಾರಣಕ್ಕೆ ವೆಂಕಟರೆಡ್ಡಿ, ಸುಬ್ರಮಣಿ ಹಾಗೂ ಇನ್ನೂ ನಾಲ್ಕು ಮಂದಿಯ ವಿರುದ್ಧ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ. ವೆಂಕಟರೆಡ್ಡಿ ಹಾಗೂ ಸುಬ್ರಮಣಿಯನ್ನು ಬಂಧಿಸಿದ್ದು ಉಳಿದ ನಾಲ್ಕು ಮೂರು ಮಂದಿ ಪರಾರಿಯಾಗಿದ್ದಾರೆ. ನಂಗಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ನಮ್ಮ ಬದುಕಿಗೆ ನಾವೇ ಶಿಲ್ಪಿ

• ಉದಯವಾಹಿನಿ, ರಾಮನಗರ

ನಿನ್ನ ಬದುಕನ್ನು ರೂಪಿಸಿಕೊಳ್ಳಬೇಕಾದ ಶಿಲ್ಪಿ ನೀನೇ ಎಂದು ಸ್ವಾಮಿ ವಿವೇಕಾನಂದ ಅವರು ಕರೆ ಕೊಟ್ಟರು. ಡಾ. ಬಿ.ಆರ್. ಅಂಬೇಡ್ಕರ್ ಅವರು, ವಿದ್ಯೆಯೆಂಬುದು ಹುಲಿಯ ಹಾಲಿದ್ದಂತೆ. ಅದನ್ನು ಕುಡಿದವರು ಘರ್ಜಿಸಲೇಬೇಕು ಎಂದು ವನವಾಸಿ ಕಲ್ಯಾಣ ಜಿಲ್ಲಾ ಖಜಾಂಚಿ ಆರ್. ಕೆ. ಸತೀಶ್ ಹೇಳಿದರು. ಪ್ರೊಫೆಸ್ ಎಜುಕೇಷನಲ್ ಟ್ರಸ್ಟ್, ನ್ಯೂ ಎಕ್ಸ್‌ಪರ್ಟ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್, ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ಆಯೋಜಿಸಿದ್ದ ಎಕ್ಸ್‌ಪರ್ಟ್ ಯುವ ಉತ್ಸವ ಕಾರ್ಯಕ್ರಮ ಉದ್ಘಾಟಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ನೀವು ಜೀವಮಾನವಿಡೀ ಮಾಡಿದ ಕೆಲಸವು ಕರ್ಮದ ರೂಪದಲ್ಲಿ ಮತ್ತೆ ವಾಪಸ್ಸು ಬರುತ್ತದೆ. ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲೇ ಇದೆ ಎಂದರು. ಎಸ್.ಎಂ.ವಿ ಸಂಸ್ಥಾಪಕಿ ರಾಧಿಕಾ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಗುರಿ ಮುಟ್ಟುವ ತನಕ ಪ್ರಯತ್ನವನ್ನು ಬಿಡಬಾರದು ಎಂದರು.


## ವೀರಶೈವ ಧರ್ಮ ಸಮ್ಮೇಳನ

• ಉದಯವಾಹಿನಿ, ತುಮಕೂರು

ನಗರ ವೀರಶೈವ ಸಮಾಜ ಸೇವಾ ಸಮಿತಿಯಿಂದ ಏ.29 ಮತ್ತು 30ರಂದು ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ರೇಣುಕಾಚಾರ್ಯ, ಬಸವೇಶ್ವರ ಮತ್ತು ಸಿದ್ದರಾಮೇಶ್ವರ ಜಯಂತ್ಯುತ್ಸವ, ವೀರಶೈವ ಧರ್ಮ ಸಮ್ಮೇಳನ ಏರ್ಪಡಿಸಲಾಗಿದೆ.

29ರಂದು ಸಂಜೆ 6 ಗಂಟೆಗೆ ಧರ್ಮ ಸಮ್ಮೇಳನ ನಡೆಯಲಿದೆ. ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಎಲ್.ರೇವಣಸಿದ್ದಯ್ಯ ಉದ್ಘಾಟಿಸಲಿದ್ದಾರೆ. ಲೇಖಕಿ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ಉಪನ್ಯಾಸ ನೀಡಲಿದ್ದಾರೆ.

ಕೇಂದ್ರ ಜಲ ಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಇತರರು ಭಾಗವಹಿಸಲಿದ್ದಾರೆ ಎಂದು ನಗರ ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಎಸ್.ಜಿ.ಚಂದ್ರಮೌಳಿ ಇಲ್ಲಿ ಹೇಳಿದರು.



> ಏ. 30ರಂದು ಮಧ್ಯಾಹ್ನ 3.30 ಗಂಟೆಗೆ ರೇಣುಕಾಚಾರ್ಯ, ಬಸವೇಶ್ವರ, ಸಿದ್ದರಾಮೇಶ್ವರ ಜಂಟಿ ಉತ್ಸವ ನಡೆಯಲಿದೆ. ಅರಳೇಪೇಟೆ ಬಸವೇಶ್ವರ ಸ್ವಾಮಿ ದೇವಾಲಯದ ಬಳಿ ಉತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಕರಿಬಸವ ಮಠದ ಚನ್ನಬಸವ ರಾಜೇಂದ್ರ ಸ್ವಾಮೀಜಿ, ಚಿಕ್ಕತೊಟ್ಲುಕೆರೆ ಮಠದ ಅಟವಿ ಶಿವ ಲಿಂಗ ಸ್ವಾಮೀಜಿ, ಹಿರೇಮಠದ ಶಿವಾನಂದ ಶಿವಾ ಚಾರ್ಯ ಸ್ವಾಮೀಜಿ, ಸಿದ್ದರಬೆಟ್ಟದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಮುಂತಾದವರು ಪಾಲ್ಗೊಳ್ಳಲಿದ್ದಾರೆ
> –ಎಸ್.ಜಿ.ಚಂದ್ರಮೌಳಿ, ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ

ವೇದಿಕೆ ಕಾರ್ಯಕ್ರಮದ ನಂತರ ಅಭಿನವ ಬಸವೇಶ್ವರ ನೃತ್ಯ ರೂಪಕ ಪ್ರದರ್ಶಿಸಲಾಗುತ್ತದೆ.

ಏ. 28ರಂದು ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಆಸ್ಪತ್ರೆ, ವೀರಶೈವ ಉಚಿತ ವೈದ್ಯಕೀಯ ಸೇವಾ ಕೇಂದ್ರದ ಸಹ ಯೋಗದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮುಖಂಡರಾದ ಕೋರಿ ಮಂಜುನಾಥ್, ಟಿ.ಸಿ.ಓಹಿಲೇಶ್ವರ್, ಕೆ.ವೈ.ಸಿದ್ದಲಿಂಗಮೂರ್ತಿ, ಮಲ್ಲಿಕಾರ್ಜುನಯ್ಯ, ಬಿ.ಎಸ್.ಮಂಜುನಾಥ್, ಟಿ.ವಿ.ಹರೀಶ್, ಡಿ.ಜೆ.ಶಶಿಧರನ್, ಜಿ.ಕೆ.ಸ್ವಾಮಿ, ಟಿ.ಆರ್.ನಟರಾಜು, ಆರ್.ಪ್ರಭು, ಮಹೇಶ್ ಬಾಬು, ವಿನಯ್, ಉಮೇಶ್, ಕುಮಾರಸ್ವಾಮಿ ಹಾಜರಿದ್ದರು.

## ಮಂಚೇನಹಳ್ಳಿ ಬಂದ್‌ಗೆ ಉತ್ತಮ ಪ್ರತಿಕ್ರಿಯೆ

• ಉದಯವಾಹಿನಿ, ಮಂಚೇನಹಳ್ಳಿ



ಉದಯವಾಹಿನಿ ಚಿತ್ರ

ವಿಧಾನ ಪರಿಷತ್ ಮಾಜಿ ಸದಸ್ಯ, ಬಿಜೆಪಿ ಮುಖಂಡ ವೈ.ಎ ನಾರಾಯಣ ಸ್ವಾಮಿ ಅವರ ಪತ್ನಿ ಉಷಾ ನಂದಿನಿ ಅವರಿಗೆ ತಾಲ್ಲೂಕಿನ ಕನಗಾನಕೊಪ್ಪ ಗ್ರಾಮದ ಬಳಿ ನೀಡಿರುವ ಗಣಿಗಾರಿಕೆ ಅನುಮತಿ ರದ್ದುಗೊಳಿಸಬೇಕು. ರೈತರ ಮೇಲೆ ಗುಂಡು ಹಾರಿಸಿದವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿ ಸೋಮವಾರ ಕರೆ ನೀಡಿರುವ ಮಂಚೇನಹಳ್ಳಿ ಬಂದ್ ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ತಾಲ್ಲೂಕು ಕೇಂದ್ರ ಮಂಚೇನಹಳ್ಳಿಯಲ್ಲಿ ಬೆಳಿಗ್ಗೆಯಿಂದ ಅಂಗಡಿಗಳು ಬಾಗಿಲು ಹಾಕಿವೆ. ಆಸ್ಪತ್ರೆಗಳು, ಮೆಡಿಕಲ್ ಸ್ಟೋರ್ ಗಳು ಮಾತ್ರ ತೆರೆದಿವೆ. ರೈತ ಸಂಘದ ಮುಖಂಡರ ಮೆರವಣಿಗೆ ನಡೆಸಿದರು. ಬಸ್ ನಿಲ್ದಾಣ ಸಮೀಪದ ಗಣೇಶ ಗುಡಿ ಬಳಿ ಬಹಿರಂಗ ಸಮಾವೇಶ ಆರಂಭವಾಗಿದ. ವಾಹನಗಳ ಸಂಚಾರ ಯಥಾಸ್ಥಿತಿಯಲ್ಲಿದೆ. ಶಾಶ್ವತ ನೀರಾವರಿ ಹೋರಾಟ ಸಮಿತಿ, ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಬಂದ್ ನಲ್ಲಿ ಭಾಗಿಯಾಗಿವೆ.

ತಾಲ್ಲೂಕಿನ ಕನಗಾನಕೊಪ್ಪ ಗ್ರಾಮದ ಬಳಿ ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ. ಈ ಸ್ಥಳಕ್ಕೆ ಗಣಿ ಲಾರಿಗಳ ಸಂಚಾರಕ್ಕೆ ಅನುಕೂಲವಾಗಲು ಇತ್ತೀಚಿಗೆ ರಸ್ತೆ ನಿರ್ಮಿಸಲು ಗಣಿಗಾರಿಕೆಯವರು ಮುಂದಾಗಿದ್ದರು. ಇದಕ್ಕೆ ವಿರೋಧ ವ್ಯಕ್ತಪಡಿಸಿ ರೈತ ರವಿಕುಮಾರ್ ಮೇಲೆ ಸಕಲೇಶ್ ಎಂಬಾತ ಗುಂಡು ಹಾರಿಸಿದ್ದ. ಪ್ರಕರಣ ಸಂಬಂಧ ಪೊಲೀಸರು ಈಗಾಗಲೇ ನಾಲ್ಕು ಮಂದಿಯನ್ನು ಬಂಧಿಸಿದ್ದಾರೆ. ಘಟನೆಯು ಶಾಸಕ ಪ್ರದೀಪ್ ಈಶ್ವರ್ ಮತ್ತು ಸಂಸದ ಡಾ.ಕೆ.ಸುಧಾಕರ್ ನಡುವೆ ರಾಜಕೀಯ ಜಟಾಪಟಿಗೂ ಕಾರಣವಾಗಿದೆ.

## ಪಡಿತರಕ್ಕೆ ನೆಟ್‌ವರ್ಕ್ ಸಮಸ್ಯೆ: ಗ್ರಾಮಸ್ಥರ ಪರದಾಟ

• ಉದಯವಾಹಿನಿ, ಹನೂರು



ಉದಯವಾಹಿನಿ ಚಿತ್ರ

ತಾಲ್ಲೂಕಿನ ಪೊನ್ನಾಚಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪಡಿತರ ಅಕ್ಕಿ ಪಡೆಯಲು ನೆಟ್‌ವರ್ಕ್ ಸಮಸ್ಯೆ ಎದುರಾಗಿರುವ ಪರಿಣಾಮ ಪಡಿತರದಾರರು ಪರದಾಡುವಂತಾಗಿದೆ. ಪೊನ್ನಾಚಿ ಗ್ರಾಮದಿಂದ 2 ಕಿ.ಮೀ ದೂರದಲ್ಲಿರುವ ಅಸ್ತೂರು ಗ್ರಾಮದಲ್ಲಿ 250ಕ್ಕೂ ಹೆಚ್ಚು ಪಡಿತರ ಪಡೆಯುವ ಕುಟುಂಬ ಗಳಿವೆ. ಇವರಲ್ಲಿ ಅಂಗವಿಕಲರು, ಗರ್ಭಿಣಿಯರು, ವಯೋವೃದ್ಧರು ಇದ್ದಾರೆ. ಪಡಿತರ ಹಂಚುವ ಮೊದಲು ಬೆರಳಚ್ಚು ನೀಡುವುದು ಕಡ್ಡಾಯ. ಆದರೆ, ಬೆರಳಚ್ಚು ಮಾಡಲು ಇಲ್ಲಿ ನೆಟ್‌ವರ್ಕ್ ಸಿಗುವುದಿಲ್ಲ. ಹೀಗಾಗಿ ನ್ಯಾಯಬೆಲೆ ಅಂಗಡಿಯವರು ಪೊನ್ನಾಚಿಗೆ ಬಂದು ಸೇವೆ ನೀಡುತ್ತಿದ್ದು, ಅಸ್ತೂರು ಗ್ರಾಮಸ್ಥರಿಗೆ ತೊಂದರೆ ಉಂಟಾಗಿದೆ. ಇಲ್ಲಿಗೆ ನಡೆದುಕೊಂಡು ಬಂದರೂ ಬೆಳಿಗ್ಗೆಯಿಂದ ಸಂಜೆವರೆಗೆ ಸರದಿ ಸಾಲಿನಲ್ಲಿ ನಿಂತು ಊಟ ನೀರು ಇಲ್ಲದೆ ಪಡಿತರ ಬೆರಳಚ್ಚು ಮಾಡಬೇಕಾಗುತ್ತದೆ. ಇಲ್ಲಿರುವ ಗ್ರಾಮಗಳೆಲ್ಲವೂ ಕಾಡಂಚಿನಲ್ಲಿರುವುದರಿಂದ ಕಾಡು ಪ್ರಾಣಿಗಳ ಹಾವಳಿ ಕೂಡ ಜನರಲ್ಲಿ ಆತಂಕ ಉಂಟುಮಾಡಿದೆ.

ಸಂಬಂಧಪಟ್ಟವರು ಸಮಸ್ಯೆ ಸರಿ ಪಡಿಸಿಕೊಡುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಪೊನ್ನಾಚಿಯಲ್ಲಿ ಏರಟೆಲ್, ಜಿಯೋ ಟವರ್‌ಗಳಿದ್ದು, ಅಕ್ಕಪಕ್ಕದ ಗ್ರಾಮಗಳಿಗೆ ನೆಟ್‌ವರ್ಕ್ ಸಿಗದಿರುವುದು ದುರದೃಷ್ಟಕರ. ಇಂತಹ ಅವ್ಯವಸ್ಥೆಯ ಬಗ್ಗೆ ಯಾರನ್ನು ಕೇಳುವುದು ಎಂದು ಗ್ರಾಮದ ರವಿಕುಮಾರ್ ಅವಲತ್ತುಕೊಂಡರು. ಶೀಘ್ರ ವಾಗಿ ಸಮಸ್ಯೆ ನಿವಾರಿಸದಿದ್ದಲ್ಲಿ ಗ್ರಾಮಸ್ಥರೆಲ್ಲರೂ ಹನೂರು ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದ್ದಾರೆ.

## ಮಹನೀಯರ ಆದರ್ಶಗಳ ಅರಿವು ಮೂಡಿಸಿ: ಶಾಸಕಿ

• ಉದಯವಾಹಿನಿ, ಕೆಜಿಎಫ್



ಉದಯವಾಹಿನಿ ಚಿತ್ರ

ಎಲ್ಲಾ ಮಹನೀಯರ ಸಾಧನೆಗಳನ್ನು ಗುರುತಿಸಿ, ಗೌರವಿಸಬೇಕು. ಅವರ ಆದರ್ಶಗಳನ್ನು ಸಮಾಜಕ್ಕೆ ಪರಿಚಯಿಸಬೇಕು. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಪೂರ್ವಭಾವಿ ಸಭೆಗಳನ್ನು ಕನಿಷ್ಠ ಹತ್ತು ದಿನ ಮೊದಲೇ ಕರೆಯಬೇಕು. ಇದರಿಂದಾಗಿ ಸಿದ್ಧತೆ ಮಾಡಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಶಾಸಕಿ ಎಂ.ರೂಪಕಲಾ ಹೇಳಿದರು. ತಾಲ್ಲೂಕು ಆಡಳಿತ ಸೌಧದಲ್ಲಿ ಸೋಮವಾರ ನಡೆದ ಬಸವ ಮತ್ತು ಶಂಕರಾಚಾರ್ಯರ ಜಯಂತಿಯಲ್ಲಿ ಮಾತನಾಡಿದರು. ಈ ಸಲ ಈ ಇಬ್ಬರು ಮಹನೀಯರ ಜಯಂತಿ ಸಿದ್ದತೆಗೆ ಸಾಕಷ್ಟು ಸಮಯಾವಕಾಶ ಇರಲಿಲ್ಲ. ಮುಂದಿನ ದಿನಗಳಲ್ಲಿ ಮಹನೀಯರ ಜಯಂತಿ ಸಂಬಂಧವಾಗಿ ಪೂರ್ವಭಾವಿ ಸಭೆಯನ್ನು ಕೊನೆಪಕ್ಷ ಹತ್ತು ದಿನಗಳ ಮೊದಲೇ ಕರೆಯಲಾಗುತ್ತದೆ. ಇದರಿಂದಾಗಿ ಸಿದ್ಧತೆಗೆ ಅನುಕೂಲವಾಗಲಿದೆ. ಈ ಬಾರಿ ಆದ ಲೋಪ ಮುಂದಿನ ದಿನಗಳಲ್ಲಿ ಆಗುವುದಿಲ್ಲ ಎಂದು ಹೇಳಿದರು.

ವೀರಶೈವ ಸಮಾಜದ ಮುಖಂಡ ಬಾ.ಹಾ. ಶೇಖರಪ್ಪ, ಅಶೋಕ್ ಲೋಣಿ, ಕುಬೇರಪ್ಪ, ಸುರೇಶ್ ಹೂಗಾರ ಮಾತನಾಡಿ, ಸಾಂಸ್ಕೃತಿಕ ನಾಯಕ ಬಸವಣ್ಣನ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಬೇಕು. ಅವರ ಭಾವಚಿತ್ರವನ್ನು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಹಾಕಬೇಕು. ಬೆಮಲ್ ಬಸವ ಸಮಿತಿಗೆ ಅನುದಾನ ಕೊಡಿಸಬೇಕು ಎಂದು ಆಗ್ರಹಿಸಿದರು.

ಶಂಕರಾಚಾರ್ಯ ಜಯಂತಿಗೆ ಮೊದಲು ಸರ್ಕಾರ ಅನುದಾನ ಕೊಡುತ್ತಿತ್ತು. ಕಳೆದ ಬಾರಿ ಕೊಡಲಿಲ್ಲ. ಈ ಬಾರಿಯಾದರೂ ಅನುದಾನ ನೀಡಬೇಕು ಎಂದು ಅರ್ಚಕರ ಸಂಘದ ಮುಖಂಡ ಗುರು ದೀಕ್ಷಿತ್ ಮನವಿ ಮಾಡಿದರು. ಶಂಕರಮಠ ಶಿಥಿಲವಾಗಿದೆ. ಅದನ್ನು ದುರಸ್ತಿ ಮಾಡಲು ಶಾಸಕರ ನಿಧಿಯಿಂದ ಹಣ ಬಿಡುಗಡೆ ಮಾಡಬೇಕು ಎಂದು ನಾಗೇಂದ್ರ ಕೋರಿದರು.

ನಗರಸಭೆ ಅಧ್ಯಕ್ಷೆ ಇಂದಿರಾಗಾಂಧಿ, ಉಪಾಧ್ಯಕ್ಷ ಜರ್ಮನ್ ಜೂಲಿಯಸ್, ಸ್ಥಾಯಿ ಸಮಿತಿ ಅಧ್ಯಕ್ಷ ವಳ್ಳಲ್ ಮುನಿಸ್ವಾಮಿ, ತಹಶೀಲ್ದಾರ್ ಕೆ.ನಾಗವೇಣಿ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ವೆಂಕಟೇಶಪ್ಪ, ಆಯುಕ್ತ ಪವನ್‌ಕುಮಾರ್, ಇನ್‌ಸ್ಪೆಕ್ಟರ್ ನವೀನ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಶಿವಕುಮಾರ್, ರಾಜಶೇಖರ್, ಹೇಮಲತಾ, ಮಂಜುನಾಥ್, ಹೇಮಲತಾ, ಅಶ್ವಥ್ ಇದ್ದರು.

## ಹಲಸಿನ ಘಮಲಿಗೆ ತೋಟದತ್ತ ಕಾಡಾನೆಗಳು: ಇರಲಿ ಎಚ್ಚರ

• ಉದಯವಾಹಿನಿ, ಮಡಿಕೇರಿ



ಉದಯವಾಹಿನಿ ಚಿತ್ರ

ಕೊಡಗು ಜಿಲ್ಲೆಯ ಬಹುತೇಕ ತೋಟಗಳಲ್ಲಿ ಈಗ ಹಲಸಿನ ಘಮಲು ಹೊರಸೂಸುತ್ತಿದೆ. ಇದರ ಸುವಾಸನೆಗೆ ಮಾರು ಹೋಗಿರುವ ಕಾಡಾನೆಗಳು ಹೆಚ್ಚಿನ ಸಂಖ್ಯೆಯಲ್ಲಿ ತೋಟಗಳತ್ತ ಬರುತ್ತಿವೆ. ಹಲಸಿನ ಹಣ್ಣಿನ ಘಮಲಿನ ಗುಂಗನ್ನೇ ಹಿಡಿಯುವ ಕಾಡಾನೆಗಳು ಹಲಸನ್ನು ಅರಸಿ ನಾಡಿನತ್ತ ಹೆಜ್ಜೆ ಹಾಕುತ್ತಿವೆ. ಇವುಗಳ ಪ್ರತಿ ಹೆಜ್ಜೆಗೂ ತೋಟದಲ್ಲಿರುವ ಫಲಸು ನಾಶವಾಗುವ ಆತಂಕ ರೈತರದ್ದಾಗಿದೆ.

ಈ ಬಾರಿ ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಹಲಸಿನ ಹಣ್ಣುಗಳು ಮರಗಳಲ್ಲಿ ಬಂದಿವೆ. ಇತ್ತೀಚಿನ ದಿನಗಳಲ್ಲಿ ಸುರಿದ ಮಳೆಯಿಂದ ಹಾಗೂ ಇತರೆ ಕಾರಣಗಳಿಂದ ಹಲಸಿನ ಹಣ್ಣುಗಳು ಮರಗಳಲ್ಲಿ ಹಿಗ್ಗುತ್ತಲೇ ಇವೆ. ಇದು ಆನೆಗಳನ್ನು ಸೆಳೆಯಲು ಬಹು ಮುಖ್ಯವಾದ ಕಾರಣ ಎನಿಸಿವೆ. ಕೆಲವು ತೋಟಗಳಲ್ಲಿ ಬೆಳೆಗಾರರು ಹಲಸಿನ ಕಾಯಿಗಳನ್ನೇ ಕಿತ್ತೆಸೆತ್ತಿದ್ದಾರೆ. ಈ ಮೂಲಕ ಕಾಡಾನೆಗಳ ತಮ್ಮ ತೋಟಗಳತ್ತ ಬಾರದಿರಲಿ ಎಂಬುದು ಅವರು ಆಶಯ. ಆದರೆ, ಅಕ್ಕಪಕ್ಕ, ಮುಂದಿನ ತೋಟಗಳಲ್ಲಿರುವ ಹಸಲಿನ ಘಮಲು ಕಾಡಾನೆಗಳನ್ನು ಸೆಳೆಯುತ್ತಿವೆ. ಇದರಿಂದ ಇತ್ತೀಚಿನ ದಿನಗಳಲ್ಲಿ ಕಾಡಾನೆಗಳ ಉಪಟಳ ಹೆಚ್ಚಾಗಿದೆ ಎಂದು ಅರಣ್ಯ ಅಧಿಕಾರಿಗಳೇ ಹೇಳುತ್ತಾರೆ. ಕಾಡಿನೊಳಗೆ ತೇಗ ಮತ್ತಿತ್ತರೇ ಹಣ್ಣು ಬಿಡದ ಮರಗಳನ್ನು ಹಾಕುವುದಕ್ಕಿಂತ ಹಲಸಿನ ಮರಗಳನ್ನು ಹಾಕಿದರೆ ಕಾಡಾನೆಗಳು ತೋಟಗಳತ್ತ ಬರುವುದು ನಿಲ್ಲುತ್ತದೆ. ಇಲ್ಲವೇ ಕಡಿಮೆಯಾಗುತ್ತದೆ ಎಂಬುದು ರೈತರ ಅಭಿಪ್ರಾಯ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಕಾಡಾನೆಗಳ ನಿಯಂತ್ರಿಸಲು ರೈತರು, ಬೆಳೆಗಾರರು, ಕಾರ್ಮಿಕರು ಪ್ರಯತ್ನ ಪಡದೇ ನೇರವಾಗಿ ಅರಣ್ಯ ಇಲಾಖೆಗೆ ಮಾಹಿತಿ ನೀಡಬೇಕು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಮನವಿ ಮಾಡುತ್ತಾರೆ.

ಕಳೆದೆರಡು ವರ್ಷಗಳ ಹಿಂದೆ ಶನಿವಾರಸಂತೆ ಭಾಗದಲ್ಲಿ ಕೆಲವು ರೈತರು ಕಾಡಾನೆಗಳ ಕಾಟಕ್ಕೆ ರೋಸಿ ಹೋಗಿ ಕಾಫಿ ತೋಟಗಳಲ್ಲಿರುವ ಹಲಸಿನ ಮರಗಳಲ್ಲಿದ್ದ ಹಲಸಿನ ಹಣ್ಣುಗಳನ್ನು ದಾವಣಗೆರೆ, ಶಿವಮೊಗ್ಗ, ಬೆಂಗಳೂರು, ತಮಿಳುನಾಡಿನ ಮಾರಾಟಗಾರರಿಗೆ ಉಚಿತವಾಗಿಯೂ ಕೊಟ್ಟಿದ್ದರು. ಮತ್ತೆ ಕೆಲವರು ನಾಶಪಡಿಸಿದ್ದರು.

## 30ಕ್ಕೆ 'ಹೆಜ್ಜೆ ಮೇಳ' ಮಕ್ಕಳ ಶಿಬಿರ ಮುಕ್ತಾಯ

• ಉದಯವಾಹಿನಿ, ಮಾಲೂರು



ಉದಯವಾಹಿನಿ ಚಿತ್ರ

ಸಾರಂಗ ರಂಗ ಸಾಂಸ್ಕೃತಿಕ ಸಂಘದಿಂದ 'ಹೆಜ್ಜೆ ಮೇಳ' ಮಕ್ಕಳ ಶಿಬಿರ ಇದೇ 30ಕ್ಕೆ ಮುಕ್ತಾಯಗೊಳ್ಳಲಿದ್ದು, ಸರ್ಕಾರಿ ಶಾಲೆ ಮಕ್ಕಳು ಶಿಬಿರದಲ್ಲಿ ಕಲಿತ ಹಲವಾರು ಕಲಾಕೃತಿಗಳನ್ನು ಪ್ರದರ್ಶಿಸಲು ಸಜ್ಜಾಗಿದ್ದಾರೆ. ಜನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ 15 ದಿನಗಳ ಬೇಸಿಗೆ ಶಿಬಿರ 30ಕ್ಕೆ ಮುಕ್ತಾಯಗೊಳ್ಳಲಿದ್ದು, ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 2ರಿಂದ 9ನೇ ತರಗತಿಯ ಸುಮಾರು 65 ಮಕ್ಕಳು ಶಿಬಿರದಲ್ಲಿ ತರಬೇತಿ ಪಡೆದಿದ್ದಾರೆ. ಮಕ್ಕಳಿಗೆ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಕ್ರಾಫ್ಟ್, ಜೇಡಿ ಮಣ್ಣಿನ ಕಲೆ, ಡೊಳ್ಳು ಕುಣಿತ, ಕೋಲಾಟ, ಜನಪದ ಗೀತೆಗಳ ಗಾಯನ ಮತ್ತು ನೃತ್ಯ, ಪ್ರಸಾಧನ(ಮೇಕಪ್), ವಸ್ತ್ರವಿನ್ಯಾಸ ಸೇರಿದಂತೆ 12 ಕಲೆಗಳಲ್ಲಿ ತರಬೇತಿ ನೀಡಲಾಗಿತ್ತು. 30ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಶಿಬಿರದ ಮಕ್ಕಳು ತಾವು ಕಲಿತಿರುವ ಕಲೆಗಳನ್ನು ಪ್ರದರ್ಶಿಸಲಿದ್ದಾರೆ.

ಈ ಬಗ್ಗೆ ಮಾತನಾಡಿದ ಸಂಘದ ಅಧ್ಯಕ್ಷ ಸಿ.ಲಕ್ಷ್ಮಿನಾರಾಯಣ್, ಮಗು ಇತರರೊಡನೆ ಹೇಗೆ ಬೆರೆಯಬೇಕು, ಉಳಿದವರೊಡನೆ ಒಟ್ಟಾಗಿ ಹೇಗೆ ಕೆಲಸ ಮಾಡಬೇಕು ಎನ್ನುವುದನ್ನು ಅರಿತುಕೊಳ್ಳಲು ಇಂತಹ ಶಿಬಿರಗಳು ಸಹಕಾರಿಯಾಗಿವೆ. ಸಣ್ಣಪುಟ್ಟ ಕೆಲಸಗಳ ಮೂಲಕ, ತನ್ನ ಪರಿಣತಿಯನ್ನೂ ಬೆಳಸಿಕೊಳ್ಳುತ್ತದೆ. ಇಲ್ಲಿ ಮಕ್ಕಳಿಗೆ ಪರಿಣತಿ ಹೆಚ್ಚಿಸುವ ಆಟಗಳು, ಇತರ ಚಟುವಟಿಕೆಗಳನ್ನು ಹೇಳಿಕೊಡಲಾಗುತ್ತದೆ. ಇದು ಜೀವನದ ಹಾದಿಯಲ್ಲಿ ಮಕ್ಕಳಿಗೆ ಹೊಸ ದಾರಿಗಲ್ಲಾಗುತ್ತದೆ. ಇಲ್ಲಿನ ಕಲಿಕೆ, ಮುಂದಿನ ದಿನಗಳಲ್ಲಿ ಮಕ್ಕಳ ಅಸಕ್ತಿಗೆ ಹೊಸ ರೂಪ ನೀಡಬಹುದು. ಶಿಬಿರದಲ್ಲಿ ಮಕ್ಕಳಿಗೆ ಅವರ ಅಭಿರುಚಿಗೆ ತಕ್ಕಂತೆ ತರಬೇತಿ ನೀಡಲಾಗಿದೆ ಎಂದರು.

30ರಂದು ನಡೆಯಲಿರುವ ಸಮಾರೋಪ ಸಮಾರಂಭಕ್ಕೆ ಜಿಲ್ಲಾಧಿಕಾರಿ ಎಂ.ಆರ್.ರವಿ, ಶಾಸಕ ಕೆ.ವೈ.ನಂಜೇಗೌಡ, ನಗರ ಪ್ರಾಧಿಕಾರದ ಅಧ್ಯಕ್ಷ ಆಹಮದ್ ನಯುಂ ಉಲ್ಲಾ, ಜನವಾದಿ ಮಹಿಳಾ ಸಂಘದ ಗೀತಾ ಸೇರಿದಂತೆ ಹಲವಾರು ಗಣ್ಯರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

## ಬೇಕಾಬಿಟ್ಟಿ ಕಾಮಗಾರಿ: ಸದಸ್ಯರ ಆಕ್ಷೇಪ

### ನಗರಸಭೆ: 2025–26ನೇ ಸಾಲಿನ ಕ್ರಿಯಾಯೋಜನೆಗಳಿಗೆ ಅನುಮೋದನೆ

• ಉದಯವಾಹಿನಿ, ರಾಮನಗರ

ನಗರದ ವಿವಿಧೆಡೆ ನಡೆಯುತ್ತಿರುವ ರಸ್ತೆ ಕಾಮಗಾರಿಗಳು ಬೇಕಾಬಿಟ್ಟಿಯಾಗಿ ನಡೆಯುತ್ತಿವೆ. ಗುಣಮಟ್ಟದ ಕಾಯ್ದುಕೊಳ್ಳುತ್ತಿಲ್ಲ. ಹಲವೆಡೆ ಕಾಮಗಾರಿ ತುಂಬಾ ವಿಳಂಬವಾಗುತ್ತಿದೆ. ಇದರಿಂದಾಗಿ, ನಗರದ ಕೆಲ ರಸ್ತೆಗಳಲ್ಲಿ ಓಡಾಡಲಾಗದ ಸ್ಥಿತಿ ಇದೆ. ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ನಗರಸಭೆ ಸದಸ್ಯರು ದೂರಿದರು.



ಇಲ್ಲಿನ ನಗರಸಭೆ ಸಭಾಂಗಣದಲ್ಲಿ 2025–26ನೇ ಸಾಲಿನ ಕ್ರಿಯಾಯೋಜನೆಗಳಿಗೆ ಅನುಮೋದನೆ ಪಡೆಯುವುದಕ್ಕಾಗಿ ಇತ್ತೀಚೆಗೆ ಆಯೋಜಿಸಿದ್ದ ತುರ್ತು ವಿಶೇಷ ಸಭೆಯಲ್ಲಿ ಮಾತನಾಡಿದ ಕೆಲ ಸದಸ್ಯರು, ರಸ್ತೆ ಕಾಮಗಾರಿಗಳ ಕುರಿತು ಬೇಸರ ವ್ಯಕ್ತಪಡಿಸಿದರು. ಅದಕ್ಕೆ ಉಳಿದವರು ಸಹ ದನಿಗೂಡಿಸಿದರು. ಜೆಡಿಎಸ್ ಸದಸ್ಯ ಮಂಜುನಾಥ್ ಮಾತನಾಡಿ, ರಾಮದೇವರ ರಥೋತ್ಸವ ಪ್ರಯುಕ್ತ ರಥ ಸಾಗುವ ಮಾರ್ಗದಲ್ಲಿ ಅಧ್ಯಕ್ಷರು ರಸ್ತೆ ನಿರ್ಮಿಸಿ ರಥೋತ್ಸವ ಸುಸೂತ್ರವಾಗಿ ನಡೆಯುವಂತೆ ಮಾಡಿರುವುದಕ್ಕೆ ಅಭಿನಂದನೆಗಳು. ಆದರೆ, ರಥೋತ್ಸವ ಮುಗಿದ ಬಳಿಕ ಹಲವೆಡೆ ಕಾಮಗರಿ ವಿಳಂಬವಾಗುತ್ತಿದೆ. ಮಳೆಗಾಲಕ್ಕೆ ಮುಂಚೆ ಕೆಲಸ ಮುಗಿದರೆ ಜನ ಪರದಾಡುವುದು ತಪ್ಪುತ್ತದೆ ಎಂದರು.

ಕಾಂಗ್ರೆಸ್ ಸದಸ್ಯ ಸೋಮಶೇಖರ್, ರಸ್ತೆ ಕಾಮಗಾರಿ ಗುತ್ತಿಗೆ ಪಡೆದಿರವವರು ಉಪಗುತ್ತಿಗೆ ನೀಡಿ ಕೆಲಸ ಮಾಡಿಸುತ್ತಿದ್ದಾರೆ. ಇದರಿಂದಾಗಿ ಸಾಕಷ್ಟು ಸಮಸ್ಯೆಯಾಗುತ್ತಿದ್ದು, ಕಾಮಗಾರಿ ಸರಿಯಾಗಿ ನಡೆಯುತ್ತಿಲ್ಲ. ಗುತ್ತಿಗೆ ಪಡೆದವರೇ ಗುಣಮಟ್ಟ ಕಾಯ್ದುಕೊಂಡು ಕಾಮಗಾರಿ ಮಾಡಲು ಅಧ್ಯಕ್ಷರು ಸೂಚನೆ ನೀಡಬೇಕು ಎಂದು ಒತ್ತಾಯಿಸಿದರು. ಮತ್ತೊಬ್ಬ ಸದಸ್ಯ ನಿಜಾಮುದ್ದೀನ್ ಷರೀಶ್, ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ 14ನೇ ವಾರ್ಡಿನಲ್ಲಿ ಯುಡಿಐಎಫ್ ಅಡಿಯಲ್ಲಿ ಯಾವುದೇ ಕೆಲಸ ನಡೆಯುತ್ತಿಲ್ಲ ಎಂದು ದೂರಿದರು.

> **ಮೇ 11ಕ್ಕೆ ಅದ್ದೂರಿ ಅಂಬೇಡ್ಕರ್ ಜಯಂತಿ**
>
> ನಗರಸಭೆ ವತಿಯಿಂದ ಮೇ 11ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಅದ್ದೂರಿಯಾಗಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಆಚರಿಸಲಾಗುವುದು. ಅದಕ್ಕಾಗಿಯೇ ಬಜೆಟ್‌ನಲ್ಲಿ 5 ಲಕ್ಷ ಮೀಸಲಿರಿಸಲಾಗಿದೆ. ಕಾರ್ಯಕ್ರಮಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ. ಸಂಸದ ಡಾ. ಸಿ.ಎನ್. ಮಂಜುನಾಥ್ ಅವರನ್ನು ಸಹ ಆಹ್ವಾನಿಸಲಾಗುವುದು. ಪಕ್ಷಬೇಧ ಮರೆತು ಎಲ್ಲಾ ಸದಸ್ಯರು ಕಾರ್ಯಕ್ರಮದ ಯಶಸ್ಸಿಗೆ ಕೈ ಜೋಡಿಸಬೇಕು. ಕಾರ್ಯಕ್ರಮ ರೂಪುರೇಷೆ ಕುರಿತು ಪೂರ್ವಭಾವಿ ಸಭೆ ನಡೆಸಲಾಗುವುದು ಎಂದು ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಶಶಿ ಹೇಳಿದರು. ಅದಕ್ಕೆ ಕೆಲ ಸದಸ್ಯರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 895ನೇ ರ್ಯಾಂಕ್ ಪಡೆದ ವಿಜಯನಗರದ ಅಜಯ್ ಕುಮಾರ್ ಅವರನ್ನು ಕಾರ್ಯಕ್ರಮದಲ್ಲಿ ನಗರಸಭೆ ವತಿಯಿಂದ ಸನ್ಮಾನಿಸಬೇಕು ಎಂದು ಸಲಹೆ ನೀಡಿದರು. ಅಧ್ಯಕ್ಷರು ಸಹಮತ ವ್ಯಕ್ತಪಡಿಸಿದರು.

ಸದಸ್ಯರ ಮಾತಿಗೆ ಪ್ರತಿಕ್ರಿಯಿಸಿದ ಅಧ್ಯಕ್ಷ ಕೆ. ಶೇಷಾದ್ರಿ ಶಶಿ, 'ಸಂಬಂಧಪಟ್ಟ ಎಂಜಿನಿಯರ್ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಗುಣಮಟ್ಟ ಸೇರಿದಂತೆ ಕಾಮಗಾರಿಯಲ್ಲಿ ಯಾವುದೇ ತೊಂದರೆಯಾಗದಂತೆ ನಿಗಾ ವಹಿಸಬೇಕು' ಎಂದು ಸೂಚಿಸಿದರು. ಪರಿಶೀಲನೆ ನಡೆಸಬೇಕು ಕಾಮಗಾರಿಯಲ್ಲಿ ಎಲ್ಲೂ ಲೋಪದೋಷ ಆಗಬಾರದೆಂದು ಸೂಚನೆ ನೀಡಿದರು. 15ನೇ ಹಣಕಾಸು ಯೋಜನೆಯ ಅನುದಾನವನ್ನು ಎಲ್ಲಾ ಸದಸ್ಯರಿಗೂ ಸಮಾನವಾಗಿ ಹಂಚಿಕೆ ಮಾಡಿದ್ದಕ್ಕೆ ಅಧ್ಯಕ್ಷರಿಗೆ ಎಲ್ಲರೂ ಅಭಿನಂದಿಸಿದರು.

> ಭೇಟಿ ನೀಡಿ ಪರಿಶೀಲನೆ ನಡೆಸಬೇಕು

ಉಪಾಧ್ಯಕ್ಷೆ ಆಯೇಷಾ ಬಾನು, ಸ್ಥಾಯಿ ಸಮಿತಿ ಅಧ್ಯಕ್ಷ ಫೈರೋಜ್ ಪಾಷಾ, ಪೌರಾಯುಕ್ತ ಡಾ. ಜಯಣ್ಣ, ಸದಸ್ಯರಾದ ಬಿ.ಸಿ. ಪಾರ್ವತಮ್ಮ, ಮಂಜುನಾಥ್, ಪವಿತ್ರ, ವಿಜಯಕುಮಾರಿ, ಗಿರಿಜಮ್ಮ, ಬೈರೇಗೌಡ, ಸಮದ್, ರಮೇಶ್, ಮಂಜುಳಾ, ಮಹಾಲಕ್ಷ್ಮಿ, ಅಸ್ಮತ್ ಉಲ್ಲಾ ಖಾನ್, ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

ಅಂತರಾಳದಿಂದ.. EDITORIAL

# ಬಂಗಾರದ ಬೆಲೆಯಲ್ಲಿ ಜಿಗಿತ ಮಿತ ಬಳಕೆಯೇ ಮದ್ದು

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಳೆದ ವಾರ ಬಂಗಾರದ ಬೆಲೆಯು 10 ಗ್ರಾಂಗೆ 1 ಲಕ್ಷ ದಾಟುವ ಮೂಲಕ ದಾಖಲೆ ಸೃಷ್ಟಿಯಾಯಿತು. ನಂತರ, ಬೆಲೆ ಸ್ವಲ್ಪಮಟ್ಟಿಗೆ ಕಡಿಮೆ ಆಯಿತಾದರೂ ಅದೂ ದಾಖಲೆ ಬೆಲೆಯ ಸನಿಹದಲ್ಲೇ ಇದೆ. ಮುಂಬೈ ಚಿನಿವಾರಪೇಟೆಯಲ್ಲಿ ಹೋದ ಶುಕ್ರವಾರ 24 ಕ್ಯಾರೆಟ್ ಚಿನ್ನದ (99.9ರಷ್ಟು ಪರಿಶುದ್ಧತೆ) ದರವು 10 ಗ್ರಾಂಗೆ 99 ಸಾವಿರ ಇದ್ದರೆ, 22 ಕ್ಯಾರೆಟ್ ಚಿನ್ನದ ಬೆಲೆಯು 92 ಸಾವಿರ ಇತ್ತು. ಬಂಗಾರದ ಬೆಲೆಯು ಕೆಲವು ತಿಂಗಳಿಂದ ಏರುತ್ತಲೇ ಇದ್ದು, ಇನ್ನಷ್ಟು ಹೆಚ್ಚಳವಾಗುವ ಲಕ್ಷಣಗಳಿವೆ. ಹಾಗೆ ನೋಡಿದರೆ, ಚಿನ್ನದ ದರದ ಇತಿಹಾಸವನ್ನು ಗಮನಿಸಿದಾಗ, ಅದರ ಬೆಲೆಯು ಅಲ್ಪಾವಧಿಯಲ್ಲಿ ಕಡಿಮೆಯಾಗುವುದನ್ನು ಅಥವಾ ಯಥಾಸ್ಥಿತಿಯಲ್ಲಿ ಇರುವುದನ್ನು ಹೊರತುಪಡಿಸಿದರೆ ಸದಾ ಹೆಚ್ಚುತ್ತಲೇ ಇರುವುದು ಕಂಡುಬರುತ್ತದೆ. ದೀರ್ಘಾವಧಿಯಲ್ಲಿ ಅದರ ಬೆಲೆ ಕಡಿಮೆಯಾಗಿದ್ದೇ ಇಲ್ಲ. ಇನ್ನು, ಈಗ ಇದರ ಬೆಲೆ ಹೆಚ್ಚಳಕ್ಕೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಪ್ರಸ್ತಾವಗಳು ಹಾಗೂ ತಮ್ಮ ದೇಶದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಗ್ಗೆ ಅವರು ಸಾರ್ವಜನಿಕವಾಗಿ ಬೆದರಿಕೆಯ ವೈಖರಿಯಲ್ಲಿ ಆಡಿದ ಮಾತುಗಳು ಮೂಡಿಸಿರುವ ಆತಂಕ ಕಾರಣವಾಗಿದೆ. ಬಡ್ಡಿ ದರ ಇಳಿಸದ ಕಾರಣಕ್ಕಾಗಿ ಫೆಡರಲ್ ರಿಸರ್ವ್ ಮುಖ್ಯಸ್ಥ ಜೆರೋಮ್ ಪೊವೆಲ್ ಅವರನ್ನು ಆ ಸ್ಥಾನದಿಂದ ಶೀಘ್ರವೇ ವಜಾಗೊಳಿಸುವ ಮಾತುಗಳನ್ನು ಟ್ರಂಪ್ ಅವರು ಇತ್ತೀಚೆಗೆ ಆಡಿದ್ದರು. ತದನಂತರ, ಅಂತಹ ಕ್ರಮಕ್ಕೆ ಮುಂದಾಗುವ ಯಾವ ಇರಾದೆಯೂ ತಮಗಿಲ್ಲ ಎಂದು ಟ್ರಂಪ್ ಹೇಳಿಕೆ ನೀಡಿದ್ದರೂ ಅನಿಶ್ಚಿತತೆಯು ಎಲ್ಲಾ ಮಾರುಕಟ್ಟೆಗಳ ಮೇಲೂ ಪ್ರಭಾವ ಬೀರಿದೆ. ಚಿನ್ನದ ಬೆಲೆಯು ಮಾರುಕಟ್ಟೆಯ ಪ್ರವೃತ್ತಿಗಳಿಗೆ ಸೂಕ್ಷ್ಮವಾಗಿ ಪ್ರತಿಕ್ರಿಯಿಸುತ್ತದೆ ಎಂಬುದು ಇಲ್ಲಿ ಗಮನಾರ್ಹ.



> **ಸುಂಕ ಸಮರವು ಹಣದುಬ್ಬರ ಮತ್ತು ಬಡ್ಡಿ ದರ ಹೆಚ್ಚಳಕ್ಕೆ ಎಡೆಮಾಡಿಕೊಡುತ್ತದೆ ಎಂಬುದು ಚಿಂತೆಗೆ ಕಾರಣವಾಗಿದೆ. ಫೆಡರಲ್ ರಿಸರ್ವ್ ವಿರುದ್ಧ ಯಾವುದೇ ಬಗೆಯ ಕ್ರಮ ಕೈಗೊಂಡರೂ ಅದು ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲು ಕಾರಣವಾಗಬಹುದು.**

ಯಾವುದೇ ಆರ್ಥಿಕ, ರಾಜಕೀಯ ಅನಿಶ್ಚಿತತೆಯ ಸನ್ನಿವೇಶದಲ್ಲಿ ಬಂಗಾರದ ಮೇಲಿನ ಹೂಡಿಕೆಯು ಅತ್ಯಂತ ಸುರಕ್ಷಿತವಾದುದಾಗಿರುತ್ತದೆ. ಕರೆನ್ಸಿ ಮೌಲ್ಯದಲ್ಲಿನ ಕುಸಿತದಿಂದ ಆಗುವ ನಷ್ಟವನ್ನು ತಪ್ಪಿಸಿಕೊಳ್ಳಲು ಚಿನ್ನವನ್ನು ಖರೀದಿಸಿ ದಾಸ್ತಾನು ಮಾಡಿಕೊಳ್ಳಲಾಗುತ್ತದೆ. ಹಣದುಬ್ಬರದ ಸಂದರ್ಭವು ಬಂಗಾರದ ಬೆಲೆ ಏರುಮುಖವಾಗಲು ಇಂಬು ನೀಡುತ್ತದೆ. ಪ್ರಸ್ತುತ ಡಾಲರ್ ಬೆಲೆಯಲ್ಲಿನ ಕುಸಿತವು ಚಿನ್ನದ ಬೆಲೆ ಹೆಚ್ಚಳಕ್ಕೆ ಮುಖ್ಯ ಕಾರಣವಾಗಿದೆ. ಇದೀಗ ಡಾಲರ್ ಬೆಲೆಯು 2022ರ ನಂತರದಲ್ಲಿನ ಅತ್ಯಂತ ಕಡಿಮೆ ಮಟ್ಟಕ್ಕೆ ಇಳಿದಿದೆ. ಡಾಲರ್ ಯಾವಾಗ ದುರ್ಬಲಗೊಳ್ಳುತ್ತದೋ ಆಗ ಇತರ ಕರೆನ್ಸಿಗಳನ್ನು ಹೊಂದಿರುವ ಹೂಡಿಕೆದಾರರಿಗೆ ಕಡಿಮೆ ಬೆಲೆಯಲ್ಲಿ ಚಿನ್ನ ಕೊಳ್ಳುವ ಅವಕಾಶ ಒದಗುತ್ತದೆ. ಹೀಗಾಗಿ, ಚಿನ್ನ ಖರೀದಿಗೆ ಬೇಡಿಕೆ ಹೆಚ್ಚುತ್ತದೆ. ಇದರ ಜೊತೆಗೆ ಅಮೆರಿಕದ ಆರ್ಥಿಕ ಪರಿಸ್ಥಿತಿ, ಬಿಗಡಾಯಿಸುತ್ತಿರುವ ಅಮೆರಿಕದ ಸಾಲ ಬಿಕ್ಕಟ್ಟು, ಚೀನಾ, ಜಾಗತಿಕ ಸೆಂಟ್ರಲ್ ಬ್ಯಾಂಕುಗಳು ಹಾಗೂ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಮುಂದುವರಿಕೆ ಇವು ಇದಕ್ಕೆ ತಮ್ಮದೇ ಆದ ಕೊಡುಗೆ ನೀಡುತ್ತಿವೆ. ಉಕ್ರೇನ್ ಯುದ್ಧ ಹಾಗೂ ಇತರ ಜಾಗತಿಕ ಸಮಸ್ಯೆಗಳು ಹುಟ್ಟುಹಾಕಿರುವ ಭೌಗೋಳಿಕ ರಾಜಕೀಯ ಉದ್ವಿಗ್ನ ಸ್ಥಿತಿಗಳು ಕೂಡ ಚಿನ್ನದ ಬೆಲೆ ಏರಿಕೆಯಲ್ಲಿ ಪಾತ್ರ ವಹಿಸಿವೆ. ಬಂಗಾರದ ಬೆಲೆಯಲ್ಲಿನ ಹೆಚ್ಚಳವು ಭಾರತದ ಮೇಲೆ ಗಮನಾರ್ಹ ಪ್ರಭಾವ ಬೀರುತ್ತದೆ. ಚೀನಾದ ನಂತರ ಭಾರತವು ಪ್ರಪಂಚದ ಎರಡನೇ ದೊಡ್ಡ ಚಿನ್ನದ ಮಾರುಕಟ್ಟೆಯಾಗಿದೆ. ನಮ್ಮಲ್ಲಿ ಹಳದಿ ಲೋಹಕ್ಕೆ ಇರುವ ಬೇಡಿಕೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದ್ದು, ಈ ಪ್ರಮಾಣ 2023ರಲ್ಲಿ 761 ಟನ್‌ಗಳಾಗಿದ್ದರೆ, 2024ರಲ್ಲಿ 802.8 ಟನ್‌ಗಳನ್ನು ದಾಖಲಿಸಿದೆ. ಚಿನ್ನದ ಬೇಡಿಕೆ ಮೌಲ್ಯವು 2024ರಲ್ಲಿ 5.15 ಲಕ್ಷ ಕೋಟಿ ತಲುಪಿದ್ದು, ಇದು ಶೇಕಡ 31ರಷ್ಟು ವೃದ್ಧಿಗೊಂಡಿದೆ. ಹಾಗೆ ನೋಡಿದರೆ, ನಮ್ಮ ದೇಶದಲ್ಲಿ ಚಿನ್ನವು ಸಾಂಸ್ಕೃತಿಕ ಮಹತ್ವ ಹೊಂದಿದ ಉತ್ಪನ್ನವೇ ವಿನಾ ಆರ್ಥಿಕತೆಗೆ ಕೊಡುಗೆ ನೀಡುವ ಉತ್ಪನ್ನವಲ್ಲ. ಅನುತ್ಪಾದಕ ಆಸ್ತಿಯಾದ ಚಿನ್ನದ ಆಮದು ಹೆಚ್ಚಳವು ಆರ್ಥಿಕತೆಯನ್ನು ಅಸಮತೋಲನಗೊಳಿಸುತ್ತದೆ. ಅದರ ಬೆಲೆ ಅಧಿಕಗೊಳ್ಳುವುದು ಕಳ್ಳಸಾಗಣೆಯನ್ನು ಹೆಚ್ಚಿಸುತ್ತದೆ. ಚಿನ್ನದ ಮಿತ ಬಳಕೆಗೆ ಸಂಬಂಧಿಸಿದಂತೆ ಹಲವಾರು ವರ್ಷಗಳಿಂದ ಪ್ರಚಾರ ಅಭಿಯಾನ ಮಾಡುತ್ತಿದ್ದರೂ ಅದು ಯಾವುದೇ ರೀತಿ ಪರಿಣಾಮವನ್ನು ಬೀರಿಲ್ಲ. ಇವೆಲ್ಲದರ ಮಧ್ಯೆಯೇ ದೇಶವು ಈಗ ಮದುವೆ ಶುಭಕಾರ್ಯಗಳ ಋತುವಿಗೆ ಕಾಲಿಡುತ್ತಿದೆ. ವಿಶೇಷವಾಗಿ, ಆರ್ಥಿಕ ಬೆಳವಣಿಗೆಯು ನಿಧಾನಗೊಳ್ಳುತ್ತಿರುವ ಸಂದರ್ಭದಲ್ಲಿ ಅಧಿಕ ಚಿನ್ನದ ದರ ಹಲವರ ಬಜೆಟ್ ಲೆಕ್ಕಾಚಾರಗಳನ್ನು ಅಸ್ತವ್ಯಸ್ತಗೊಳಿಸುತ್ತದೆ.

# ರಾಮಾಯಣ



## ಅಯೋಧ್ಯಾ ಪಟ್ಟಣದ ಸ್ತ್ರೀಯರ ಪ್ರಲಾಪ

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ನೀವು ಶ್ರೀರಾಮನ ಸೇವೆಯನ್ನು ಮಾಡಿಕೊಂಡಿರಿ ನಮ್ಮನ್ನು ಸೀತಾದೇವಿಯು ರಕ್ಷಿಸಿಕೊಳ್ಳುವಳು. ನಿಮ್ಮನ್ನು ಶ್ರೀರಾಮನು ರಕ್ಷಿಸುವನು ನಮಗೆ ಮನಸ್ಸಿಗೆ ಹಿತವಾಗಿರುವುದರಿಂದ ವನವಾಸವೆಂಬ ದುಃಖವಿಲ್ಲ. ಕೈಕೇಯಾದೇವಿಯು ರಾಜ್ಯಾಧಿಪತ್ಯವನ್ನು ಮಾಡಿಕೊಂಡು ವಿವೇಕವಿಲ್ಲದೆ ಮನುಷ್ಯನ ತಾರತಮ್ಯವನ್ನು ನೋಡದಿದ್ದರೆ ನಾವು ಒಡೆಯರಿಲ್ಲದವರ ಹಾಗೆ ಇರಬೇಕಾದೀತು. ಕೈಕೇಯಾ ದೇವಿಯು ತಾನು ಐಶ್ವರ್ಯವನ್ನು ಪಡೆಯಲು ಜ್ಯೇಷ್ಠಪುತ್ರನಾದ ಶ್ರೀರಾಮನನ್ನು ಬಿಟ್ಟಬಳಿಕ ಆ ಕುಲಗೆಡುಕಿಯನ್ನು ಯಾರು ಸೇರಿ ಸುಖಿಸಿಯಾರು ನಮಗೆ ಈ ಮನೆಯಿಂದಲೂ ಮಕ್ಕಳಿಂದಲೂ ಜೀವನದಿಂದಲೂ ಏನು ಪ್ರಯೋಜನ ಕೈಕೇಯಾದೇವಿಯ ರಾಜ್ಯದಲ್ಲಿ ನಾವು ನಡೆಯುವ ಹೆಣದಂತಿರಲಾರೆವು. ಈ ವಿಷಯದಲ್ಲಿ ನಮ್ಮ ಮಕ್ಕಳೇ ಸಾಕ್ಷಿ ಮನಸ್ಸಿನಲ್ಲಿ ಸ್ವಲ್ಪವಾದರೂ ದಯೆಯಿಲ್ಲದೆ ದಶರಥಮಹಾರಾಯನ ಜ್ಯೇಷ್ಠಪುತ್ರನಾದ ಶ್ರೀರಾಮನನ್ನು ರಾಜ್ಯಭ್ರಷ್ಟನಾಗಿ ಮಾಡಿ ಹೊರಡಿಸಿದ ಕೈಕೇಯಾದೇವಿಯ ಅಧೀನದಲ್ಲಿ ನಾವು ಹೇಗೆ ಬದುಕುವೆವು ಈಕೆಯು ಮಾಡಿದ ಕೃತ್ಯದಿಂದ ಈ ರಾಜ್ಯವು ಅನಾಯಕವಾಗಿ ನಾಶವನ್ನೈದುವುದು. ಶ್ರೀರಾಮನು ವನವಾಸವನ್ನೈದಿದಮೇಲೆ ದಶರಥರಾಯನು ಜೀವಿಸಲಾರನು. ದಶರಥನು ಸತ್ತರೆ ಆಮೇಲೆ ಉಳಿಯುವುದು ಗೋಳಾಟವೊಂದೇ. ಆದ್ದರಿಂದ ನಾವೆಲ್ಲರೂ ವಿಷಪಾನವನ್ನು ಮಾಡಿಯಾದರೂ ಜೀವವನ್ನು ತೊರೆಯೋಣ. ಅಥವಾ ಶ್ರೀರಾಮನ ಹಿಂದೆ ಹೋಗೋಣ. ಅದೂ ಆಗದಿದ್ದರೆ ಎಲ್ಲಾದರೂ ಕಾಣದೆ ಇದ್ದ ರಾಜ್ಯಕ್ಕೆ ಹೋಗಿ ಅಜ್ಞಾತವಾಸವನ್ನು ಮಾಡಿಕೊಂಡಿರೋಣ. ಸೀತಾ ಲಕ್ಷ್ಮಣಸಮೇತನಾದ ಶ್ರೀರಾಮನು ವನಕ್ಕೆ ಹೋದ ಮೇಲೆ ತೋಳಗಳ ಮಧ್ಯದಲ್ಲಿರುವ ಕುರಿಗಳಂತೆ ನಾವು ಭರತನ ಸಮೀಪದಲ್ಲಿ ಹೇಗೆ ಇರುವುದು ಪೂರ್ಣಚಂದ್ರನಂತೆ ಮುಖವುಳ್ಳವನೂ ಶ್ಯಾಮಲವರ್ಣನೂ ಮೊಳಕಾಲುಪರ್ಯಂತ ಉದ್ದವಾದ ತೋಳುಗಳುಳ್ಳವನೂ ತಾವರೆ ಎಸಳುಗಳ ಹಾಗೆ ಕಣ್ಣುಗಳುಳ್ಳವನೂ ಎಲ್ಲರಲ್ಲಿಯೂ ವಿನಯದಿಂದ ಮೃದುನುಡಿಗಳನ್ನು ನುಡಿಯುವವನೂ ಸತ್ಯವಾದಿಯೂ ಮಹಾಬಲವುಳ್ಳವನೂ ಸೌಮ್ಯಸ್ವರೂಪನೂ ಚಂದ್ರನಹಾಗೆ ಸಮಸ್ತ ಪ್ರಾಣಿಗಳಿಗೂ ಸಂತೋಷವುಂಟು ಮಾಡುವವನೂ ಪುರುಷೋತ್ತಮನೂ ಮದ್ದಾನೆಯಂತೆ ಸತ್ತ್ವವುಳ್ಳವನೂ ಆದ ಶ್ರೀರಾಮನು ವನದಲ್ಲಿ ಸಂಚರಿಸುತ್ತ ಸಮಸ್ತ ಕಾನನಗಳನ್ನೂ ತನ್ನ ಕಾಂತಿಯಿಂದ ಪ್ರಕಾಶಗೊಳಿಸುತ್ತಿರುವನು ಎಂದು ನಾನಾ ಪ್ರಕಾರವಾಗಿ ಮೃತ್ಯುದೇವತೆಯು ಸನ್ನಿಹಿತವಾದಾಗ ಭಯಪಡುವಂತೆ ಅಂಜುತ್ತ ಹಂಬಲಿಸುತ್ತಿದ್ದರು. ಆ ಸಮಯದಲ್ಲಿ ಸೂರ್ಯನು ಅಸ್ತಾಚಲವನ್ನೈದಲು ರಾತ್ರಿಯಾಯಿತು. ಆಗ ದೀಕ್ಷಿತರ ಮನೆಗಳಲ್ಲಿ ಅಗ್ನಿಗಳು ಶಾಂತವಾಗಿ ಅಧ್ಯಯನ ಪಾಠಗಳು ನಡೆಯಲಿಲ್ಲ. ಸ್ತ್ರೀಯರು ಶ್ರೀರಾಮನ ವನವಾಸದಿಂದ ತಮ್ಮ ತಾಯಿತಂದೆ ತಮ್ಮಂದಿರು ಮಕ್ಕಳು ಹೋದಂತೆ ಹಂಬಲಿಸಿ ಚೈತನ್ಯಗುಂದಿ ರೋದನ ಮಾಡುತ್ತಿದ್ದರು. ಅವರಿಗೆ ಶ್ರೀರಾಮನ ವಿಯೋಗವು ತಮ್ಮ ಪುತ್ರವಿಯೋಗಕ್ಕಿಂತಲೂ ಅಧಿಕವಾಗಿತ್ತು. ಶ್ರೀರಾಮನು ಇದ್ದಾಗ ಎಲ್ಲಿ ನೋಡಿದರೂ ಗೀತ ವಾದ್ಯ ನೃತ್ಯಗಳಿಂದ ಅತ್ಯಂತ ಉತ್ಸವದಲ್ಲಿದ್ದ ಅಯೋಧ್ಯಾಪಟ್ಟಣವು. ಆತನು ವನವನ್ನೈದಲು ಪ್ರಳಯಕಾಲದ ಚಂಡ ವಾಯುವಿನಿಂದ ಅಲ್ಲಕಲ್ಲೋಲವಾಗಿ ಘಂಳುಘುಳು ಶಬ್ದಗಳಿಂದ ಬೊಬ್ಬಿಡುವ ಸಮುದ್ರದಂತೆ ಕಾಣುಸುತ್ತಿದ್ದಿತು.


ಮುಂದುವರಿಯುವುದು...

# ಕಾಯಕವೇ ಕೈಲಾಸವೆಂದು ಸಾರಿದ ವಿಶ್ವ ಗುರು ಬಸವಣ್ಣ



ಎನ್.ಎನ್.ಕಬ್ಬೂರ
• ಉದಯವಾಹಿನಿ, ವಿಶೇಷ

ಬಸವಣ್ಣನವರನ್ನು (1131–1196) ಬಸವೇಶ್ವರ ಮತ್ತು ಬಸವ ಎಂದೂ ಕರೆಯುತ್ತಾರೆ, ಒಬ್ಬ ಭಾರತೀಯ ತತ್ವಜ್ಞಾನಿ, ಕವಿ, ಶಿವ-ಕೇಂದ್ರಿತ ಭಕ್ತಿ ಚಳುವಳಿಯಲ್ಲಿ ಲಿಂಗಾಯತ ಸಮಾಜ ಸುಧಾರಕ ಮತ್ತು ಕಲ್ಯಾಣಿ ಚಾಲುಕ್/ಕಲಚೂರಿ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಹಿಂದೂ ಶೈವ ಸಮಾಜ ಸುಧಾರಕ. ಬಸವಣ್ಣನವರು ತಮ್ಮ ಕಾವ್ಯದ ಮೂಲಕ ಸಾಮಾಜಿಕ ಜಾಗೃತಿಯನ್ನು ಹರಡಿದರು, ಇದನ್ನು ವಚನಗಳು ಎಂದು ಕರೆಯಲಾಗುತ್ತದೆ. ಅವರು ಲಿಂಗ, ಸಾಮಾಜಿಕ ತಾರತಮ್ಯ, ಮೂಢನಂಬಿಕೆಯ ಆಚರಣೆಗಳನ್ನು ತಿರಸ್ಕರಿಸಿದರು. ಆದರೆ ಲಿಂಗದ ಚಿತ್ರವಿರುವ ಇಷ್ಟಲಿಂಗ ಹಾರವನ್ನು ಪರಿಚಯಿಸಿದರು, ಪ್ರತಿಯೊಬ್ಬ ವ್ಯಕ್ತಿಗೆ ಅವರ ಜನ್ಮವನ್ನು ಲೆಕ್ಕಿಸದೆ, ಒಬ್ಬರ ಭಕ್ತಿ ಶಿವನಿಗೆ ನಿರಂತರ ಜ್ಞಾಪನೆಯಾಗಲು ಅಹಿಂಸೆಯು ಪ್ರಬಲ ಪ್ರವರ್ತಕವಾಗಿದೆ. ಅವರು ಮಾನವ ಮತ್ತು ಪ್ರಾಣಿ ಬಲಿಗಳನ್ನು ಖಂಡಿಸಿದರು, ಅವರ ರಾಜ್ಯ ಮಂತ್ರಿಯಾಗಿ ಅನುಭವ ಮಂಟಪದಂತಹ ಹೊಸ ಸಾರ್ವಜನಿಕ ಸಂಸ್ಥೆಗಳನ್ನು ಪರಿಚಯಿಸಿದರು, (ಆಧ್ಯಾತ್ಮಿಕ ಅನುಭವದ ಸಭಾಂಗಣ) ಇದು ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಪ್ರಶ್ನೆಗಳನ್ನು ಚರ್ಚಿಸಲು ಎಲ್ಲಾ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ಪುರುಷರು, ಮಹಿಳೆಯರನ್ನು ಸ್ವಾಗತಿಸಿತು. ಹಲವು ಸಾಂಪ್ರದಾಯಿಕ ದಂತಕಥೆಗಳು ಮತ್ತು ಹಗಿಯೋಗ್ರಾಫಿಕ್ ಪಠ್ಯಗಳು ಬಸವಣ್ಣನನ್ನು ಲಿಂಗಾಯತ ಸ್ಥಾಪಕ ಎಂದು ಹೇಳುತ್ತವೆ. ಆದಾಗ್ಯೂ ಕಲಚೂರಿ ಶಾಸನಗಳಂತಹ ಐತಿಹಾಸಿಕ ಪುರಾವೆಗಳನ್ನು ಅವಲಂಬಿಸಿರುವ ಆಧುನಿಕ ಪಾಂಡಿತ್ಯವು ಈಗಾಗಲೇ ಅಸ್ತಿತ್ವದಲ್ಲಿರುವ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಿ ಪರಿಷ್ಕರಿಸಿದ ಮತ್ತು ಶಕ್ತಿ ತುಂಬಿದ ಕವಿ ತತ್ವಜ್ಞಾನಿ ಬಸವಣ್ಣ ಎಂದು ಹೇಳುತ್ತದೆ. ಕನ್ನಡ ಕವಿ ಹರಿಹರ (1180)ರ ಬಸವರಾಜದೇವರ ರಗಳೆ ಸಮಾಜ ಸುಧಾರಕನ ಜೀವನದ ಬಗ್ಗೆ ಲಭ್ಯವಿರುವ ಆರಂಭಿಕ ದಾಖಲೆಯಾಗಿದೆ, ಮತ್ತು ಲೇಖಕರ ಕಾರಣದಿಂದಾಗಿ ಇದನ್ನು ಪ್ರಮುಖವೆಂದು ಪರಿಗಣಿಸಲಾಗಿದೆ. ಬಸವಣ್ಣನ ಜೀವನ ಮತ್ತು ವಿಚಾರಗಳ ಸಂಪೂರ್ಣ ಖಾತೆಯನ್ನು 13 ನೇ ಶತಮಾನದ ಪವಿತ್ರ ತೆಲುಗು ಪಠ್ಯದಲ್ಲಿ ವಿವರಿಸಲಾಗಿದೆ. ಬಸವಣ್ಣನ ಸಾಹಿತ್ಯ ಕೃತಿಗಳು ಕನ್ನಡ ಭಾಷೆಯಲ್ಲಿ ವಚನ ಸಾಹಿತ್ಯವನ್ನು ಒಳಗೊಂಡಿವೆ. ಅವರನ್ನು ಭಕ್ತಿಭಂಡಾರಿ ಮತ್ತು ಬಸವಣ್ಣ ಎಂದೂ ಕರೆಯಲಾಗುತ್ತದೆ.




## ಬಸವಣ್ಣನವರ ಬಗೆಗೆ ಕೆಲವು ಆಸಕ್ತಿದಾಯಕ ಸಂಗತಿಗಳು

- ಅನುಭವ ಮಂಟಪದ ಮೂಲಕ ಈಗಿನ ಸಂಸತ್ತಿನ ಕಲ್ಪನೆಯನ್ನು 12ನೇ ಶತಮಾನದಲ್ಲೇ ನೀಡಿದ ಮಹಾಪುರುಷ.
- ಬಸವಣ್ಣನವರು ಸ್ಥಳೀಯ ಭಾಷೆಯಲ್ಲಿ ಕವನ ರಚಿಸಿದರು ಮತ್ತು ಜನಸಾಮಾನ್ಯರಿಗೆ ತಮ್ಮ ಸಂದೇಶವನ್ನು ಹರಡಿದರು. ಅವರ ಬೋಧನೆಗಳು ಮತ್ತು ಶ್ಲೋಕಗಳಾದ ಕಾಯಕವೇ ಕೈಲಾಸ (ಕೆಲಸವು ಕೈಲಾಸಕ್ಕೆ ಮಾರ್ಗವಾಗಿದೆ, ಅಥವಾ ಕೆಲಸವೇ ಪೂಜೆ) ಜನಪ್ರಿಯವಾಯಿತು.
- ಬಸವಣ್ಣನವರ ತತ್ತ್ವಶಾಸ್ತ್ರವು ಒಬ್ಬರ ಸ್ವಂತ ದೇಹ ಮತ್ತು ಆತ್ಮವನ್ನು ದೇವಾಲಯವಾಗಿ ಪರಿಗಣಿಸುವುದರ ಸುತ್ತ ಸುತ್ತುತ್ತದೆ, ದೇವಾಲಯವನ್ನು ಮಾಡುವ ಬದಲು, ನಮ್ಮ ದೇಹವೇ ದೇವಾಲಯ ಎಂದು ಸೂಚಿಸುತ್ತಾರೆ.
- ಜಾತಿ ಬೇಧವಿಲ್ಲದೆ ಪ್ರತಿಯೊಬ್ಬ ಮನುಷ್ಯನೂ ಸಮಾನ ಎಂದು ಬಸವ ಬೋಧಿಸಿದ್ದು, ಎಲ್ಲಾ ರೀತಿಯ ದುಡಿಮೆಯೂ ಅಷ್ಟೇ ಮುಖ್ಯ ಎಂದು ತಿಳಿಸಿಕೊಟ್ಟರು.
- ಬಸವಣ್ಣನವರ ಲಿಂಗಾಯತ ಧರ್ಮವು ಶೈವ ಧರ್ಮವನ್ನು ಆಧರಿಸಿದ ಹಿಂದೂ ಪಂಗಡವಾಗಿದೆ ಲಿಂಗಾಯತವಾದವು ಇಷ್ಟಲಿಂಗ ಪೂಜೆಯ ವಿಶಿಷ್ಟ ಆಚರಣೆಗೆ ಹೆಸರುವಾಸಿಯಾಗಿದೆ.

## ಸ್ಮಾರಕಗಳು, ಗುರುತಿಸುವಿಕೆ

- ಅಂದಿನ ಭಾರತದ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು 28 ಏಪ್ರಿಲ್ 2003 ರಂದು ಭಾರತದ ಸಂಸತ್ತಿನಲ್ಲಿ ಬಸವೇಶ್ವರರ ಪ್ರತಿಮೆಯನ್ನು ಉದ್ಘಾಟಿಸಿದರು.
- ಬಸವೇಶ್ವರರ ಗೌರವಾರ್ಥವಾಗಿ ಅವರ ಸಮಾಜ ಸುಧಾರಣೆಗಳನ್ನು ಗುರುತಿಸಿ ಸ್ಮರಣಾರ್ಥ ನಾಣ್ಯವನ್ನು ಮುದ್ರಿಸಿದ ಮೊದಲ ಕನ್ನಡಿಗ. ಭಾರತದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ನಾಣ್ಯಗಳನ್ನು ಬಿಡುಗಡೆ ಮಾಡಲು ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಬಂದಿದ್ದರು.
- 14 ನವೆಂಬರ್ 2015 ರಂದು ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಲಂಡನ್‌ನ ಲ್ಯಾಂಬೆತ್‌ನಲ್ಲಿ ಥೇಮ್ಸ್ ನದಿಯ ದಂಡೆಯ ಉದ್ದಕ್ಕೂ ಬಸವೇಶ್ವರ ಪ್ರತಿಮೆಯನ್ನು ಉದ್ಘಾಟಿಸಿದರು.
- ಬಸವ ಧರ್ಮ ಪೀಠವು ಬಸವಕಲ್ಯಾಣದಲ್ಲಿ 108 ಅಡಿ (33 ಮೀ) ಎತ್ತರದ ಬಸವನ ಪ್ರತಿಮೆಯನ್ನು ನಿರ್ಮಿಸಿದೆ.

## ಅಂಚೆ ಚೀಟಿ ಮತ್ತು ನಾಣ್ಯ

1) 11ನೇ ಮೇ 1967 ರಂದು ಗುರು ಬಸವಣ್ಣವರ 800 ನೇಯ ಲಿಂಗೈಕ್ಯ ದಿನಾಚರಣೆ ನಿಮಿತ್ತ ಭಾರತ ಸರಕಾರದ ಅಂಚೆ ಇಲಾಖೆಯು 15 ಪೈಸೆ ಮುಖ ಬೆಲೆಯುಳ್ಳ ಅಂಚೆ ಚೀಟಿಯನ್ನು ಮುದ್ರಿಸಿತು.

2) 1997 ರಲ್ಲಿ 2 ರೂಪಾಯಿ ಮುಖ ಬೆಲೆಯುಳ್ಳ ಅಂಚೆ ಚೀಟಿಯನ್ನು ಅಂಚೆ ಇಲಾಖೆಯು ಮತ್ತೆ ಮುದ್ರಿಸಿತು.

3) ಗುರು ಬಸವಣ್ಣವರ ಭಾವಚಿತ್ರವುಳ್ಳ 5 ರೂಪಾಯಿ ಮತ್ತು 100 ರೂಪಾಯಿ ನಾಣ್ಯಗಳನ್ನು ಡಾ. ಮನಮೋಹನ ಸಿಂಗ್ ಅವರು ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿದರು.

4) ಬಸವಣ್ಣನವರು ನಾಣ್ಯದ ಮೇಲೆ ಪ್ರಕಟಿಸಲ್ಪಟ್ಟವರಲ್ಲಿ ಪ್ರಥಮ ಕನ್ನಡಿಗರಾಗಿದ್ದಾರೆ.

5) ಗುರು ಬಸವಣ್ಣವರ ಅಶ್ವಾರೂಢ ಮೂರ್ತಿಯನ್ನು ದೆಹಲಿಯಲ್ಲಿರುವ ಪಾರ್ಲಿಮೆಂಟ್ ನಲ್ಲಿ 28 ನೇ ಏಪ್ರಿಲ್ 2003 ರಲ್ಲಿ ಅನಾವರಣಗೊಳಿಸಲಾಯಿತು.

**ಕೊನೆಯ ಮಾತು:** ಹೀಗೆ ಕಾಯಕವೇ ಕೈಲಾಸವೆಂದು ಸಾರಿದ ವಿಶ್ವ ಗುರು ಬಸವಣ್ಣನವರು 12 ನೇ ಶತಮಾನದಲ್ಲೇ ಅನುಭವ ಮಂಟಪದ ಮೂಲಕ ಸಂಸತ್ತಿನ ಕಲ್ಪನೆ ಮೂಡಿಸಿ, ಸಾಮಾಜಿಕ ಪಿಡುಗುಗಳನ್ನು ಹೊಡೆದೋಡಿಸಲು ಪ್ರಯತ್ನಪಟ್ಟರು, ಇವರ ತತ್ವಶಾಸ್ತ್ರ ಮತ್ತು ವಚನಗಳು ಇಂದಿಗೂ ಪ್ರಸ್ತುತವಾಗಿವೆ, ಇಂತಹ ಸಂದೇಶ ಮತ್ತು ನೀತಿ ಮಾರ್ಗಗಳನ್ನು ನಾವು ನೀವೆಲ್ಲ ಉಳಿಸಿ ಬೆಳೆಸಬೇಕಾಗಿದೆ, ಜೊತೆಜೊತೆಗೆ ಅನುಸರಣೆ ಮಾಡಬೇಕಾಗಿದೆ.

# ಮಾಧವಿಯ ಬದುಕು

**ಕೆಲಸವನು ಮಾಡುತಲಿ ಸಾಗುವರು ದಿನವಿಡಿಯು ಮಲಿನತೆಯು ಬರದಂತೆ ನಡೆವವರಲ್ಲಿ ಕಲಿಕೆಯನು ಜೀವನದಿ ಕಲಿಯುತಲೆ ಹೋಗುವರು ತಲೆಯನ್ನು ಒಡಿಸುತಲಿ ಲಕ್ಷ್ಮಿ ದೇವಿ...**



ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ



ನಮ್ಮ ಹಳ್ಳಿಯ ಸ್ತ್ರೀಯರು ಬೆಳಗ್ಗೆ ಎದ್ದರೆ ಸಾಕು ಕೆಲಸವನ್ನು ಮಾಡುತ್ತಾ ದಿನವನ್ನು ಕಳೆಯುತ್ತಾರೆ. ಮಲಗಿದ್ದರು ಅಲ್ಲಿಯೂ ಜವಾಬ್ದಾರಿ ಮರೆಯುವುದಿಲ್ಲ. ಎಲ್ಲೆಡೆಯೂ ಮಲಿನವಾಗದ ರೀತಿಯಲ್ಲಿ ಸ್ವಚ್ಛವಾಗಿ ಜಾಗವನ್ನು ಶುಚಿಗೊಳಿಸುತ್ತಾರೆ. ಕಲಿಕೆಯನ್ನು ಜೀವನದಲ್ಲಿ ಕಲಿಯುವುದು ಜೀವನದ ಪಾಠದಲ್ಲಿ ಎಂಬುದನ್ನು ಅರಿತಿರುತ್ತಾರೆ. ಅದಕ್ಕೆ ತನ್ನದೇ ಆದ ತಲೆಯನ್ನು ಓಡಿಸುತ್ತಾ ಕಾರ್ಯಗಳನ್ನು ಮಾಡುವುದು ಹೊಸತೇನಲ್ಲ. ಬೆಳಗ್ಗೆ ಎದ್ದೆವೆಂದರೆ ಅಂಗಣಗಳನ್ನು ಸ್ವಚ್ಛಗೊಳಿಸಿ ಹಸು ಕರುಗಳಿಗೆ ಮೇವನ್ನು ಹಾಕುತ್ತಾ ಹಾಲು ಕರೆದು ಡೈರಿಗಳಿಗೆ ಹಾಕಿ ಬೆಳಗಿನಜಾವದ ತಿಂಡಿಯನ್ನು ತಯಾರಿಸಿ ಮಧ್ಯಾನಕ್ಕೆ ಬೇಕಾದಂತಹ ಸಿದ್ಧತೆಗಳು ಮಾಡಿಟ್ಟು ಹೋಗುತ್ತಾರೆ. ಹೊಲ ಗದ್ದೆ ಕೆಲಸಗಳಲ್ಲಿ ಕೈಕೆಸರಾಗಿ ಮಾಡಿಕೊಂಡು ಬಹಳಷ್ಟು ಬಾಯಿ ಮೊಸರು ಮಾಡಿಕೊಳ್ಳುವವರು ಈ ನಮ್ಮ ರೈತಪಿ ಜನರು. ನಮ್ಮ ಸ್ತ್ರೀಯರಂತೂ ಎಳೆ ಮಕ್ಕಳನ್ನು ಇಟ್ಟುಕೊಂಡೇ ಕೆಲಸಗಳನ್ನು ಮಾಡಿರುವ ಮಾಡುತ್ತಿರುವ ಉದಾಹರಣೆಗಳು ಬಹಳಷ್ಟು ಇದೆ .

ಹೊಲಗದ್ದೆಯ ನಾಟಿಯಂತೂ ನಮ್ಮ ಸ್ತ್ರೀಯರ ಕೈಯಲ್ಲಿ ಪಕ್ಕ ಸರಿಯಾದ ರೀತಿಯಲ್ಲಿ ಮಾಡುತ್ತಾರೆ. ಯಾವುದು ಕಡಿಮೆಯೂ ಆಗದು ಹೆಚ್ಚು ಆಗದು. ಜೀವನದಲ್ಲಿನ ಪಾಠಗಳನ್ನು ಪ್ರತಿಯೊಂದು ಹಂತ ಹಂತದಲ್ಲಿ ಕಲಿಯುತ್ತಾ ಸಾಗುವವರು ನಮ್ಮ ಸ್ತ್ರೀಯರು. ಅವರು ಮಾಡುವ ಅಡುಗೆ ಅಂತೂ ಆರೋಗ್ಯಕರವಾಗಿ, ರುಚಿಕರವಾಗಿ, ಬಹಳ ಸ್ವಾದಿಷ್ಟವಾಗಿರುತ್ತದೆ. ಸಿಟಿಯ ಊಟಕ್ಕಿಂತ ಹಳ್ಳಿಯ ಊಟ ಆರೋಗ್ಯಕರ ಮತ್ತು ಬಹಳಷ್ಟು ರುಚಿಕರವಾಗಿರುತ್ತದೆ. ಅದಕ್ಕೆ ಹೇಳುವುದು ಶ್ರೀಮಂತರ ಮನೆಯ ನೋಟ ಚಂದ, ಬಡವರ ಮನೆ ಊಟ ಚಂದ ಎಂದು. ರೈತರೇ ನಮ್ಮ ನಾಯಕರು ಅವರಿಲ್ಲ ಎಂದರೆ ಜೀವನದಲ್ಲಿ ನಾವುಗಳು ಏನನ್ನು ಸಾಧಿಸಲು ಸಾಧ್ಯವಿಲ್ಲ. ಅವರ ಶ್ರಮದ ಫಲವೇ ನಾವು ದಿನನಿತ್ಯ ಬೇಕು ಬೇಡಗಳಾದ ಅಡುಗೆಗಳನ್ನು ಮಾಡಿಕೊಂಡು ಸವಿಯುತ್ತೇವೆ. ಸೈನಿಕ ದೇಶ ಕಾದರೆ ರೈತರು ನಮ್ಮನ್ನು ದಿನನಿತ್ಯದ ಆಹಾರವನ್ನ ಬೆಳೆದು ಕೊಟ್ಟು ಕಾಯುತ್ತಾರೆ. ಆರೋಗ್ಯವಾದ ಜೀವನವನ್ನು ನಡೆಸಲು ಸಹಕಾರ ನೀಡುತ್ತಾರೆ.

ಹೀಗೆ ಹೇಳಬೇಕೆಂದರೆ ಮಾಧವಿ ಎಂಬ ಹೆಣ್ಣು ಮಗಳು ರೈತಾಪಿ ಕುಟುಂಬದಲ್ಲಿ ಹುಟ್ಟುತ್ತಾಳೆ. ತಂದೆ ತಾಯಿ ಹೊಲದ ಗದ್ದೆ ಕೆಲಸವನ್ನು ಮಾಡಿಕೊಂಡು ನಡೆದರೆ ಸಿಟಿಗೆ ಹೋಗಿ ಓದುತ್ತಿದ್ದಳು. ಚಿಕ್ಕ ವಯಸ್ಸಿನಿಂದಲೂ ಆಟದ ಸ್ವಭಾವದಲ್ಲಿ ನಡೆದುಕೊಳ್ಳುತ್ತಿದ್ದ ಮಾಧವಿಯು ಜೀವನದಲ್ಲಿ ಅದೇ ರೀತಿ ಎಲ್ಲಾ ಕೆಲಸಗಳಲ್ಲೂ ನಿಪುನಳಾಗಿದ್ದಳು. ಗಂಡು ಮಗಳಂತೆ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಳು. ತಮ್ಮ ಚಿಕ್ಕವನಾದ್ದರಿಂದ ಪೋಷಿಸುತ್ತ ಸಲಹತ್ತ ಸಾಗುತ್ತಿದ್ದಳು. ಕೆಲವೊಮ್ಮೆ ಗದರಿಸಿ ಹೊಡೆಯುತ್ತಿದ್ದಳುವ ಅವಳಿಗೆ ತಪ್ಪು ಮಾಡುವುದೆಂದರೆ ದೊಡ್ಡ ಅಪರಾಧವೇ ಸರಿ. ಸುಳ್ಳಂತೂ ಆಕೆ ಸಹಿಸುತ್ತಲಿಲ್ಲ. ಎಲ್ಲಿಯೂ ತಗ್ಗಿ ಬಗ್ಗೆ ನಡೆಯುವ ಸ್ವಭಾವದವಳೆ ಅಲ್ಲ. ಹಠವಾದಿ, ಸ್ವಾಭಿಮಾನಿ, ಸಕಲ ಗುಣ ಸಂಪನ್ನಗಳು, ಪಿಯುಸಿ ಎಲ್ಲಾ ಡಿಸ್ಟಿಂಕ್ಷನ್ ನಲ್ಲಿ ಪಾಸಾದ ಮಾಧವಿಯು ಹಳ್ಳಿಯ ಎಲ್ಲಾ ಹೆಣ್ಣು ಮಕ್ಕಳಿಗೂ ಮಾದರಿಯಾದಳು.


ಆಕೆ ಎಸ್‌ಎಸ್‌ಎಲ್‌ಸಿ ಯಿಂದಲೆ ಟೈಲರಿಂಗ್ ಮತ್ತು ಹಲವು ಕರಕುಶಲ ವಸ್ತುಗಳನ್ನು ತಯಾರಿಸುವ ಹಂಬಲ ಹೊಂದಿದವಳು. ಪ್ರೀತಿ ವಿಶ್ವಾಸದಲ್ಲಿ ಸಹೃದಯಳಾದ ಇವಳು. ಬದುಕಿನಲ್ಲಿ ಹಲವಾರು ಭವಣೆಗಳನ್ನ ಕಂಡವಳು. ಪ್ರೀತಿ ವಿಶ್ವಾಸ ನೋವು ನಲಿವು ಎಲ್ಲವನ್ನು ಅರಿತು ಸಾಗಿದವಳು. ಸಂಸಾರ ಎಂದರೆ ಕಷ್ಟ ಸುಖಗಳನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ತಂದೆ ತಾಯಿ ಹಾಗೂ ಚಿಕ್ಕಪ್ಪ ಚಿಕ್ಕಮ್ಮ ಅಜ್ಜ, ಅಜ್ಜಿ, ಮುತ್ತಜಿ ಯರಿಂದ ಕಲಿತಿದ್ದಳು .ಅವರ ಕುಟುಂಬದಲ್ಲಿ ಮೊದಲನೆಯ ವಿದ್ಯಾವಂತ ಹೆಣ್ಣು ಮಗಳು ಮಾಧವಿ.

ಬಹಳಷ್ಟು ಬುದ್ಧಿವಂತೆಯಾದ ಈಕೆ ಯಾವುದರಲ್ಲೂ ಎಡವದಂತೆ ಸಾಗುತ್ತಿರುತ್ತಾಳೆ . ಪ್ರೀತಿ ವಿಶ್ವಾಸದ ಸೆಲೆಗಳನ್ನು ಅಲೆಯಾಗಿ ಮಾಡಿಕೊಂಡು ಜೀವನವನ್ನು ಸಾಗಿಸುವ ಪರಿಯನ್ನು ಹೊಂದಿರುವ ಬುದ್ಧಿವಂತೆ. ಒಟ್ಟಾರೆ ಹಳ್ಳಿಯಲ್ಲಿ ಹುಟ್ಟಿದರು ಸಹ ಜೀವನದ ಪರಿಯನ್ನು ಅರಿತು ಬದುಕು ಸಾಗಿಸುವ ಮಾಧವಿ ಹಲವಾರು ಹೆಣ್ಣು ಮಕ್ಕಳಿಗೆ ಮಾದರಿಯಾಗಿರುತ್ತಾಳೆ.

# ನಡೆಯಬೇಕಾದರೆ ಮಂಡಿಯಲ್ಲಿ ಕಟ್ ಕಟ್ ಎನ್ನುವ ಶಬ್ದ ಏಕೆ ಹೀಗೆ?

ನಮ್ಮ ದೇಹದ ಬಹು ಮುಖ್ಯ ಅಂಗಗಳು ಎಂದರೆ ಅದು ಮೂಳೆಗಳು. ಮೂಳೆಗಳಲ್ಲಿ ಕೀಲುಗಳು ಇನ್ನು ಮುಖ್ಯವಾಗುತ್ತದೆ. ಅದರಲ್ಲೂ ನಮ್ಮ ಮಂಡಿಯ ಭಾಗದ ಮೂಳೆಗಳು ನಮಗೆ ನಡೆಯಲು, ಒಂದು ಕಡೆ ಕುಳಿತುಕೊಳ್ಳಲು, ನಿಂತುಕೊಳ್ಳಲು ಮತ್ತು ನಮ್ಮ ದೇಹವನ್ನು ಬ್ಯಾಲೆನ್ಸ್ ಮಾಡಲು ಸಹಾಯ ಮಾಡುತ್ತವೆ. ಇಲ್ಲಿ ಬರುವ ಲಿಗಾಮೆಂಟ್ ಈ ನಿಟ್ಟಿನಲ್ಲಿ ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಕೆಲವೊಮ್ಮೆ ನಾವು ನಡೆಯುವಾಗ ಇದ್ದಕ್ಕಿದ್ದಂತೆ ಮಂಡಿಗಳ ಭಾಗದಲ್ಲಿ ಕಟ್ ಕಟ್ ಎನ್ನುವ ಶಬ್ದ ಕೇಳಿ ಬರುತ್ತದೆ. ಕುಳಿತುಕೊಂಡಾಗ ಈ ರೀತಿ ಆಗುತ್ತದೆ. ಈ ಬಗ್ಗೆ ಪಿ ಎಸ್ ಆರ್ ಐ ಹಾಸ್ಪಿಟಲ್ ನಲ್ಲಿ ಮೂಳೆ ರೋಗ ತಜ್ಞರಾಗಿರುವ ಡಾಕ್ಟರ್ ಗೌರವ ಪ್ರಕಾಶ್ ಭಾರದ್ವಾಜ್ ಹೀಗೆ ಹೇಳುತ್ತಾರೆ.

**ಯಾವಾಗ ಮಂಡಿಗಳ ಭಾಗದಿಂದ ಈ ರೀತಿ ಶಬ್ದ ಬರುತ್ತದೆ:** ನಮ್ಮ ಮಂಡಿ ಭಾಗದಲ್ಲಿ ಕಂಡುಬರುವ ಕೀಲು ಸಂಕೀರ್ಣ ವಾಗಿದ್ದು, ಇಲ್ಲಿ ಲಿಗಮೆಂಟ್, ಮೂಳೆ, ಟೆಂಡನ್, ಕಾರ್ಟಿಲೆಜ್ ಇರುತ್ತದೆ. ನಾವು ನಡೆಯುವ ಸಂದರ್ಭದಲ್ಲಿ ಇವುಗಳೆಲ್ಲಾ ಒಂದಕ್ಕೊಂದು ಸಂಬಂಧಿಸಿದಂತೆ ಸಹಕರಿಸಿ ಕೆಲಸ ಮಾಡುತ್ತವೆ.



ಇಲ್ಲಿ ನಡೆಯುವ ಅಸಮತೋಲನ ಮಂಡಿಗಳ ಭಾಗದಲ್ಲಿ ಕಟ್ ಕಟ್ ಎನ್ನುವ ಶಬ್ದ ಬರುವಂತೆ ಮಾಡುತ್ತವೆ. ಮಂಡಿಗಳ ಭಾಗದಲ್ಲಿ ಗ್ಯಾಸ್ ಗುಳ್ಳೆಗಳು ಈ ತರಹದ ಶಬ್ದ ಬರಲು ಕಾರಣವಾಗುತ್ತವೆ. ನಾವು ಮಂಡಿ ಮಡಚಿದಾಗ ಈ ಗುಳ್ಳೆಗಳು ಒಡೆದು ಶಬ್ದ ಬರುತ್ತದೆ. ಇದು ಸಹಜ ಪ್ರಕ್ರಿಯೆ ಆಗಿರುತ್ತದೆ ಎಂದು ಹೇಳಬಹುದು ಎನ್ನುತ್ತಾರೆ.

**ಮಂಡಿಯ ಭಾಗದ ಕಾರ್ಟಿಲೆಜ್:**
ಮತ್ತೊಂದು ಕಾರಣವನ್ನು ನೋಡುವುದಾದರೆ, ಮಂಡಿಯ ಭಾಗದ ಕಾರ್ಟಿಲೆಜ್ ಹರಿದು ಹೋಗುವುದು ಕೂಡ ಇರುತ್ತದೆ. ಎರಡು ಮೂಳೆಗಳ ಮಧ್ಯೆ ಇರುವ ಈ ಭಾಗವು ಮೂಳೆಗಳ ಘರ್ಷಣೆಯನ್ನು ತಡೆಯುತ್ತದೆ. ನಮ್ಮ ಚಟುವಟಿಕೆಗಳು ಹೆಚ್ಚಾದರೆ ವಯಸ್ಸಾದಂತೆ ಈ ಪದರವು ತೆಳ್ಳಗಾಗುತ್ತಾ ಬರುತ್ತದೆ. ಮೂಳೆಗಳ ನಡುವೆ ಕಂಡುಬರುವ ಘರ್ಷಣೆ ಈ ರೀತಿಯ ಶಬ್ದ ಬರುವಂತೆ ಮಾಡುತ್ತದೆ. ಇದನ್ನು ವೈದ್ಯಕೀಯ ಭಾಷೆಯಲ್ಲಿ ಆಸ್ಟಿಯೋ ಆರ್ಥೋರಿಟಿಸ್ ಎಂದು ಕರೆಯಲಾಗುತ್ತದೆ.

**ಯಾವಾಗ ಎಚ್ಚರಿಕೆಯಿಂದ ಇರಬೇಕು:** ಒಂದು ವೇಳೆ ನಿಮ್ಮ ಮಂಡಿಗಳ ಭಾಗದಿಂದ ಈ ರೀತಿ ಶಬ್ದ ಕೇಳಿಸುತ್ತಿದ್ದು, ಯಾವುದೇ ನೋವು, ಊತ ಅಥವಾ ಇನ್ನಿತರ ತೊಂದರೆಗಳು ಇಲ್ಲದಿದ್ದರೆ, ನೀವು ಸುಲಭವಾಗಿ ಇದನ್ನು ಹಗುರವಾದ ವ್ಯಾಯಾಮಗಳನ್ನು ಮಾಡುವ ಮೂಲಕ ಮತ್ತು ಆರೋಗ್ಯಕರವಾದ ತೂಕವನ್ನು ನಿರ್ವಹಣೆ ಮಾಡಿಕೊಳ್ಳುವ ಮೂಲಕ ಈ ಸಮಸ್ಯೆಯಿಂದ ಹೊರಬರಬಹುದು.


ಒಂದು ವೇಳೆ ನೋವು, ಊತ, ಇದ್ದರೆ ಅಥವಾ ನಡೆಯಲು ಕಷ್ಟವಾಗುತ್ತಿದ್ದರೆ, ತಕ್ಷಣವೇ ವೈದ್ಯರನ್ನು ಸಂಪರ್ಕಿಸುವುದು ಒಳ್ಳೆಯದು.

## ಇದಂತೂ ಭಾರತವನ್ನು ಮತ್ತೆ ತೇಜಸ್ವಿಗೊಳಿಸುವ, ಸನಾತನ ಧರ್ಮದ ಪುನರ್ಸ್ಥಾಪನೆಯ ಜಾಗೃತಿ


# ಡಾ. ಜಯಂತ ಆಠವಲೆಯವರ 83ನೇಯ ಜನ್ಮೋತ್ಸವ

• ಶ್ರೀ. ವಿನೋದ ಕಾಮತ

ಸನಾತನ ಸಂಸ್ಥೆಯ ಮಾಧ್ಯಮದಿಂದ ಕಳೆದ 25 ವರ್ಷಗಳಿಂದ ನಿರಂತರವಾಗಿ ಹಿಂದೂ ರಾಷ್ಟ್ರಕ್ಕಾಗಿ ಜಾಗೃತಿ ಮೂಡಿಸುತ್ತಾ ಬಂದಿರುವ ಪರಮ ಶ್ರದ್ಧೆಯ ಡಾ. ಜಯಂತ ಆಠವಲೆಯವರ ಕಾರ್ಯ ಅಲೌಕಿಕ ಮತ್ತು ಅತ್ಯಂತ ವಿನೂತನವಾಗಿದೆ. ಅವರ 83ನೆಯ ಜನ್ಮೋತ್ಸವದ ಪ್ರಯುಕ್ತ ಗೋವಾದಲ್ಲಿ ಮೇ 17ರಿಂದ19 2025 ಈ ಕಾಲಾವಧಿಯಲ್ಲಿ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ ಆಯೋಜಿಸಲಾಗಿದೆ. ಇದು ಕೇವಲ ಮೊಹೋತ್ಸವವಲ್ಲ, ಭಾರತವನ್ನು ಮತ್ತೊಮ್ಮೆ ತೇಜಸ್ವಿ, ಸಾಮರ್ಥ್ಯಶಾಲಿಗೊಳಿಸಲು ಮತ್ತು ಸನಾತನ ಧರ್ಮ ಪುನರ್ಸ್ಥಾಪನೆಯ ಜಾಗೃತಿಯಾಗಿದೆ, ಎಂದು ಶ್ರೀರಾಮ ಜನ್ಮ ಭೂಮಿ ತೀರ್ಥಕ್ಷೇತ್ರ ನ್ಯಾಸದ ಕೋಶಾಧ್ಯಕ್ಷರಾದ ಪ. ಪೂ. ಗೋವಿಂದ ದೇವಗಿರಿಜೀ ಮಹಾರಾಜ ಇವರು ಮಹೋತ್ಸವಕ್ಕಾಗಿ ಕಳುಹಿಸಿರುವ ಶುಭ ಸಂದೇಶದಲ್ಲಿ ಗೌರವೋದ್ಗಾರವನ್ನು ಮಾಡಿದ್ದಾರೆ.



ಅವರು ಮುಂದುವರೆಸಿ, 'ಸನಾತನ ಸಂಸ್ಥೆ'ಯ ಮಾಧ್ಯಮದಿಂದ ಕಳೆದ 25 ವರ್ಷಗಳ ಹಿಂದೆ ಆರಂಭಿಸಿರುವ ಕಾರ್ಯದ ಫಲಶ್ರುತಿಯಾಗಿ ಇಂದು ಸಾವಿರಾರು ಸಂಖ್ಯೆಯ ಸಮರ್ಪಿತ ಕಾರ್ಯಕರ್ತರು ಅಲ್ಲಲ್ಲಿ ಹೋಗಿ ನಿಷ್ಕಾಮ ಭಾವನೆಯಿಂದ ಮತ್ತು ಸ್ವಯಂಶಿಸ್ತಿನಿಂದ ಸನಾತನ ಧರ್ಮದ ಪ್ರಸಾರ ಮಾಡುತ್ತಿದ್ದಾರೆ. ಈ ಕಾರ್ಯಕರ್ತರು ಸ್ವತಃ ಜೀವನದ ಸ್ವಾಧ್ಯಾಯ ಯಜ್ಞ, ಸೇವಾ ಯಜ್ಞ, ಜನಜಾಗೃತಿ ಯಜ್ಞ ಆರಂಭಿಸಿದ್ದಾರೆ. ಈ ಕಾರ್ಯ ಅತ್ಯಂತ ವಿನೂತನವಾಗಿದೆ, ಅದರಿಂದಲೇ ಸನಾತನ ರಾಷ್ಟ್ರದ ಅಭ್ಯುದಯದ ಮಾರ್ಗ ಪ್ರಕಾಶಿಸಲಿದೆ. ಈ ಮಹೋತ್ಸವದಲ್ಲಿ ವಿವಿಧ ರಾಷ್ಟ್ರನಿಷ್ಠ ನಾಯಕರು, ಧರ್ಮಾಚಾರ್ಯರು, ಕಾರ್ಯಕರ್ತರು, ಸನಾತನ ಪ್ರೇಮಿಗಳು ಒಗ್ಗೂಡಿ ವಿಚಾರ ಮಂಥನ ಮಾಡುವವರಿದ್ದಾರೆ. ಈ ಮಂಥನದಿಂದ ಕೇವಲ ನವನೀತ ಎಂದರೆ ಬೆಣ್ಣೆ ಅಷ್ಟೇ ಅಲ್ಲದೆ ಅಮೃತದ ಉತ್ಪತ್ತಿಯೂ ಆಗಲಿದೆ ಮತ್ತು ಇದೇ ಅಮೃತ ಕಲಶದಿಂದ ಸನಾತನ ರಾಷ್ಟ್ರಕ್ಕೆ ನೂತನ ತೇಜಸ್ಸು ಪ್ರಾಪ್ತವಾಗಲಿದೆ. ಪ್ರಸ್ತುತ ಭಾರತವನ್ನು ಸಮರ್ಥ ರಾಷ್ಟ್ರಗೊಳಿಸಬೇಕಿದ್ದರೆ, ಸನಾತನ ಧರ್ಮದ ಮೂಲಭೂತ ತತ್ವದ ಪುನಃಸ್ಥಾಪನೆ ಮಾಡುವುದು ಅತ್ಯಗತ್ಯವಾಗಿದೆ ಏಕೆಂದರೆ ಭಾರತದ ಸಾಮರ್ಥ್ಯದ ಮೇಲೆ ಜಗತ್ತಿನಲ್ಲಿ ಸಮಾನತೆ, ಬಾಂಧವ್ಯ ಮತ್ತು ನಿಜವಾದ ಸ್ವಾತಂತ್ರ್ಯ ಶಾಶ್ವತವಾಗಿ ಉಳಿಯುತ್ತದೆ. ಆದ್ದರಿಂದ ಈ ಕಾರ್ಯ ಯಾವುದೋ ವ್ಯಕ್ತಿಯ, ಯಾವುದೋ ಸಂಸ್ಥೆಯದಲ್ಲದೆ, ಧರ್ಮದ, ರಾಷ್ಟ್ರದ ಕಾರ್ಯವಾಗಿದೆ, ಆದ್ದರಿಂದಲೇ ಇದು ಪ್ರತ್ಯಕ್ಷ ಭಗವಂತನ ಕಾರ್ಯವಾಗಿದೆ. ಆದ್ದರಿಂದ ಎಲ್ಲಾ ಧರ್ಮಪ್ರೇಮಿಗಳು, ರಾಷ್ಟ್ರನಿಷ್ಠ ಕಾರ್ಯಕರ್ತರು, ನಾಯಕರು, ಧರ್ಮಗುರುಗಳು ಮತ್ತು ಭಕ್ತರು ಈ ಮಹೋತ್ಸವದಲ್ಲಿ ಸಹಭಾಗಿಯಾಗಿ ತಮ್ಮ ಶ್ರದ್ಧೆಯ, ಸೇವಾಭಾವದ ಕೊಡುಗೆ ನೀಡಬೇಕು.



ಸನಾತನ ಧರ್ಮದ ಬೇರು ಹೆಚ್ಚು ಶಕ್ತಿಶಾಲಿಗೊಳಿಸಲು, ಭಾರತದ ಸುಂದರ, ಸಮೃದ್ಧ ಭವಿಷ್ಯಕ್ಕಾಗಿ ಈ ಮಹೋತ್ಸವ ಒಂದು ಸುವರ್ಣ ಅವಕಾಶವಾಗಿದೆ. ಈ ಮಹಾ ಮಂಥನದಿಂದ ದೊರೆಯುವ ತೇಜಸ್ಸಿನಿಂದ ಭಾರತ ಆಕಾಶದೆತ್ತರಕ್ಕೇರಲಿದೆ ಮತ್ತು ಸನಾತನ ಧರ್ಮದ ದಿವ್ಯ ಪ್ರಕಾಶ ಸಂಪೂರ್ಣ ಜಗತ್ತಿನಲ್ಲಿ ಪಸರಿಸಲಿದೆ. ಆದ್ದರಿಂದ ನಾವೆಲ್ಲರೂ ಒಟ್ಟಾಗಿ ಸೇರಿ ಈ ದಿವ್ಯ ಕಾರ್ಯದಲ್ಲಿ ಸಹಭಾಗಿ ಆಗೋಣ, ಭಾರತಕ್ಕೆ ಅದರ ಸನಾತನ ತೇಜಸ್ಸಿನಿಂದ ಮತ್ತೊಮ್ಮೆ ಕಟ್ಟೋಣ, ಎಂದು ಅವರು ಕರೆ ನೀಡಿದರು.

## ಪ್ರಗತಿ ಪರಿಶೀಲನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಾಗಲಕೋಟೆ

ನಗರದ ತಾಲ್ಲೂಕು ಪಂಚಾಯತ ಸಭಾಭವನದಲ್ಲಿ ತಾಲ್ಲೂಕಾ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷತೆಯಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಜರುಗಿತು.

ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಎನ್.ರಾಂಪೂರ ಅವರು ಸರಕಾರದ ಪಂಚ ಗ್ಯಾರಂಟಿ ಯೋಜನೆಗಳಾದ ಅನ್ನ ಭಾಗ್ಯ, ಗೃಹಲಕ್ಷ್ಮೀ, ಗೃಹ ಜ್ಯೋತಿ, ಯುವನಿಧಿ, ಶಕ್ತಿ, ಯೋಜನೆಯ ಕುರಿತು ಆಯಾಯ್ಯ ಇಲಾಖೆಯ ಅಧಿಕಾರಿಗಳಿಂದ ಪ್ರಗತಿ ವರದಿ ಹಾಗೂ ಕುಂದು ಕೊರತೆಗಳು ನಿವಾರಣಾ ಕ್ರಮಗಳು ಕೈಗೊಳ್ಳಬೇಕಾದ ಅಂಶಗಳ ಬಗ್ಗೆ ಪರಿಶೀಲನೆ ನಡೆಸಿದರು. ಅರ್ಹ ಫಲಾನುಭವಿಗಳು ಸರಕಾರದ ಯೋಜನೆಗಳಿಂದ ವಂಚಿತರಾಗದಂತೆ ಕ್ರಮ ವಹಿಸಲು ತಿಳಿಸಿದರು. ಹೊಸದಾಗಿ ಸದಸ್ಯರಾಗಿ ಆಯ್ಕೆಯಾದ ಇರ್ಫಾನ ಮುದ್ದಾಪುರ ರವೀಂದ್ರ ಅನವಾಲರವರನ್ನು ಅಧ್ಯಕ್ಷರು ಅಭಿನಂದಿಸಿ, ಸನ್ಮಾನಿಸಲಾಯಿತು. ಸಭೆಯಲ್ಲಿ ತಾಲ್ಲೂಕಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಸದಸ್ಯರಾದ ರೇಣುಕಾ ನ್ಯಾಮಗೌಡ, ರಂಗಪ್ಪ ಮಳ್ಳಿ, ಜಟ್ಟೆಪ್ಪ ಮಾದಾಪೂರ, ಉಪಸ್ಥಿತರಿದ್ದರು.

• ವಚನ ಚಳವಳಿ ಮೂಲಕ ಸಾಮಾಜಿಕ ಪರಿವರ್ತನೆಗೆ ಶ್ರಮಿಸಿದ ವಿಶ್ವಗುರು ಬಸವಣ್ಣ

# ಬಸವ ತತ್ವದಿಂದ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ

• ಉದಯವಾಹಿನಿ, ಕಲಬುರಗಿ

ವಚನ ಚಳವಳಿ ಮೂಲಕ ಸಾಮಾಜಿಕ ಪರಿವರ್ತನೆಗೆ ಶ್ರಮಿಸಿದ ವಿಶ್ವಗುರು ಬಸವಣ್ಣನವರ ತತ್ವಾದರ್ಶಗಳಿಂದ ನಮ್ಮ ಅಂತರಂಗ ಶುದ್ಧಿಗೊಂಡು ನಮ್ಮ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯ ಎಂದು ಎಪಿಎಂಸಿ ಮಾಜಿ ಉಪಾಧ್ಯಕ್ಷರೂ ಆದ ಶರಣ ಚಿಂತಕ ರಾಜಕುಮಾರ ಕೋಟೆ ಹೇಳಿದರು.

ಬಸವ ಉತ್ಸವ-2025 ಅಂಗವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಗರದ ಕನ್ನಡ ಭವನದ ಕಲಾ ಸೌಧದಲ್ಲಿ ಎರಡು ದಿನಗಳ ಕಾಲ ಏರ್ಪಡಿಸಿರುವ ವಚನಾಧಾರಿತ ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಸವಾದಿ ಶರಣರು ಹಾಕಿ ಕೊಟ್ಟ ಕಾಯಕ, ದಾಸೋಹ ಹಾಗೂ ಮಾನವೀಯ ಮೌಲ್ಯಗಳನ್ನು ಅನುಸರಿಸಬೇಕು. ಬಸವಣ್ಣ ನಮ್ಮ ಸಾಂಸ್ಕೃತಿಕ ನಾಯಕರಾಗಿದ್ದು, ಕಾಯಕ ಸಂಸ್ಕೃತಿ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಬೇಕೆಂದ ಅವರು, ಈ ನಿಟ್ಟಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಸವ ಜಯಂತಿಯನ್ನು ವೈಚಾರಿಕವಾಗಿ ಮತ್ತು ಅರ್ಥಪೂರ್ಣವಾಗಿ ಆಯೋಜಿಸಿ ರಾಜ್ಯದ ಇತರೆ ಸಂಘ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ಬಣ್ಣಿಸಿದರು.


ಉದಯವಾಹಿನಿ ಚಿತ್ರ

ನಮ್ಮ ಮನೆ ಮತ್ತು ಮನಗಳಲ್ಲಿ ಬಸವ ಬೆಳಕು ಬೆಳಗಬೇಕು. ಮೂಢನಂಬಿಕೆ, ಅಂಧಶ್ರದ್ಧೆ ತೊರೆದು ಹೊಸ ಜೀವನ ಕಟ್ಟಿಕೊಳ್ಳಬಹುದು. ಬಸವ ತತ್ವ ಪಾಲನೆಯಿಂದ ನಾವೆಲ್ಲ ಸೌಹಾರ್ದತೆ ಮತ್ತು ಸಹೋದರತೆಯಿಂದ ಬದುಕಬಹುದಾಗಿದೆ. ಇಂದು ಬಸವ ತತ್ವ ಜನಸಾಮಾನ್ಯರ ಮನಕ್ಕೆ ತಲುಪಿಸಬೇಕಾಗಿದೆ. ಆಗ ಮಾತ್ರ ನಮ್ಮ ಅಂತರಂಗ ಶುದ್ಧಿ-ಬಹಿರಂಗ ಶುದ್ಧಿ ಸಾಧ್ಯ, ಎಂದ ಅವರು, ಮಹಾತ್ಮರ ಜಯಂತಿಗಳು ಕೇವಲ ದೊಡ್ಡ ವೇದಿಕೆಗಳು-ಮೆರವಣಿಗೆಗಳಿಗೆ ಸೀಮಿತಗೊಳಿಸದೆ ಅವರ ವಿಚಾರಗಳು ನಮ್ಮ ಹೃದಯದಲ್ಲಿ ಮೆರೆಸಬೇಕಾಗಿದೆ ಎಂದರು. ಕನ್ನಡ ಭಾಷೆಗೆ ಪುನರ್ಜನ್ಮ ಕೊಟ್ಟ ವಚನ ಸಾಹಿತ್ಯವನ್ನು ಪ್ರತಿಯೊಬ್ಬರ ಮನೆ-ಮನಗಳಿಗೆ ಮುಟ್ಟಿಸುವ ಕಾರ್ಯ ಪರಿಷತ್ತು ಮಾಡುತ್ತಿದೆ -ವಿಜಯಕುಮಾರ ಪಾಟೀಲ ತೇಗಲತಿಪ್ಪಿ, ಜಿಲ್ಲಾ ಕಸಾಪ ಅಧ್ಯಕ್ಷ

ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ

ಸಾನಿಧ್ಯ ವಹಿಸಿದ್ದ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಮಹಾಲಿಂಗ ಮಹಾಸ್ವಾಮಿಗಳು, ಶರಣ ಸಾಹಿತ್ಯ ಮತ್ತು ಕನ್ನಡ ಸಾಹಿತ್ಯ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ದೇಶದ ಬೇರೆ ಬೇರೆ ಪ್ರದೇಶಗಳಿಂದ ಕಲ್ಯಾಣಕ್ಕೆ ಆಗಮಿಸಿದ ಶರಣರು ಅವರ ಮಾತೃ ಭಾಷೆ ಬೇರೆಯಾಗಿದ್ದರೂ ಕನ್ನಡ ಕಲಿತು ವಚನಗಳನ್ನು ಬರೆದರು.

ಜಪಾನ್ ದೇಶ ಸೇರಿ ವಿದೇಶಗಳಲ್ಲಿ ಬಸವಾದಿ ಶರಣರ ಚಿಂತನೆಗಳು ಅಳವಡಿಸಿಕೊಂಡು ಬದುಕುತ್ತಿದ್ದಾರೆ. ಆದರೆ ನಾವಿಲ್ಲಿ ಮೂರ್ತಿ ಪೂಜೆ ಮಾಡಿ ವಿಚಾರಗಳು ಅಳವಡಿಸಿಕೊಳ್ಳಲಾಗುತ್ತಿಲ್ಲ. ಇಂದಿನ ಪ್ರತಿ ಸಮಸ್ಯೆಗೂ ಪರಿಹಾರವನ್ನು ಶರಣ ತತ್ವಗಳಲ್ಲಿ ಕಾಣಬಹುದಾಗಿದೆ -ಡಾ. ಮಲ್ಲಿಕಾರ್ಜುನ ವಡ್ಡನಕೇರಿ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ

ಎಂದು ನುಡಿದರು.

ಹಿರಿಯ ಚಿತ್ರಕಲಾ ಡಾ. ಎ.ಎಸ್. ಪಾಟೀಲ, ಹಿರಿಯ ಪತ್ರಕರ್ತ ದೇವೇಂದ್ರಪ್ಪ ಕಪನೂರ, ಸಮಾಜ ಸೇವಕಿ ಶ್ವೇತಾ ಸಿಂಗ್, ಕಲಾ ಸೌಧ ದ ಸಂಚಾಲಕ ಡಾ. ರೆಹಮಾನ್ ಪಟೇಲ್, ಜಿಲ್ಲಾ ಕಸಾಪದ ಗೌರವ ಕಾರ್ಯದರ್ಶಿಗಳಾದ ಶಿವರಾಜ ಅಂಡಗಿ, ಧರ್ಮಣ್ಣ ಎಚ್ . ಧನ್ನಿ, ರಾಜೇಂದ್ರ ಮಾಡಬೂಳ, ಮಹ್ಮದ್ ಅಯಾಜೋದ್ದೀನ್ ಪಟೇಲ್ ವೇದಿಕೆ ಮೇಲಿದ್ದರು.


## ಮಿನಿ ನ್ಯೂಸ್

### ಸದಸ್ಯೆ ಕಾರು ತಡೆದು ಪ್ರತಿಭಟನೆ

• ಉದಯವಾಹಿನಿ, ಚನ್ನಗಿರಿ

ಇಬ್ಬರು ಮಹಿಳೆಯರನ್ನು ಮನೆಯ ಎದುರು ಸಾರ್ವಜನಿಕವಾಗಿ ಥಳಿಸಿದ ತಾಲ್ಲೂಕಿನ ತಾವರೆಕೆರೆ ಗ್ರಾಮಕ್ಕೆ ಭೇಟಿ ನೀಡಿದ್ದ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಡಾ.ಅರ್ಚನಾ ಮಜುಂದಾರ್ ಅವರ ಕಾರು ತಡೆದು ಮುಸ್ಲಿಂ ಸಮುದಾಯದ ಮಹಿಳೆಯರು ಸೋಮವಾರ ಪ್ರತಿಭಟನೆ ನಡೆಸಿದರು. ಅಮಾನವೀಯ ಕೃತ್ಯವನ್ನು ಸಮರ್ಥಿಸಿಕೊಂಡ ಪ್ರತಿಭಟನಕಾರರು, ಪೊಲೀಸರು ಬಂಧಿಸಿರುವ ಆರೋಪಿಗಳನ್ನು ಕೂಡಲೇ ಬಿಡುಗಡೆ ಮಾಡುವಂತೆ ಆಗ್ರಹಿಸಿದರು. ಸಂತ್ರಸ್ತ ಮಹಿಳೆಯರಿಗೆ ಸಾಂತ್ವನ ಹೇಳಿ ಚನ್ನಗಿರಿಯತ್ತ ಪ್ರಯಾಣ ಬೆಳೆಸಲು ಮುಂದಾದ ಅರ್ಚನಾ ಅವರ ಕಾರನ್ನು ಗುಂಪೊಂದು ತಡೆಯಿತು. ಇದರಲ್ಲಿ ಆರೋಪಿಗಳ ಕುಟುಂಬದ ಸದಸ್ಯರು ಹೆಚ್ಚಾಗಿದ್ದರು. ಆರೋಪಿ ಪುರುಷರು ಮಾಡಿದ್ದು ತಪ್ಪಲ್ಲ, ಪ್ರಕರಣದಲ್ಲಿ ಪೊಲೀಸರು ಅಮಾಯಕರನ್ನು ಬಂಧಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಬಾಲ್ಯ ವಿವಾಹಕ್ಕೆ ಸಾಕ್ಷಿಯಾದ ಕಂಪ್ಲಿ ಶಾಸಕ ಗಣೇಶ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೊಪ್ಪಳ

ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಸೀರವಾರ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಬಾಲ್ಯ ವಿವಾಹದಲ್ಲಿ ಬಳ್ಳಾರಿ ಪಲಪ ಜಿಲ್ಲೆ ಕಂಪ್ಲಿ ಕ್ಷೇತ್ರದ ಶಾಸಕ ಜೆ.ಎನ್.ಗಣೇಶ ಸೇರಿದಂತೆ ಅನೇಕ ಜನಪ್ರತಿನಿಧಿಗಳು ಭಾಗಿಯಾಗಿದ್ದಾರೆ. ಈಗ ಈ ಫೋಟೋಗಳು ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿವೆ. ಅಲ್ಲದೆ ಸಿರವಾರ ಗ್ರಾ.ಪಂ ಸದಸ್ಯೆಯೇ ತನ್ನ ಅಪ್ರಾಪ್ತ ಮಗಳ ಮದುವೆ ಮಾಡಿರುವುದು ಚರ್ಚೆಗೆ ಗ್ರಾಸವಾಗಿದೆ. ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ, ಕೆಲ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸಹ ಮದುವೆಯಲ್ಲಿ ಭಾಗಿಯಾಗಿದ್ದಾರೆ. ಬಾಲ್ಯ ವಿವಾಹದ ಪ್ರಕರಣ ಕನಕಗಿರಿ ಠಾಣೆಯಲ್ಲಿ ದಾಖಲಾಗಿದ್ದು, ಬಾಲಕಿಯನ್ನು ರಕ್ಷಿಸಲಾಗಿದೆ.

### ಖಾಸಗಿ ಬಸ್ಸುಗಳ ನಡುವೆ ಅಪಘಾತ 12 ಮಂದಿಗೆ ಗಾಯ

• ಉದಯವಾಹಿನಿ, ಕಾಸರಗೋಡು


ಖಾಸಗಿ ಬಸ್ಸುಗಳ ನಡುವೆ ಉಂಟಾದ ಅಪಘಾತದಲ್ಲಿ 12 ಮಂದಿ ಗಾಯಗೊಂಡ ಘಟನೆ ಸಂಜೆ ಕಾಸರಗೋಡಿನ ಬ್ಯಾಂಕ್ ರಸ್ತೆಯಲ್ಲಿ ನಡೆದಿದೆ. ಟೂರಿಸ್ಟ್ ಬಸ್ಸು ಮತ್ತು ಮಧೂರು ಕಾಸರಗೋಡು ನಡುವೆ ಸಂಚಾರ ನಡೆಸುತ್ತಿರುವ ಬಸ್ಸುಗಳ ನಡುವೆ ಮುಖಾಮುಖಿ ಡಿಕ್ಕಿ ಹೊಡೆದು ಅಪಘಾತ ನಡೆದಿದೆ. ಅಪಘಾತದಲ್ಲಿ ಗಾಯಗೊಂಡವರನ್ನು ಅಗ್ನಿಶಾಮಕ ದಳದ ಸಿಬ್ಬಂದಿಗಳು ಹಾಗೂ ನಾಗರಿಕರು ಹೊರತೆಗೆದು ಆಸ್ಪತ್ರೆಗೆ ಸಾಗಿಸಿದ್ದಾರೆ. ಖಾಸಗಿ ಬಸ್ಸಿನ ಚಾಲಕ ಕಮಲಾಕ್ಷ ಗಂಭೀರ ಗಾಯ ಗೊಂಡಿದ್ದಾರೆ. ಮನ್ನಿಪ್ಪಾಡಿಯ ಸ್ವಪ್ನಾ (49) , ಅಲಂಪಾಡಿಯ ಮುಸ್ತಾಫಾ ( 40) , ಪಟ್ಲದ ಅಬ್ಬಾಸ್ (66) , ಟೂ ರಿಸ್ಟ್ ಬಸ್ಸು ಚಾಲಕ ವಿದ್ಯಾನಗರ ದ ಸಫೀರ್ (40), ಅಲಂಪಾಡಿಯ ಅಬ್ದುಲ್ ರಹಮಾನ್ ( 50), ಮೀಪುಗುರಿಯ ಸುರೇಶ್ (49), ಉಳಿಯ ತ್ತಡ್ಕ ದ ಸರಸ್ವತಿ (57) ಮೊದಲಾದವರು ಗಾಯಗೊಂಡಿದ್ದು ವಿವಿಧ ಆಸ್ಪತ್ರೆಗೆ ದಾಖಲಿಸಲಾಗಿದೆ.

## ವಿಂಡ್ ಪವರ್ ಘಟಕಗಳ ಸ್ಥಾಪನೆಗೆ ವಿರೋಧಿಸಿ ಮನವಿ

• ಉದಯವಾಹಿನಿ, ಹಗರಿಬೊಮ್ಮನಹಳ್ಳಿ

ತಾಲ್ಲೂಕಿನಲ್ಲಿ ಪವನ ಶಕ್ತಿ ( ವಿಂಡ್ ಪವರ್ ) ಘಟಕಗಳ ಸ್ಥಾಪನೆಗೆ ಅವಕಾಶ ನೀಡಬಾರದು ಎಂದು ವಿರೋಧಿಸಿ ಕೃಷಿ ಭೂಮಿ ಉಳಿವಿಗಾಗಿ ನಾವು ಎಂಬ ಸಮಿತಿಯ ಪದಾಧಿಕಾರಿಗಳು ತಹಶೀಲ್ದಾರ್ ಆರ್. ಕವಿತ ಗೆ ಮನವಿ ಸಲ್ಲಿಸಿದರು.

ಪಟ್ಟಣದ ಆಡಳಿತ ಸೌಧದ ಮುಂಭಾಗದಲ್ಲಿ ಪ್ರತಿಭಟನೆಯ ಮನವಿ ಸಲ್ಲಿಸಿ ಸಂಚಾಲಕ ಬುಡ್ಡಿ ಬಸವರಾಜ್ ಮಾತನಾಡಿ ತಾಲ್ಲೂಕಿನಲ್ಲಿ ಈಗಾಗಲೇ ಕೃಷಿ ಭೂಮಿ ಒಂದಲ್ಲ ಒಂದು ರೀತಿ ನಾಶವಾಗುತ್ತದೆ. ಈಗ ವಿಂಡ್ ಪವರ್ ಹೆಸರಿನಲ್ಲಿ ರೈತರ ಜಮೀನನ್ನು ನುಂಗಿ ಹಾಕಲು ಉನ್ನಾರ ನಡೆಯಲಿದೆ. ಕೃಷಿಯನ್ನೇ ನಂಬಿಕೊಂಡಿರುವ ರೈತರ ಬದುಕು ದುಸ್ಥರವಾಗಲಿದೆ. 20 ಹಳ್ಳಿಗಳಲ್ಲಿ ಸುಮಾರು 89 ವಿಂಡ್ ಪವರ್ ಘಟಕಗಳ ಸ್ಥಾಪನೆಗೆ ಹುನ್ನಾರ ನಡೆದಿದೆ. ರೈತರಿಗೆ ಹಣದ ಆಮಿಷ ನೀಡಿ ಫಲವತ್ತಾದ ಕೃಷಿ ಭೂಮಿಯಲ್ಲಿ ಅಳವಡಿಸುವುದು ಯಾವ ನ್ಯಾಯ. ಸೋಲಾರ್ ಪ್ಲಾಂಟ್ ವಿಷಯದಲ್ಲಿ ಈಗಾಗಲೇ ನೂರಾರು ಎಕರೆ ರೈತರು ಭೂಮಿ ಕಳೆದುಕೊಂಡಿದ್ದಾರೆ.


ಉದಯವಾಹಿನಿ ಚಿತ್ರ

ತಾಲ್ಲೂಕ ಕೇಂದ್ರದ ಸುತ್ತಮುತ್ತ ರೈತರ ಭೂಮಿಗಳು ಬಡಾವಣೆಗಳಾಗಿವೆ. ಹೀಗೆ ರೈತರ ಭೂಮಿ ಕಾರ್ಪೊರೇಟರ್ ಸೆಂಟರ್ ಗಳಿಗೆ ಹೋದರೆ ರೈತ ಹೇಗೆ ಬದುಕಬೇಕು. ಆದ್ದರಿಂದ ಯಾವುದೇ ಕಾರಣಕ್ಕೂ ವಿಂಡ್ ಪವರ್‌ಗೆ ಭೂಮಿ ನೀಡುವುದಿಲ್ಲ. ಒಂದು ವೇಳೆ ತಾಲ್ಲೂಕ ಆಡಳಿತ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ವಿಷದ ಬಾಟಲಿ ಹಿಡಿದುಕೊಂಡು ರೈತರು ಆಡಳಿತ ಸೌಧದ ಮುಂಭಾಗದಲ್ಲಿ ನಿಲ್ಲಬೇಕಾಗುತ್ತದೆ ಎಂದರು.

ಜಿಲ್ಲಾಧಿಕಾರಿಗಳು ತಾಲ್ಲೂಕಿನ ಕೃಷಿ ಭೂಮಿಯನ್ನು ತಮ್ಮ ಮನಸೋ ಇಚ್ಛೆಯಂತೆ ಖಾಸಗಿ ಕಂಪನಿಗಳಿಗೆ ನೀಡುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ.ನೂರಾರು ರೈತ ಕುಟುಂಬಗಳಿಗೆ ವಂಚನೆ ಮಾಡಿ ಯಾರದ್ದು ಹಿತ ಕಾಯುವ ಜಿಲ್ಲಾಧಿಕಾರಿಗಳ ವರ್ತನೆ ರೈತ ವಿರೋಧಿ ನಿತಿಯಿಂದ ಕೂಡಿದೆ, ಈ ಕೂಡಲೇ ವಿಂಡ್ ಪವರ್ ವಿದ್ಯುತ್ ಘಟಕಗಳನ್ನು ಸ್ಥಾಪನೆ ಮಾಡುವುದನ್ನು ಕೈ ಬಿಟ್ಟು ರೈತರ ಬದುಕನ್ನು ಬೆಳಗಿಸುವ ಕೆಲಸಕ್ಕೆ ಮುಂದಾಗಲಿ -ಮುಟುಗನಹಳ್ಳಿ ಕೊಟ್ರೇಶ್

## ಬಸವ ಜಯಂತಿ ಉತ್ಸವ ಯಶಸ್ವಿಗೆ ಸಹಕರಿಸಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೀದರ್

ಬಸವ ಜಯಂತಿ ಉತ್ಸವ ಸಮಿತಿ ವತಿಯಿಂದ ನಗರದಲ್ಲಿ ಮೂರು ದಿನ ಹಮ್ಮಿಕೊಂಡಿರುವ ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿ ಉತ್ಸವ ಯಶಸ್ವಿಗೆ ಎಲ್ಲರೂ ಸಹಕರಿಸಬೇಕು ಎಂದು ಚಿಂತಕಿ ಸುವರ್ಣಾ ಚಿಮಕೋಡೆ ಹೇಳಿದರು.

ನಗರದ ಬಸವೇಶ್ವರ ಕಾಲೊನಿಯ ಉದ್ಯಾನದಲ್ಲಿ ನಡೆದ ಬಸವ ಜಯಂತಿ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಮೂರು ದಿನ ಬಸವ ಸೇವಾ ಪ್ರತಿಷ್ಠಾನ ಹಾಗೂ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ವಿವಿಧ ಕಾರ್ಯಕ್ರಮಗಳು ಜರುಗಲಿವೆ. ನಗರದಲ್ಲಿ ಬಸವೇಶ್ವರ ಭಾವಚಿತ್ರ, ಹಾಗೂ ವಚನ ಸಾಹಿತ್ಯದ ವೈಭವದ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು.

ಡಾ. ದೇವಕಿ ನಾಗೂರೆ ಮಾತನಾಡಿ, ನಗರದ ಎಲ್ಲಾ ಕಾಲೊನಿಗಳ ಬಸವಾನುಯಾಯಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

**ಪ್ರಚಾರಾರ್ಥ ಮೆರವಣಿಗೆ:** ಬಳಿಕ ಕಾಲೊನಿಯಲ್ಲಿ ಬಸವ ಜಯಂತಿ ಉತ್ಸವದ ಪ್ರಚಾರಾರ್ಥವಾಗಿ ಬಸವಣ್ಣನವರ ಭಾವಚಿತ್ರ, ಷಟ್‌ಸ್ಥಲ ಧ್ವಜ, ಭಜನೆಯೊಂದಿಗೆ ಮೆರವಣಿಗೆ ನಡೆಸಲಾಯಿತು. ಸಾರ್ವಜನಿಕರನ್ನು ಬಸವ ಜಯಂತಿ ಉತ್ಸವದ ಕಾರ್ಯಕ್ರಮಗಳಿಗೆ ಆಹ್ವಾನಿಸಲಾಯಿತು.

ಬಸವೇಶ್ವರ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷ ಡಾ. ಅಶೋಕ ಕುಮಾರ ನಾಗೂರೆ, ಶರಣಪ್ಪ ಚಿಮಕೋಡೆ, ಡಾ. ಪ್ರೇಮಲತಾ ಪಾಟೀಲ, ಶ್ರೀನಾಥ ನಾಗೂರೆ, ಪ್ರಭು ಗುನ್ನಳ್ಳಿ, ಇದ್ದರು.

## ಜಲಸೆಲೆಯಾಗದೆ ಕಸದ ತೊಟ್ಟಿಯಾದ ಕೆರೆ

• ಉದಯವಾಹಿನಿ, ಕಾರವಾರ

ನಗರ, ಗ್ರಾಮೀಣ ಭಾಗದಲ್ಲಿರುವ ಕೆರೆಗಳ ನಿರ್ವಹಣೆಯ ವಿಚಾರದಲ್ಲಿ ಆಡಳಿತ ವ್ಯವಸ್ಥೆ ಎಡವಿದೆ ಎಂಬ ಆರೋಪ ಆಗಾಗ ಜನರಿಂದ ಕೇಳಿಬರುವುದು ಹೆಚ್ಚು. ಜಿಲ್ಲೆಯ ವಿವಿಧೆಡೆಯಲ್ಲಿನ ಕೆರೆಗಳ ದುಸ್ಥಿತಿಯು ಈ ಆರೋಪ ಪುಷ್ಟೀಕರಿಸುತ್ತಿದೆ.

ನಗರ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲ್ಪಡಬೇಕಿದ್ದ ಕೆರೆಗಳೇ ಬಹುಪಾಲು ದುಸ್ಥಿತಿಯಲ್ಲಿವೆ. ಕಸ ಕಡ್ಡಿಗಳನ್ನು ಎಸೆಯುವ ಮೂಲಕ ಕೆರೆಗಳನ್ನು ಕಸದ ತೊಟ್ಟಿಯಾಗಿ ಪರಿವರ್ತಿಸಲಾಗುತ್ತಿದೆ. ಹಳಿಯಾಳ, ಮುಂಡಗೋಡ ಭಾಗದಲ್ಲಿ ಹತ್ತಾರು ಕೆರೆಗಳಿದ್ದರೂ ನಿರ್ವಹಣೆ ಇಲ್ಲದ ಪರಿಣಾಮ ಆ ಭಾಗದಲ್ಲಿ ಬೇಸಿಗೆಯಲ್ಲಿ ನೀರಿಗೆ ಬರ ಉಂಟಾಗಿದೆ.

ಕಾರವಾರದ ಮಾಜಾಳಿ ಸಮೀಪದ ದೇವತಿಶಿಟ್ಟಾ ಕೆರೆ, ಸದಾಶಿವಗಡದ ಕಾಕರತಳೆ ಕೆರೆಗಳು ನಿರ್ವಹಣೆ ಕಾಣದೆ ಉಪಯೋಗಕ್ಕೆ ಬಾರದಂತಿದೆ ಎಂಬುದು ಸ್ಥಳೀಯರ ದೂರು.

ಜಿಲ್ಲೆಯಲ್ಲಿನ ಕೆರೆಗಳನ್ನು ಸರಿಯಾಗಿ ಹೂಳೆತ್ತಿ, ನಿರ್ವಹಣೆ ಮಾಡಿದರೆ ಅಂತರ್ಜಲ ವೃದ್ಧಿಗೆ ಅನುಕೂಲವಾಗಲಿದೆ. ಇದರಿಂದ ಕೆರೆಯ ಸುತ್ತಮುತ್ತಲಿನ ನೂರಾರು ಎಕರೆ ಪ್ರದೇಶದಲ್ಲಿಯೂ ಬೇಸಿಗೆಯಲ್ಲಿ ನೀರಿನ ಬವಣೆ ತಪ್ಪಿಸಬಹುದು ಎಂಬುದು ತಜ್ಞರ ಅಭಿಪ್ರಾಯ.


ಉದಯವಾಹಿನಿ ಚಿತ್ರ

ಶಿರಸಿ ತಾಲ್ಲೂಕಿನ ಕಲಕರಡಿ, ಅಂಡಗಿ, ದಾಸನಕೊಪ್ಪ, ಬನವಾಸಿ, ಬೆಂಗಳೆ, ಉಂಚಳ್ಳಿ, ಕೆರೆಕೊಪ್ಪ, ಎಕ್ಕಂಬಿ ಭಾಗದಲ್ಲಿನ ಕೆರೆ ಹೂಳಿನಿಂದ ಕೂಡಿವೆ. ನಗರದ ಹಾಲುಹೊಂಡ ಕೆರೆ, ಕಲ್ಕುಣಿ ಕರೆಗಳು ತ್ಯಾಜ್ಯದಿಂದ ಕೂಡಿದೆ. ಕೋಟೆಕೆರೆಗೆ ಸಮೀಪದ ತೆರೆದ ಚರಂಡಿ ನೀರು ಸೇರುತ್ತಿದೆ.

ಯಲ್ಲಾಪುರ ಪಟ್ಟಣದಲ್ಲಿನ ಹೆಚ್ಚಿನ ಕೆರೆಗಳು ನಿರ್ವಹಣೆ ಇಲ್ಲದೆ ಪಾಳುಬಿದ್ದಿವೆ. ರವೀಂದ್ರ ನಗರದ ಕೆರೆ ಹಾಗೂ ಚಮಗಾರ ಕೆರೆಯ ಅತಿಕ್ರಮಣಕ್ಕೆ ತುತ್ತಾಗಿ ಕೆರೆಯ ಪ್ರದೇಶ ಕಡಿಮೆಯಾಗುತ್ತಿದೆ ಎಂಬುದು ಸ್ಥಳೀಯರ ದೂರು.

## ಬನಹಟ್ಟಿ: ಕುಡಿಯುವ ನೀರಿಗಾಗಿ ಪರದಾಟ

• ಉದಯವಾಹಿನಿ, ನರಗುಂದ

ತಾಲ್ಲೂಕಿನ ಬನಹಟ್ಟಿ ಗ್ರಾಮದ ಜನರು ಕುಡಿಯುವ ನೀರಿಗಾಗಿ ಮೂರು ದಿನಗಳಿಂದ ತೀವ್ರ ಪರದಾಡುವಂತಾಗಿದೆ. ಪರ್ಯಾಯ ವ್ಯವಸ್ಥೆ ಇಲ್ಲದ ಕಾರಣ ನರಗುಂದ ಪಟ್ಟಣಕ್ಕೆ ಬಂದು ಕುಡಿಯುವ ನೀರು ತೆಗೆದುಕೊಂಡು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

★24/7 ಡಿಬಿಒಟಿ ನೀರಿನ ಪೂರೈಕೆ ಇದ್ದರೂ ಮೂರು ದಿನಗಳಿಂದ ನೀರು ಸ್ಥಗಿತಗೊಂಡಿದೆ. ಇದರಿಂದ ಜನರು ಬಳಸಲು, ಕುಡಿಯಲು ನೀರು ಎಲ್ಲಿಂದ ತರಬೇಕು ಎಂದು ಸ್ಥಳೀಯ ಆಡಳಿತದ ವಿರುದ್ಧ ಬನಹಟ್ಟಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಇಲ್ಲದ ಪರ್ಯಾಯ ವ್ಯವಸ್ಥೆ:** ಬನಹಟ್ಟಿಯಲ್ಲಿ ಪ್ರಸ್ತುತ ಡಿಬಿಒಟಿಯೇ ಆಧಾರ. ಅದು ಬಂದ್ ಆದರೆ ಜನರಿಗೆ ನೀರಿಲ್ಲ. ಕುಡಿಯುವ ನೀರಿನ ಕೆರೆ ಇದ್ದರೂ ಇಲ್ಲದಂತಾಗಿದೆ. ಡಿಬಿಒಟಿ ಬಂದ ಮೇಲಂತೂ ಕೆರೆಗಳು ಹಾಳಾಗಿ ಹೋಗಿವೆ. ಅದರಲ್ಲಿ ಈಗ ಅಲ್ಪ ಪ್ರಮಾಣದ ನೀರು ಇದ್ದರೂ ಬಳಸಲು ಯೋಗ್ಯವಿಲ್ಲದಂತಾಗಿದೆ. ಊರ ಹಳ್ಳದ ಬಳಿ ಕೊಳವೆಬಾವಿ ನೀರು ಬಳಸಲಿಕ್ಕೆ ಉಪಯೋಗಿಸಲಾಗುತ್ತಿತ್ತು. ಅದು ಈಗ ಅಷ್ಟಕ್ಕಷ್ಟೇ. ಇದರಿಂದ ಬನಹಟ್ಟಿ ಹಾಗೂ ಮೂಗನೂರ ಗ್ರಾಮದ ನಾಗರಿಕರು ಕುಡಿಯುವ ನೀರಿಗಾಗಿ ಹಾಗೂ ಬಳಸುವ ನೀರಿಗೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.


ಉದಯವಾಹಿನಿ ಚಿತ್ರ

ವಿದ್ಯುತ್ ಸಮಸ್ಯೆಯಿಂದ ಡಿಬಿಒಟಿ ನೀರು ಪೂರೈಕೆಯಾಗಿಲ್ಲ. ಈಗಾಗಲೇ ದುರಸ್ತಿ ಕಾರ್ಯ ನಡೆದಿದೆ. ಸೋಮವಾರದಿಂದ ನೀರು ಪೂರೈಕೆ ಮಾಡಲಾಗುವುದು -ಎನ್.ಎಂ.ಪೂಜಾರ, ಪಿಡಿಒ ಬನಹಟ್ಟಿ

**ಎರಡು ವಾರಕ್ಕೊಮ್ಮೆ ನೀರು:** 'ಡಿಬಿಒಟಿ ಇದ್ದರೂ ವಾರಕ್ಕೊಮ್ಮೆ ನೀರು ಪೂರೈಕೆಯಾಗುತ್ತದೆ. ಒಂದು ವಾರದಿಂದ ಸರಿಯಾಗಿ ನೀರು ಪೂರೈಕೆ ಆಗುತ್ತಿಲ್ಲ. ಈಚೆಗಂತೂ ಎರಡು ವಾರಕ್ಕೊಮ್ಮೆ ನೀರು ಪೂರೈಕೆ ಆಗುತ್ತಿದೆ. ನೀರಿನ ಸಂಗ್ರಹ ಹೇಗೆ ಮಾಡಿಕೊಳ್ಳಬೇಕು ಎಂದು ತಿಳಿಯದಾಗಿದೆ ಎಂದು ಗ್ರಾಮಸ್ಥರು ಅಲವತ್ತುಕೊಂಡರು. ಬನಹಟ್ಟಿ ಗ್ರಾಮಕ್ಕೆ ಹೊಂದಿಕೊಂಡಂತೆ ಮೂಗನೂರ ಗ್ರಾಮದ ಜನರು ಸಹ ಕುಡಿಯುವ ನೀರಿಗಾಗಿ ಪರದಾಡಬೇಕಿದೆ. ಇಲ್ಲೂ ಕೂಡ ಪರ್ಯಾಯ ವ್ಯವಸ್ಥೆ ಇಲ್ಲ.

**ನಳಗಳಿಗೆ ಪೂರೈಕೆಯಾಗದ ನೀರು:** ಕೊಳವೆಬಾವಿ ನೀರು ಕೆರೆ ಪಕ್ಕದಲ್ಲೇ ಇದೆ. ಆದರೆ ಅದು ಉಪ್ಪು ನೀರಾಗಿದೆ. ಜೊತೆಗೆ ಆ ನೀರನ್ನು ನಳಗಳಿಗೆ ಪೂರೈಕೆಯಾಗುವುದಿಲ್ಲ.ಕಳೆದ ಎರಡು ದಿನಗಳಿಂದ ಎರಡು ಕಿ.ಮೀ. ದೂರದಲ್ಲಿರುವ ಕೊಳವೆಬಾವಿ ನೀರನ್ನು ಹೊತ್ತು ತರಬೇಕಿದೆ. ಕುಡಿಯುವ ನೀರಿಗೆ 15 ಕಿ.ಮೀ. ದೂರದ ನರಗುಂದಕ್ಕೆ ತೆರಳಬೇಕಿದೆ.

ಕೆರೆ ನೀರು ಸಂರಕ್ಷಿಸುವಲ್ಲಿ ಸಾರ್ವಜನಿಕರು ನಾಗರಿಕ ಪ್ರಜ್ಞೆ ತೋರಬೇಕು. ಡಿಬಿಒಟಿ ನೀರು ಇಲ್ಲದಾಗ ಪರ್ಯಾಯ ವ್ಯವಸ್ಥೆ ಬೇಕಿದೆ. ಈ ಬಗ್ಗೆ ಗ್ರಾಮ ಪಂಚಾಯಿತಿ ಶೀಘ್ರ ಕ್ರಮ ತೆಗೆದುಕೊಳ್ಳಲಿದೆ -ಶಿವರಾಜ ಕಲ್ಲಾಪುರ, ಗ್ರಾಪಂ ಸದಸ್ಯ

## ಶಾಖಾಧಿಕಾರಿ ಲೋಕಾಯುಕ್ತ ಬಲೆಗೆ

• ಉದಯವಾಹಿನಿ, ಅಜ್ಜಂಪುರ

ತಾಲ್ಲೂಕಿನ ಶಿವನಿ ಗ್ರಾಮದ ಮೆಸ್ಕಾಂ ಪ್ರಭಾರ ಶಾಖಾಧಿಕಾರಿ ಎಸ್.ಎಂ. ಕುಮಾರ್, ಗುತ್ತಿಗೆದಾರನಿಂದ ಲಂಚ ಸ್ವೀಕರಿಸುತ್ತಿದ್ದ ವೇಳೆ ಸೋಮವಾರ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ವಶಕ್ಕೆ ಪಡೆದಿದ್ದಾರೆ. 'ಯುಪಿಎಸ್‌ಸಿ ಸಂದರ್ಶನದಲ್ಲಿ ಕಾಶ್ಮೀರ ಮತ್ತು ಕುರಿ, ಬಗ್ಗೆಯೇ ಕೇಳಿದ್ರು, ಗಂಗಾ ಕಲ್ಯಾಣ ಯೋಜನೆಯಡಿ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು, ಗುತ್ತಿಗೆದಾರ ಆನಂದ್ ಅವರಿಂದ ಪಟ್ಟಣದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಚೇರಿಯಲ್ಲಿ ಕುಮಾರ್ 20 ಸಾವಿರ ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಡಿವೈಎಸ್‌ಪಿ ತಿರುಮಲೇಶ್ ನೇತೃತ್ವದ ತಂಡವು ದಾಳಿ ನಡೆಸಿ, ವಶಕ್ಕೆ ಪಡೆದರು.

## ಇ-ಸ್ವತ್ತು ಉತಾರಕ್ಕೆ ಲಂಚ: ಪಿಡಿಒ ಸೇರಿ ಐವರ ಬಂಧನ

• ಉದಯವಾಹಿನಿ, ರಾಣೆಬೆನ್ನೂರು

ತಾಲ್ಲೂಕಿನ ಹಲಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೃಷಿಯೇತರ (ಎನ್‌ಎ) ಜಮೀನಿನಲ್ಲಿ ಅಭಿವೃದ್ಧಿಪಡಿಸಿದ್ದ ನಿವೇಶನಗಳಿಗೆ ಇ-ಸ್ವತ್ತು ಉತಾರ ಮಾಡಿಕೊಡಲು ಸೋಮವಾರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಕೆ.ಮಂಜುನಾಥ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ತಿರಕಪ್ಪ ಬೂದಿಹಾಳ, ಸದಸ್ಯರಾದ ಸೋಮಶೇಖರ ಕನ್ನಪ್ಪಳವರ, ಪ್ರಸನ್ನ ಬಣಕಾರ ಮತ್ತು ಸೈಯ್ಯದ್ ರೆಹಮಾನ ಕರ್ಜಗಿ ಅಲಿಯಾಸ್ ಭಾಷಾಸಾಬ್ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ರಾಣೆಬೆನ್ನೂರಿನ ನವೀನ ಮಲ್ಲೇಶಪ್ಪ ಅಂದನೂರ ಅವರು ಹಲಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೃಷಿಯೇತರ ಜಮೀನು ಅಭಿವೃದ್ಧಿಪಡಿಸಿದ್ದರು. ಒಟ್ಟು 124 ನಿವೇಶನಗಳ ಪೈಕಿ 60 ನಿವೇಶನಗಳಿಗೆ ಇ-ಸ್ವತ್ತು ಉತಾರ ಮಾಡುವುದಕ್ಕೆ ಪಿಡಿಒ 1 ಲಕ್ಷ ಲಂಚ ಪಡೆದಿದ್ದರು.


ಇನ್ನುಳಿದ ನಿವೇಶನಗಳಿಗೆ ಉತಾರ ಮಾಡಿಕೊಡಲು 4.5 ಲಕ್ಷ ನೀಡುವಂತೆ ಉಪಾಧ್ಯಕ್ಷ ಹಾಗೂ ಸದಸ್ಯರು ಬೇಡಿಕೆ ಇಟ್ಟಿದ್ದರು. ನಂತರ 4 ಲಕ್ಷಕ್ಕೆ ಒಪ್ಪಿ ಆರೋಪಿಗಳು ಲಂಚ ಪಡೆಯುತ್ತಿದ್ದ ವೇಳೆ ಕಾರ್ಯಾಚರಣೆ ನಡೆಸಲಾಯಿತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

## ಅಧಿಕಾರಿಗೆ ರೇವಣ್ಣ ತರಾಟೆ: ಎಫ್‌ಐಆರ್ ದಾಖಲಿಸುವ ಎಚ್ಚರಿಕೆ

• ಉದಯವಾಹಿನಿ, ಹೊಳೆನರಸೀಪುರ

ರೈತರಿಗೆ ತೂಕದಲ್ಲಿ ಮೋಸ ಮಾಡಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಶಾಸಕ ಎಚ್.ಡಿ.ರೇವಣ್ಣ ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಯ ರಾಗಿ ಖರೀದಿ ಕೇಂದ್ರಕ್ಕೆ ಭೇಟಿ ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರಲ್ಲದೇ, ದೂರುಗಳು ಬಂದರೆ ಎಫ್‌ಐಆರ್ ದಾಖಲಿಸುವುದಾಗಿ ಎಚ್ಚರಿಕೆ ನೀಡಿದರು.

'ಖರೀದಿ ಕೇಂದ್ರದಲ್ಲಿ ಅಧಿಕಾರಿಗಳು ರೈತರಿಗೆ ತೂಕದಲ್ಲಿ ಮೋಸ ಮಾಡುತ್ತಿದ್ದು, ರೈತರಿಂದ ಹಣ ಪಡೆಯುತ್ತಿದ್ದಾರೆ. ಹಳ್ಳಿಗಳಿಂದ ತಂದ ರಾಗಿಯನ್ನು ಸಕಾಲದಲ್ಲಿ ಇಳಿಸಿಕೊಳ್ಳದೆ ಎರಡು ಮೂರು ದಿನ ಗಾಡಿಗಳನ್ನು ನಿಲ್ಲಿಸಿ ತೊಂದರೆ ನೀಡುತ್ತಿದ್ದಾರೆ. ರೈತರಲ್ಲದವರಿಂದ ರಾಗಿ ಖರೀದಿಸುತ್ತಿದ್ದಾರೆ' ಎಂದು ಅನೇಕರು ಆರೋಪಿಸಿದ್ದರು.


ಉದಯವಾಹಿನಿ ಚಿತ್ರ

ಇದು ಪತ್ರಿಕೆ ಹಾಗೂ ದೃಶ್ಯಮಾಧ್ಯಮಗಳಲ್ಲಿ ನೋಡಿದ ಶಾಸಕ ಎಚ್.ಡಿ. ರೇವಣ್ಣ ಸೋಮವಾರ ದಿಢೀರ್ ಭೇಟಿ ನೀಡಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಸ್ಥಳದಲ್ಲಿದ್ದ ರಾಗಿ ಖರೀದಿ ಕೇಂದ್ರದ ಅಧಿಕಾರಿ ಸಮದ್ ಅಲಿ ಇಲ್ಲ ಸಾರ್ ಲೋಡರ್ಸ್‌ಗಳನ್ನು ಕೇಳಿ ಎಂದು ಸಮುಜಾಯಿಷಿ ನೀಡಿದಾಗ ಅಸಮಾಧಾನಗೊಂಡ ರೇವಣ್ಣ, 'ನೀವು ಹಾಗೂ ಲೋಡರ್ಸ್ ಸೇರಿಯೇ ರೈತರಿಗೆ ಮೋಸ ಮಾಡುತ್ತಿದ್ದೀರಂತೆ. ಇದೆಲ್ಲ ಇಲ್ಲಿ ನಡೆಯಲ್ಲ. ಇನ್ನು ಮುಂದೆ ಇಂತಹ ದೂರುಗಳು ಬಂದರೆ ನಿಮ್ಮ ಮೇಲೆ ಎಫ್‌ಐಆರ್ ಮಾಡಿಸುತ್ತೇನೆ ಎಂದು ಎಚ್ಚರಿಸಿದರು. ಇವರೇನಾದರು ನಿಮಗೆ ಮೋಸ ಮಾಡಿದರೆ ನೀವು ನೇರ ತಹಶೀಲ್ದಾರ್‌ಗೆ ದೂರು ನೀಡಿ ಎಂದು ಸ್ಥಳದಲ್ಲಿದ್ದ ರೈತರಿಗೆ ಸಲಹೆ ನೀಡಿದರು.

## ಸಂಭ್ರಮದ ರಥೋತ್ಸವ

• ಉದಯವಾಹಿನಿ, ಗುಳೇದಗುಡ್ಡ

ಪಟ್ಟಣದ ಮರಡಿಮಠದ ಶ್ರೀ ಕಾಡಸಿದ್ಧೇಶ್ವರರ ನೂತನ ರಥೋತ್ಸವ ಸಂಜೆ ಸಾವಿರಾರು ಭಕ್ತರ ಹರ್ಷೋದ್ಘಾರದ ನಡುವೆ ಸಂಭ್ರಮದಿಂದ ನಡೆಯಿತು. ರಥೋತ್ಸವದಲ್ಲಿ ಪಟ್ಟಣ ಸೇರಿದಂತೆ ಮುಗಳೊಳ್ಳಿ, ಹಡಗಲಿ, ತಿಮ್ಮಸಾಗರ, ಕಮತಗಿ, ಮುಳ್ಳೂರು, ಕಟಗೇರಿ, ಚಿಕ್ಕನರಗುಂದ, ಗಂಗೂರು, ಕೆಲವಡಿ, ಇಂಗಳಗಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ರಥೋತ್ಸವಕ್ಕೂ ಮೊದಲು ಶ್ರೀಮಠದ ಶ್ರೀ ಅಭಿನವ ಕಾಡಸಿದ್ದೇಶ್ವರ ಸ್ವಾಮಿಗಳ ದ್ವಾದಶ ಪಟ್ಟಾಧೀಕಾರ ನಿಮಿತ್ತ ಬೆಳಗಿನಜಾವ ಮಂಗಲ ಸ್ನಾನ, ಪೀಠಾರೋಹಣ, ಅಯ್ಯಾಚಾರ, ಶಿವದೀಕ್ಷೆ, ರುದ್ರಾಭಿಷೇಕ ನಡೆಯಿತು. ಬಳಿಕ ಅಡ್ಡಪಲ್ಲಕ್ಕಿ ಉತ್ಸವ ಕರಡಿಮಜಲು, ಡೊಳ್ಳು ಮೇಳ ಹಾಗೂ ಸುಮಂಗಲೆಯರ ಕುಂಭಮೇಳದೊಂದಿಗೆ ನಗರದ ಪ್ರಮುಖ ಬೀದಿಯಲ್ಲಿ ಸಾಗಿ ಬಂದಿತು. ಮಧ್ಯಾಹ್ನ ದಾಸೋಹ ಮಹಾಪ್ರಸಾದ ನಡೆಯಿತು.


ಉದಯವಾಹಿನಿ ಚಿತ್ರ

ಇಂತಹ ಹೇಳಿಕೆಗಳು ದಾಳಿಯಲ್ಲಿ ಹುತಾತ್ಮರಾದ ಭದ್ರತಾ ಸಿಬ್ಬಂದಿಯ ಶೌರ್ಯ ಮತ್ತು ಬಲಿದಾನ ಕಡೆಗಣಿಸಿದಂತಾಗುತ್ತದೆ

# ದೇಶಕ್ಕೆ ಮಾಡಿದ ಅಪಮಾನ ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಕ್ಯಾ. ಚೌಟ ಖಂಡನೆ

• ಉದಯವಾಹಿನಿ, ಮಂಗಳೂರು

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ರಣಹೇಡಿ ಭಯೋತ್ಪಾದಕ ದಾಳಿಯ ವಿರುದ್ಧ ದೇಶವೇ ಒಗ್ಗಟ್ಟಿನಿಂದ ನಿಂತಿರುವಾಗ ಸಾರ್ವಜನಿಕ ಸ್ಥಾನದಲ್ಲಿರುವ ಸಿಎಂ ಸಿದ್ದರಾಮಯ್ಯನವರು ಸಂವೇದನೆ ರಹಿತರಂತೆ, ಬೇಜವಾಬ್ದಾರಿಯುತ, ಬಾಲಿಶ ಮತ್ತು ರಾಜಕೀಯ ಅಭದ್ರತೆಯಿಂದ ಕೂಡಿದ ಹೇಳಿಕೆ ನೀಡಿರುವುದು ನಿಜಕ್ಕೂ ವಿಷಾದನೀಯ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ.

ಪಾಕಿಸ್ತಾನದ ಜೊತೆ ಯುದ್ಧ ಸಾರುವ ಅಗತ್ಯ ಇಲ್ಲ ಎಂಬ ಸಿಎಂ ಸಿದರಾಮಯ್ಯ ಹೇಳಿಕೆ ಖಂಡಿಸಿರುವ ಕ್ಯಾ. ಚೌಟ ಅವರು, ಪಹಲ್ಗಾಮ್‌ನಲ್ಲಿ ನಡೆದ ಘಟನೆ ನಮ್ಮ ರಾಷ್ಟ್ರದ ಮೇಲೆ ನಡೆದ ಹೇಡಿತನ ದಾಳಿ. ಜವಾಬ್ದಾರಿಯುತ ಸ್ಥಾನದಲ್ಲಿ ಅದರಲ್ಲೂ ಮುಖ್ಯಮಂತ್ರಿ ಸ್ಥಾನದಲ್ಲಿದ್ದುಕೊಂಡು 'ಭಯೋತ್ಪಾದಕ ಚಟುವಟಿಕೆಯಲ್ಲಿ ತೊಡಗಿರುವವರನ್ನು ಶಿಕ್ಷಿಸುವುದು ಬೇಡ ನಮ್ಮ ಭದ್ರತೆಯನ್ನು ಬಲಪಡಿಸಿ' ಎಂಬ ರೀತಿಯ ಹೇಳಿಕೆ ನೀಡಿರುವುದು ಅಕ್ಷಮ್ಯ. ಇಂತಹ ಹೇಳಿಕೆಗಳು ದಾಳಿಯಲ್ಲಿ ಹುತಾತ್ಮರಾದ ನಮ್ಮ ಭದ್ರತಾ ಸಿಬ್ಬಂದಿಯ ಶೌರ್ಯ ಮತ್ತು ಬಲಿದಾನ ಕಡೆಗಣಿಸಿದಂತಾಗುತ್ತದೆ. ಪುಲ್ವಾಮವಿರಲಿ ಪಹಲ್ಗಾಮ್ ಆಗಿರಲಿ ಈ ಎರಡೂ ಘಟನೆಗಳನ್ನು ಕೇವಲ ಗುಪ್ತಚರ ವೈಫಲ್ಯಗಳೆಂದು ಸರಳೀಕರಿಸುವುದು ಉಗ್ರರೊಂದಿಗೆ ಕೆಚ್ಚೆದೆಯಲ್ಲಿ ಹೋರಾಡಿ ಹುತಾತ್ಮರಾದ ಯೋಧರ ತ್ಯಾಗ ಅತ್ಯಲ್ಪವೆಂದು ಪರಿಗಣಿಸಿ ಅವರ ಸರ್ವೋಚ್ಚ ಬಲಿದಾನಕ್ಕೆ ನೀಡುವ ಅಗೌರವ ಹಾಗೂ ಭಾರತೀಯ ಸೈನಿಕರ ನೈತಿಕ ಸ್ಥೈರ್ಯ ಕುಗ್ಗಿಸಲು ನಡೆಯುತ್ತಿರುವ ಷಡ್ಯಂತ್ರ ಎಂದು ಖೇದ ವ್ಯಕ್ತಪಡಿಸಿದ್ದಾರೆ.

### ಒಡೆದು ಆಳುವ ರಾಜಕಾರಣ

ಉಗ್ರರ ದಾಳಿಯನ್ನು ಇಂದು ಜಗತ್ತೇ ಖಂಡಿಸುತ್ತಿದೆ. ಆದರೆ ಕಾಂಗ್ರೆಸ್ಸಿನ ನಾಯಕರಿಗೆ ವಾಸ್ತವ ಸ್ಥಿತಿ ಅರಿಯದೆ ನಮ್ಮ ದೇಶದ ಬಗ್ಗೆ ಸಡಿಲ ಮಾತುಗಳನ್ನಾಡುವುದು ರೂಢಿಯಾಗಿಬಿಟ್ಟಿದೆ. ಭಯೋತ್ಪಾದಕ ದಾಳಿಗೆ 'ಭದ್ರತಾ ಲೋಪ' ಎಂದು ಗೂಬೆ ಕೂರಿಸುವುದು ಸ್ವೀಕಾರ್ಹವಲ್ಲ. ಮೂಲಭೂತವಾದಿ ಯುವಕರಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಜಿಹಾದಿ ಮನಸ್ಥಿತಿಯು ಕಾಂಗ್ರೆಸ್‌ನ ಹಲವು ದಶಕಗಳ ಓಲೈಕೆ ಒಡೆದು ಆಳುವ ರಾಜಕಾರಣದ ನೇರ ಪರಿಣಾಮವಾಗಿದೆ.



ಭಯೋತ್ಪಾದಕರು ಒಳನುಸುಳಿಸಲು ನಿಸ್ಸಂದೇಹವಾಗಿ ಪಾಕಿಸ್ತಾನ ಕುಮ್ಮಕ್ಕು ನೀಡುತ್ತಿರುವಾಗ, ಸಿದ್ದರಾಮಯ್ಯನವರಿಗೆ ಮಾತ್ರ ನೆರೆ ರಾಷ್ಟ್ರದ ಮೇಲೆ ಏಕೆ ಇಷ್ಟೊಂದು ಪ್ರೀತಿ? ಕಳೆದೆರಡು ದಶಕಗಳಲ್ಲಿ ಕರ್ನಾಟಕ ಹಾಗೂ ರಾಜಧಾನಿ ಬೆಂಗಳೂರಿನಲ್ಲಿ ಪತ್ತೆಯಾದ ಸ್ವದೇಶಿ ಸ್ಲೀಪರ್ ಸೆಲ್‌ಗಳಿಂದ ಹುಟ್ಟಿಕೊಂಡ ಉಗ್ರ ಚಟುವಟಿಕೆಗಳಿಗೆ ಯಾರು ಹೊಣೆ? ಉಗ್ರಗಾಮಿತ್ವದ ಕಡೆಗೆ ಕಾಂಗ್ರೆಸ್‌ನ ಮೃದು ಧೋರಣೆ ಭಾರತದ ಆಂತರಿಕ ಭದ್ರತೆಯನ್ನು ದುರ್ಬಲಗೊಳಿಸಿರುವುದು ಮಾತ್ರವಲ್ಲದೇ ರಾಷ್ಟ್ರ ವಿರೋಧಿ ಶಕ್ತಿಗಳಿಗೆ ಅಧಿಕಾರ ನೀಡಿದೆ. ಇಂತಹ ಹೇಳಿಕೆ ನೀಡುವ ಸಿದ್ದರಾಮಯ್ಯನವರಿಗೆ ಕರ್ನಾಟಕದಲ್ಲಿ ಪಾಕಿಸ್ತಾನದ ನಾಗರಿಕರ ಇರುವಿಕೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿರುವುದು ಅಚ್ಚರಿಯ ಸಂಗತಿ. ಇಂತಹ ಮಾಹಿತಿ ಸಂಗ್ರಹಿಸಲು ಭಯೋತ್ಪಾದಕ ದಾಳಿಯಾಗುವವರೆಗೂ ಅವರು ಕಾಯುತ್ತಿರುವರೇ ?ಎಂದು ಕ್ಯಾ. ಚೌಟ ಪ್ರಶ್ನಿಸಿದ್ದಾರೆ.

ಪಹಲ್ಗಾಮ್ ದಾಳಿ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಸಂತ್ರಸ್ತರ ನೆರವಿಗೆ ಧಾವಿಸಿ ವ್ಯವಸ್ಥೆ ವಹಿಸಿ ತಮ್ಮೂರಿಗೆ ತೆರಳಲು ಸಮಗ್ರ ವ್ಯವಸ್ಥೆಯನ್ನು ಮಾಡುತ್ತಿರುವಾಗ ಅವಕಾಶವಾದಿ ಕಾಂಗ್ರೆಸ್ ಸಾರ್ವಜನಿಕ ಸಹಾನುಭೂತಿಯ ಪಾಲು ಪಡೆಯಲು ಹಾಗೂ ರಾಜಕೀಯ ಲಾಭಕ್ಕಾಗಿ ಕೀಳು ತಂತ್ರ ಅನುಸರಿಸುತ್ತಿರುವು ಅತ್ಯಂತ ಖಂಡನೀಯ ಮತ್ತು ಅಮಾನವೀಯ. ಜೊತೆಗೆ ಇಂತಹ ಹೇಳಿಕೆಗಳು ಮೂಲ ಕಾರಣದಿಂದ ಗಮನವನ್ನು ಬೇರೆಡೆ ಸೆಳೆಯುವ ಪ್ರಯತ್ನದ ಭಾಗವಾಗಿದೆ -ಕ್ಯಾ. ಬ್ರಿಜೇಶ್ ಚೌಟ

ಜಿಹಾದಿ ಮನಸ್ಥಿತಿಯ ಕಾಂಗ್ರೆಸ್

ಭದ್ರತಾ ಪಡೆಗಳಿರಲಿಲ್ಲ ಎಂಬ ಸುಳ್ಳು ಸುದ್ದಿ ಹಬ್ಬಿಸುವುದು ಅಥವಾ ಭಯೋತ್ಪಾದಕ ದಾಳಿಯನ್ನು ಸಲೀಸಾಗಿ ಗುಪ್ತಚರ ವೈಫಲ್ಯ ಎಂದು ಪರಿಗಣಿಸುವುದು ಬೇಜವಾಬ್ದಾರಿತನದ ಪರಮಾವಧಿ.

ನಮ್ಮ ರಾಜ್ಯ ಮತ್ತು ದೇಶದ ಜನರ ಮನೋಸ್ಥೈರ್ಯವನ್ನು ಕುಗ್ಗಿಸುವ ದುರುದ್ದೇಶಪೂರಿತ ಪ್ರಯತ್ನ. ಭಾರತೀಯರಾದ ನಾವು ಇಂತಹ ನಡವಳಿಕೆ ಎಂದೂ ಸಹಿಸಬಾರದು ಜೊತೆಗೆ ಇದನ್ನು ಬಲವಾಗಿ ಖಂಡಿಸಬೇಕು ಎಂದು ಸಂಸದ ಕ್ಯಾ. ಚೌಟ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಏಷ್ಯಾ ದೇಶಗಳ ನಡುವೆ ಜವಾಬ್ದಾರಿಯುತ ಪರಿಹಾರ ಅಗತ್ಯ: ಟ್ರಂಪ್

**ವಾಷಿಂಗ್ಟನ್:** ಕಾಶ್ಮೀರದಲ್ಲಿ ಇತ್ತೀಚೆಗೆ ನಡೆದ ಉಗ್ರಗಾಮಿ ದಾಳಿಯ ನಂತರ ಎರಡು ಏಷ್ಯಾದ ರಾಷ್ಟ್ರಗಳ ನಡುವೆ ಉದ್ವಿಗ್ನತೆ ಹೆಚ್ಚಿರುವುದರಿಂದ ಜವಾಬ್ದಾರಿಯುತ ಪರಿಹಾರ ಕಂಡುಕೊಳ್ಳುವುದು ಅವಶ್ಯ ಎಂದು ಅಮೆರಿಕಾ ಹೇಳಿದೆ.

ತಮ್ಮೊಂದಿಗೆ ಭಾರತ ಮತ್ತು ಪಾಕಿಸ್ತಾನ ಎರಡರೊಂದಿಗೂ ಸಂಪರ್ಕದಲ್ಲಿದೆ ಎಂದು ಅಮೆರಿಕ ವಿದೇಶಾಂಗ ಇಲಾಖೆ ತಿಳಿಸಿದ್ದು ಎರಡೂ ದೇಶಗಳು ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದು ತಿಳಿಸಿದೆ.

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ದಾಳಿ ನಡೆದ ನಂತರ ಅಮೆರಿಕ ಸರ್ಕಾರ ಭಾರತಕ್ಕೆ ಬೆಂಬಲ ವ್ಯಕ್ತಪಡಿಸಿದೆ ಆದರೆ ಪಾಕಿಸ್ತಾನವನ್ನು ಟೀಕಿಸಿಲ್ಲ. ಏಪ್ರಿಲ್ 22 ರಂದು ಭಾರತದ ಆಡಳಿತದ ಕಾಶ್ಮೀರದಲ್ಲಿ ನಡೆದ ದಾಳಿಯಲ್ಲಿ ಎರಡು ಡಜನ್‌ಗೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ಭಾರತ ಪಾಕಿಸ್ತಾನವನ್ನು ದೂಷಿಸಿದೆ. ಪಾಕಿಸ್ತಾನ ಜವಾಬ್ದಾರಿ ನಿರಾಕರಿಸಿ ತಟಸ್ಥ ತನಿಖೆಗೆ ಒತ್ತಾಯಿಸಿದೆ. ಅಮೆರಿಕಾ ವಿದೇಶಾಂಗ ಇಲಾಖೆಯ ವಕ್ತಾರರು ಪ್ರತಿಕ್ರಿಯಿಸಿ ''ಇದು ಬದಲಾಗುತ್ತಿರುವ ಪರಿಸ್ಥಿತಿ ಮತ್ತು ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳೊಂದಿಗೆ ಬಹು ಹಂತಗಳಲ್ಲಿ ಸಂಪರ್ಕದಲ್ಲಿದ್ದೇವೆ'' ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಪೆಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಅಮೆರಿಕಾ ಖಂಡಿಸುತ್ತದೆ. ಈ ವಿಷಯದಲ್ಲಿ ಭಾರತದ ಬೆಂಬಲಕ್ಕೆ ಅಮೆರಿಕಾ



ನಿಲ್ಲಲಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಇತ್ತೀಚೆಗೆ ಮಾಡಿದ ಹೇಳಿಕೆಗಳಿಗೆ ಹೋಲುವ ಹೇಳಿಕೆಗಳನ್ನು ಪುನರುಚ್ಚರಿಸಿದೆ.

**ಭಾರತಕ್ಕೆ ಬೆಂಬಲ ವ್ಯಕ್ತ**

2021 ರಲ್ಲಿ ನೆರೆಯ ಅಫ್ಘಾನಿಸ್ತಾನದಿಂದ ಅಮೆರಿಕ ಹಿಂದೆ ಸರಿದ ನಂತರ ವಾಷಿಂಗ್ಟನ್‌ಗೆ ಪಾಕಿಸ್ತಾನದ ಪ್ರಾಮುಖ್ಯತೆ ಕಡಿಮೆಯಾದರೂ, ಏಷ್ಯಾದಲ್ಲಿ ಚೀನಾದ ಹೆಚ್ಚುತ್ತಿರುವ ಪ್ರಭಾವ ಎದುರಿಸಲು ಅಮೆರಿಕಾ ಗುರಿ ಹೊಂದಿರುವುದರಿಂದ ಭಾರತ, ಅಮೆರಿಕದ ಹೆಚ್ಚು ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ವಾಷಿಂಗ್ಟನ್ ಮೂಲದ ದಕ್ಷಿಣ ಏಷ್ಯಾ ವಿಶ್ಲೇಷಕ ಮತ್ತು ವಿದೇಶಾಂಗ ನೀತಿ ನಿಯತಕಾಲಿಕದ ಬರಹಗಾರ ಮೈಕೆಲ್ ಕುಗೆಲ್ಮನ್ ಪ್ರತಿಕ್ರಿಯಿಸಿ ಭಾರತ, ಈಗ ಪಾಕಿಸ್ತಾನಕ್ಕಿಂತ ಹೆಚ್ಚು ನಿಕಟ ಅಮೆರಿಕದ ಪಾಲುದಾರ ಎಂದು ಹೇಳಿದ್ದಾರೆ.

ಭಾರತ ಮಿಲಿಟರಿಯಾಗಿ ಪ್ರತೀಕಾರ ತೀರಿಸಿಕೊಂಡರೆ, ಅಮೆರಿಕ ತನ್ನ ಭಯೋತ್ಪಾದನಾ ನಿಗ್ರಹದ ಅಗತ್ಯತೆಗಳ ಬಗ್ಗೆ ಸಹಾನುಭೂತಿ ಹೊಂದಿರಬಹುದು ಮತ್ತು ದಾರಿಯಲ್ಲಿ ನಿಲ್ಲಲು ಪ್ರಯತ್ನಿಸದಿರಬಹುದು. ಜೊತೆಗೆ ಪಾಕಿಸ್ತಾನದ ಜೊತೆ ನಿಲ್ಲಬಹುದೂ ಕೂಡ ಎಂದು ತಿಳಿಸಿದ್ದಾರೆ.

## ಪಾಕ್ ಯೂಟ್ಯೂಬ್ ಚಾನೆಲ್‌ಗಳನ್ನು ನಿಷೇಧಿಸಿದ ಕೇಂದ್ರ

**ನವದೆಹಲಿ:** ಪ್ರಚೋದನಕಾರಿ ಮತ್ತು ಕೋಮು ಸೂಕ್ಷ್ಮ ವಿಷಯ ಮತ್ತು ಭಾರತ, ಅದರ ಸೇನೆ ಮತ್ತು ಭದ್ರತಾ ಸಂಸ್ಥೆಗಳ ವಿರುದ್ಧ ಸುಳ್ಳು ಮತ್ತು ದಾರಿತಪ್ಪಿಸುವ ನಿರೂಪಣೆಗಳನ್ನು ಪ್ರಸಾರ ಮಾಡಿದ ಆರೋಪದ ಮೇಲೆ ಪಾಕಿಸ್ತಾನದ 16 ಯೂಟ್ಯೂಬ್ ಚಾನೆಲ್‌ಗಳನ್ನು ನಿರ್ಬಂಧಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22 ರಂದು ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನರು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಗೃಹ ಸಚಿವಾಲಯದ ಶಿಫಾರಸುಗಳನ್ನು ಅನುಸರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.



27 April 2025

YouTube Account Blocking Orders issued

| Sl. No. | Name of the YouTube Channel | YouTube Handle | URL | No. of Subscribers |
|---|---|---|---|---|
| 1 | Dawn News | @dawnnewspakistan | [illegible] | 1.96M |
| 2 | Irshad Bhatti | @IrshadBhatti01 | [illegible] | 827K |
| 3 | SAMAA TV | @Samaatv | [illegible] | 12.7M |
| 4 | ARY NEWS | @ArynewsTvofficial | [illegible] | 14.6M |
| 5 | BOL NEWS | @BOLNewsofficial | [illegible] | 7.85M |
| 6 | Raftar | @raftartv | [illegible] | 804K |
| 7 | The Pakistan Reference | @ThePakistanReference | [illegible] | 288K |
| 8 | Geo News | @geonews | [illegible] | 18.1M |
| 9 | Samaa Sports | @SamaaSports | [illegible] | 73.5K |
| 10 | GNN | @gnnhdofficial | [illegible] | 3.54M |
| 11 | Uzair Cricket | @UzairCricket786 | [illegible] | 288K |
| 12 | Umar Cheema Exclusive | @UmarCheemaExclusive | [illegible] | 125K |
| 13 | Asma Shirazi | @AsmaShiraziofficial | [illegible] | 133K |
| 14 | Muneeb Farooq | @muneebfarooqofficial | [illegible] | 165K |
| 15 | SUNO News HD | @SUNONewsHD | [illegible] | 1.36M |
| 16 | Razi Naama | @razinaama | [illegible] | 270K |
| | Total Subscribers | | | 63.08M |



ಪಹಲ್ಗಾಮ್ ದುರಂತದ ಬಗ್ಗೆ ತನ್ನ ವರದಿಯಲ್ಲಿ ಭಯೋತ್ಪಾದಕರನ್ನು ಉಗ್ರಗಾಮಿಗಳು ಎಂದು ಕರೆದಿದ್ದಕ್ಕಾಗಿ ಸರ್ಕಾರವು ಬಿಬಿಸಿಗೆ ಔಪಚಾರಿಕ ಪತ್ರವನ್ನು ಕಳುಹಿಸಿದೆ. ಗೃಹ ಸಚಿವಾಲಯದ ಶಿಫಾರಸುಗಳ ಮೇರೆಗೆ, ಜಮ್ಮು ಮತ್ತು ಕಾಶ್ಮೀರದ ದುರಂತ ಪಹಲ್ಗಾಮ್ ಭಯೋತ್ಪಾದಕ ಘಟನೆಯ ಹಿನ್ನೆಲೆಯಲ್ಲಿ ಭಾರತ, ಅದರ ಸೇನೆ ಮತ್ತು ಭದ್ರತಾ ಸಂಸ್ಥೆಗಳ ವಿರುದ್ಧ ಪ್ರಚೋದನಕಾರಿ ಮತ್ತು ಕೋಮು ಸೂಕ್ಷ್ಮ ವಿಷಯ, ಸುಳ್ಳು ಮತ್ತು ದಾರಿತಪ್ಪಿಸುವ ನಿರೂಪಣೆಗಳು ಮತ್ತು ತಪ್ಪು ಮಾಹಿತಿಯನ್ನು ಪ್ರಸಾರ ಮಾಡಿದ್ದಕ್ಕಾಗಿ ಭಾರತ ಸರ್ಕಾರ ಪಾಕಿಸ್ತಾನದ ಯೂಟ್ಯೂಬ್ ಚಾನೆಲ್‌ಗಳನ್ನು ನಿಷೇಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಡಾನ್ ನ್ಯೂಸ್, ಇರ್ಷಾದ್ ಭಟ್ಟಿ, ಸಮಾ ಟಿವಿ, ಎಆರ್‌ವೈ ನ್ಯೂಸ್, ಬೋಲ್ ನ್ಯೂಸ್, ರಾಫ್ತಾರ್. ದಿ ಪಾಕಿಸ್ತಾನ್ ರೆಫರೆನ್ಸ್, ಜಿಯೋ ನ್ಯೂಸ್, ಸಮಾ ಸ್ಪೋರ್ಟ್ಸ್, ಜಿಎನ್‌ಎನ್, ಉಜೈರ್ ಕ್ರಿಕೆಟ್, ಉಮರ್ ಚೀಮಾ ಎಕ್ಸ್‌ಕ್ಲೂಸಿವ್. ಅಸ್ಮಾ ಶಿರಾಜಿ, ,ಯೂಟ್ಯೂಬ್ ಚಾನೆಲ್‌ಗಳನ್ನು ನಿರ್ಬಂಧಿಸಲಾಗಿದೆ.

### ಭಾರತವು 180 ನ್ಯೂಕ್ಲಿಯರ್ ವಾರ್ ಹೆಡ್‌ಗಳನ್ನು ಹೊಂದಿದ್ದು, ಪಾಕಿಸ್ತಾನ 170 ವಾರ್ ಹೆಡ್‌ಗಳನ್ನು ಹೊಂದಿದೆ

# ಅಣ್ವಸ್ತ್ರದಲ್ಲೂ ಪಾಕಿಸ್ತಾನಕ್ಕೆ ಹಿನ್ನಡೆ, ಅಗ್ನಿ ಜೊತೆ ಸೂರ್ಯನೂ ರೆಡಿ?

**ಹೊಸದಿಲ್ಲಿ :** ಪಹಲ್ಗಾಮ್ ಉಗ್ರರ ದಾಳಿ ಬೆನ್ನಲ್ಲೇ ಭಾರತ ಹಾಗೂ ಪಾಕಿಸ್ತಾನದ ನಡುವೆ ಯುದ್ಧದ ವಾತಾವರಣ ನಿರ್ಮಾಣವಾಗಿದೆ. ಪಾಕಿಸ್ತಾನಕ್ಕೆ ತಿರುಗೇಟು ನೀಡಲು ಭಾರತ ಎಲ್ಲಾ ರೀತಿಯಿಂದಲೂ ರೆಡಿಯಾಗಿ ನಿಂತಿದೆ. ಈ ಹೊತ್ತಲ್ಲಿ ಭಾರತಕ್ಕೆ ಮತ್ತೊಂದು ಗುಡ್

- ಅಣ್ವಸ್ತ್ರಗಳ ಸಂಖ್ಯೆಯಲ್ಲಿ ಪಾಕಿಸ್ತಾನವನ್ನು ಹಿಂದಿಕ್ಕಿದ ಭಾರತ
- ಭಾರತವು 180 ನ್ಯೂಕ್ಲಿಯರ್ ವಾರ್ ಹೆಡ್‌ಗಳನ್ನು ಹೊಂದಿದ್ದು, ಪಾಕಿಸ್ತಾನ 170 ವಾರ್ ಹೆಡ್‌ಗಳನ್ನು ಹೊಂದಿದೆ.
- ಭಾರತ ನೋ ಫಸ್ಟ್ ಯೂಸ್' ನೀತಿಯನ್ನು ಅನುಸರಿಸುತ್ತಿದ್ದು, ಪಾಕಿಸ್ತಾನ 'ಫಸ್ಟ್ ಯೂಸ್' ನೀತಿ ಹೊಂದಿದೆ
- ಭಾರತವು ಅಗ್ನಿ-5 ಕ್ಷಿಪಣಿ ಹೊಂದಿದ್ದು, ಅಗ್ನಿ-6 ಎಂಬ ಖಂಡಾಂತರ ಕ್ಷಿಪಣಿಯನ್ನು ಅಭಿವೃದ್ಧಿಪಡಿಸುತ್ತಿದೆ.

ನ್ಯೂಸ್ ಸಿಕ್ಕಿದ್ದು, ಇಂಡಿಯಾಗೆ ಪಾಕಿಸ್ತಾನದ ಬಗ್ಗೆ ಇದ್ದ ಒಂದೇ ಒಂದು ಆತಂಕ ಕಮ್ಮಿಯಾಗಿದೆ. ಕೆಲ ದಿನಗಳ ಹಿಂದಷ್ಟೇ ಪಾಕಿಸ್ತಾನದ ಸಚಿವ ಹನೀಫ್ ಅಬ್ಬಾಸಿ ಭಾರತಕ್ಕೆ ಅಣು ಬಾಂಬ್ ಬೆದರಿಕೆಯನ್ನು ಹಾಕಿದ್ದ, 130 ನ್ಯೂಕ್ಲಿಯರ್ ವಾರ್ ಹೆಡ್‌ಗಳನ್ನು ಭಾರತಕ್ಕೋಸ್ಕರವೇ ಇಟ್ಟಿದೀವಿ ಎಂದಿದ್ದ. ಇದರ ಬೆನ್ನಲ್ಲೇ ಭಾರತ ಹಾಗೂ ಪಾಕಿಸ್ತಾನದ ನಡುವೆ ಪರಮಾಣು ಯುದ್ಧ ಅಂದ್ರೇ ನ್ಯೂಕ್ಲಿಯರ್ ವಾರ್ ನಡೆಯುವ ಸಾಧ್ಯತೆ ದಟ್ಟವಾಗಿದೆ.

ಇಷ್ಟು ದಿನ ಭಾರತಕ್ಕಿಂತ ಪಾಕಿಸ್ತಾನದ ಹತ್ತಿರವೇ ಹೆಚ್ಚು ಅಣ್ವಸ್ತ್ರಗಳು ಇದ್ದವು. ಆದರೆ, ಈಗ ಕಾಲ ಬದಲಾಗಿದ್ದು, ಭಾರತ ಒಂದು ಹೆಜ್ಜೆ ಮುಂದಿಟ್ಟಿದ್ದು, ನ್ಯೂಕ್ಲಿಯರ್ ವಾರ್ ಹೆಡ್ ವಿಚಾರದಲ್ಲಿ ಪಾಕಿಸ್ತಾನವನ್ನು ಭಾರತ ಹಿಂದಿಕ್ಕಿದೆ. ಅದರಲ್ಲೂ ಅಗ್ನಿ ಕ್ಷಿಪಣಿ ಬಳಿಕ ಸೂರ್ಯ ಎಂಬ ಕ್ಷಿಪಣಿಯನ್ನು ಭಾರತ ನಿರ್ಮಿಸುತ್ತಿದೆ ಎಂಬ ಮಾಹಿತಿಯಿದ್ದು, ಅದೇನಾದ್ರೂ ಯುದ್ಧ ಭೂಮಿಗೆ ಬಂದ್ರೆ ಪಾಕಿಸ್ತಾನವನ್ನು ಉಳಿಸೋರು ಯಾರು? ಎಂಬ ಪ್ರಶ್ನೆ ಜಗತ್ತಿಗೆ ಇದೆ.



### ಅಣ್ವಸ್ತ್ರ ವಿಚಾರದಲ್ಲಿ ಎರಡು ದೇಶಗಳ ನೀತಿಯೇನು?

**ಅಣ್ವಸ್ತ್ರ ವಿಚಾರದಲ್ಲಿ ಭಾರತ ''ನೋ ಫಸ್ಟ್ ಯೂಸ್'' ಎಂಬ ನೀತಿಯನ್ನು ಬಳಸುತ್ತಿದೆ. ಏನೇ ಆದರೂ ಪರಮಾಣು ಅಸ್ತ್ರಗಳನ್ನು ಮೊದಲು ಬಳಸುವುದಿಲ್ಲ ಎಂಬ ತತ್ವವನ್ನು ಭಾರತ ಹೊಂದಿದೆ. ಶತ್ರು ರಾಷ್ಟ್ರಗಳು ಅಥವಾ ಎದುರಾಳಿಗಳು ಅಣ್ವಸ್ತ್ರ ಬಳಸಿದ ಬಳಿಕ ಭಾರತ ಅವರ ವಿರುದ್ಧ ನ್ಯೂಕ್ಲಿಯರ್ ಅಸ್ತ್ರವನ್ನು ಬಳಸಲಿದೆ. ಆದರೆ, ಪಾಕಿಸ್ತಾನ ಫಸ್ಟ್ ಯೂಸ್ ನೀತಿಯನ್ನು ಹೊಂದಿದ್ದು, ಸಣ್ಣ ಸೇನಾ ಕಾರ್ಯಾಚರಣೆ ವಿರುದ್ಧವೂ ಅಣ್ವಸ್ತ್ರವನ್ನು ಬಳಸುತ್ತದೆ. ಇದು ಆತಂಕಕಾರಿ ವಿಚಾರವಾಗಿದ್ದು, ಪರಮಾಣು ಯುದ್ಧಕ್ಕೆ ಎಡೆ ಮಾಡಿಕೊಡಲಿದೆ. ಇನ್ನು, ಭಾರತವು ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆಯಲ್ಲಿ ಸದಸ್ಯನಾಗಿದ್ದು, ಪರಮಾಣು ಪೂರೈಕೆದಾರರ ಗುಂಪಿನ ಸದಸ್ಯನಾಗಲು ಬಯಸುತ್ತಿದೆ. ಆದರೆ, ಪರಮಾಣು ಪ್ರಸರಣ ರಹಿತ ಒಪ್ಪಂದ ಹಾಗೂ ಅಣ್ವಸ್ತ್ರದ ಸಮಗ್ರ ಪರೀಕ್ಷಾ ನಿಷೇಧ ಒಪ್ಪಂದದಿಂದ ಭಾರತ ಹಿಂದುಳಿದಿದ್ದು, ಪರಮಾಣು ಬಳಸುವ ಆಯ್ಕೆಯನ್ನು ಮುಕ್ತವಾಗಿಟ್ಟುಕೊಂಡಿದೆ. ಇದು ಯುದ್ಧಭೂಮಿಯಲ್ಲಿ ಭಾರತಕ್ಕೆ ಗೇಮ್ ಚೇಂಜರ್ ಆಗಲಿದೆ.**

### ಭಾರತ-ಪಾಕ್ ಪರಮಾಣು ಪಯಣ ಹೇಗಿತ್ತು?

**ಭಾರತದ ಪರಮಾಣು ಪಯಣ ಶುರುವಾಗಿದ್ದು 1974ರಲ್ಲಿ. 1974ರ ಮೇ 18ರಂದು ಸ್ಮೈಲಿಂಗ್ ಬುದ್ಧ ಅಥವಾ ಪೋಕ್ರಾನ್ - 1 ಎಂಬ ಅಣ್ವಸ್ತ್ರ ಪರೀಕ್ಷೆಯನ್ನು ಭಾರತ ನಡೆಸಿತು. ಈ ಮೂಲಕ ನ್ಯೂಕ್ಲಿಯರ್ ಸಾಮರ್ಥ್ಯ ಇರುವ ಜಗತ್ತಿನ ಆರನೇ ರಾಷ್ಟ್ರವಾಯಿತು. ಅದಾಗಿ ಕಾಲು ಶತಮಾನದ ಬಳಿಕ ಅಂದ್ರೇ 1998ರಲ್ಲಿ ಪಾಕಿಸ್ತಾನ ತನ್ನ ಅಣ್ವಸ್ತ್ರ ಪರೀಕ್ಷೆ ನಡೆಸಿತು. ಈ ಮೂಲಕ ಅಣ್ವಸ್ತ್ರವನ್ನು ತಾನು ಹೊಂದಿದ್ದೇನೆ ಎಂದು ಜಗತ್ತಿಗೆ ತೋರಿಸಿತು. ಕಾಲು ಶತಮಾನ ಲೇಟಾಗಿ ನ್ಯೂಕ್ಲಿಯರ್ ರೇಸ್‌ಗೆ ಎಂಟ್ರಿ ಕೊಟ್ಟರೂ ಸಹ ಪಾಕಿಸ್ತಾನ ಇಷ್ಟು ದಿನ ಭಾರತಕ್ಕಿಂತ ಹೆಚ್ಚಿನ ಅಣ್ವಸ್ತ್ರಗಳನ್ನು ಹೊಂದಿತ್ತು. ಆದರೆ, ಈಗ ಕಾಲ ಬದಲಾಗಿದ್ದು, ಭಾರತ ಹೆಚ್ಚಿನ ನ್ಯೂಕ್ಲಿಯರ್ ವಾರ್ ಹೆಡ್‌ಗಳನ್ನು ಹೊಂದುವ ಮೂಲಕ ಪಾಕಿಸ್ತಾನಕ್ಕೆ ಆತಂಕ ಸೃಷ್ಟಿಸಿದೆ.**

**ಅಣ್ವಸ್ತಗಳ ಬಲಾಬಲ ಹೇಗಿದೆ?**

ಹಾಗಾದ್ರೆ, ಭಾರತ ಹಾಗೂ ಪಾಕಿಸ್ತಾನದ ನಡುವಿನ ಅಣ್ವಸ್ತಗಳ ಬಲಾಬಲ ಹೇಗಿದೆ? ಅಣ್ವಸ್ತ್ರ ವಿಚಾರದಲ್ಲಿ ಭಾರತ ಹಾಗೂ ಪಾಕಿಸ್ತಾನದ ನೀತಿ ಏನು? ಎರಡು ದೇಶಗಳ ನಡುವೆ ನ್ಯೂಕ್ಲಿಯರ್ ವಾರ್ ನಡೆದ್ರೆ, ಏನೆಲ್ಲಾ ಆಗಲಿದೆ ಎಂಬುದನ್ನು ಇಲ್ಲಿ ನೋಡೋಣ ಬನ್ನಿ.

ಹೌದು, ಫೆಡರೇಷನ್ ಆಫ್ ಅಮೆರಿಕನ್ ಸೈಂಟಿಸ್ಟ್ ಅಂದ್ರೇ ಎಫ್‌ಎಎಸ್ ಅಣ್ವಸ್ತ್ರಗಳ ಬಗ್ಗೆ ವರದಿಯೊಂದನ್ನು ಬಿಡುಗಡೆ ಮಾಡಿದ್ದು, ಭಾರತ ಪಾಕಿಸ್ತಾನವನ್ನು ಹಿಂದಿಕ್ಕಿದೆ. ಕಳೆದ ಎರಡು ದಶಕದಲ್ಲಿ ಇದೇ ಮೊದಲ ಬಾರಿಗೆ ಭಾರತ ಪಾಕಿಸ್ತಾನಕ್ಕಿಂತ ಹೆಚ್ಚು ನ್ಯೂಕ್ಲಿಯರ್ ವಾರ್‌ಹೆಡ್‌ಗಳನ್ನು ಹೊಂದಿದೆ. ಇದು ದಕ್ಷಿಣ ಏಷ್ಯಾದಲ್ಲಿ ಮಹತ್ವದ ಬೆಳವಣಿಯಾಗಿದೆ. ಎರಡು ದೇಶಗಳ ನಡುವೆ ಯುದ್ಧದ ಸ್ಥಿತಿ ನಿರ್ಮಾಣವಾಗಿರುವಾಗ ಈ ಅಂಕಿ-ಅಂಶಗಳು ಬಹಿರಂಗವಾಗಿದ್ದು, ಪಾಕಿಸ್ತಾನಕ್ಕೆ ಶಾಕ್ ನೀಡಿವೆ.

ಭಾರತ 180 ನ್ಯೂಕ್ಲಿಯರ್ ವಾರ್ ಹೆಡ್‌ಗಳನ್ನು ಹೊಂದಿದ್ದರೆ, ಪಾಕಿಸ್ತಾನ 170 ವಾರ್‌ಹೆಡ್‌ಗಳನ್ನು ಹೊಂದಿದೆ ಎಂದು ಅಂದಾಜಿಸಲಾಗಿದೆ. ಈ ಮೂಲಕ ಇಷ್ಟು ದಿನ ಜಾಸ್ತಿ ಅಣ್ವಸ್ತ್ರ ಹೊಂದಿದೀನಿ ಎಂದು ಧಿಮಾಕು ತೋರಿಸುತ್ತಿದ್ದ ಪಾಕಿಸ್ತಾನಕ್ಕೆ ಭಾರತ ಗರ್ವಭಂಗ ಮಾಡಿದೆ. ಕೇವಲ ಎಫ್‌ಎಎಸ್ ವರದಿ ಮಾತ್ರವಲ್ಲದೇ 2024ರ ಸ್ಟಾಕ್ ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ವರದಿಯ ಪ್ರಕಾರವೂ ಭಾರತ ಪಾಕಿಸ್ತಾನವನ್ನು ಹಿಂದಿಕ್ಕಿದೆ. ಪಾಕ್ 170 ಅಣ್ವಸ್ತ್ರಗಳನ್ನು ಹೊಂದಿದ್ದರೆ, ಭಾರತ 172 ನ್ಯೂಕ್ಲಿಯರ್ ವಾರ್ ಹೆಡ್‌ಗಳನ್ನು ಹೊಂದಿದೆ ಎಂದು ಅಂದಾಜಿಸಲಾಗಿದೆ.

## ಉತ್ತರ ಪ್ರದೇಶ : ದಿಬ್ಬ ಕುಸಿದು ಐವರ ಸಾವು

**ಕೌಶಾಂಬಿ:** ಮನೆಯ ಪ್ಲಾಸ್ಟರಿಂಗ್ ಗಾಗಿ ಮಣ್ಣು ಅಗೆಯುವಾಗ ಮಣ್ಣಿನ ದಿಬ್ಬ ಕುಸಿದು ಐವರು ಸಾವನ್ನಪ್ಪಿರುವ ಘಟನೆ ಉತ್ತರ ಪ್ರದೇಶದ ಕೌಶಾಂಬಿ ಜಿಲ್ಲೆಯಲ್ಲಿ ನಡೆದಿದೆ. ಘಟನೆಯಲ್ಲಿ ಇತರ ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಪ್ರಸ್ತುತ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಟೇಷನ್ ಹೌಸ್ ಆಫೀಸರ್ (ಎಸ್‌ಎಚ್‌ಒ) ಚಂದ್ರಭೂಶನ್ ಮೌರ್ಯ ಮಾತನಾಡಿ, ಬೆಳಿಗ್ಗೆ, ಕೊಬ್ರಾಜ್ ಪೊಲೀಸ್ ಠಾಣೆ ಪ್ರದೇಶದ ಟಿಕಾರ್ಡಿಹ್ ಗ್ರಾಮದ ಹಲವಾರು ಮಹಿಳೆಯರು ತಮ್ಮ ಮನೆಗಳಿಗೆ ಪ್ಲಾಸ್ಟರ್ ಮಾಡಲು ಗ್ರಾಮದ ಹೊರಗಿನ ದಿಬ್ಬದಿಂದ ಮಣ್ಣನ್ನು ಅಗೆಯಲು ಹೋಗಿದ್ದರು. ದಿಬ್ಬವು ದುರ್ಬಲವಾಗಿತ್ತು ಮತ್ತು ಗೋಚರಿಸುವ ಬಿರುಕುಗಳನ್ನು ಹೊಂದಿತ್ತು. ಅಗೆಯುವಾಗ, ದಿಬ್ಬದ ದೊಡ್ಡ ಭಾಗವು ಇದ್ದಕ್ಕಿದ್ದಂತೆ ಕುಸಿದು, ಎಲ್ಲರೂ



ಕೆಳಗೆ ಹೂತು ಹೋದರು ಎಂದಿದ್ದಾರೆ. ಘಟನೆಯಲ್ಲಿ ಮಮತಾ (35), ಲಲಿತಾ (35), ಕಬ್ರಾಹಿ (70), ಉಮಾದೇವಿ (15) ಮತ್ತು ಖುಷಿ (17) ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಘಟನೆಯ ಬಗ್ಗೆ ಮಾಹಿತಿ ಪಡೆದ ನಂತರ, ಗ್ರಾಮಸ್ಥರು ಸ್ಥಳಕ್ಕೆ ಧಾವಿಸಿದರು ಮತ್ತು ಆರಂಭದಲ್ಲಿ ಸಂತ್ರಸ್ತರನ್ನು ತಮ್ಮ ಕೈಗಳಿಂದ ರಕ್ಷಿಸಲು ಪ್ರಯತ್ನಿಸಿದರು. ನಂತರ, ರಕ್ಷಣಾ ಕಾರ್ಯಾಚರಣೆಯನ್ನು ವೇಗಗೊಳಿಸಲು ಜೆಸಿಬಿ ಯಂತ್ರವನ್ನು ತರಲಾಯಿತು ಎಂದು ಅವರು ತಿಳಿಸಿದ್ದಾರೆ.

## ಸ್ಪೇನ್, ಪೋರ್ಚುಗಲ್, ಫ್ರಾನ್ಸ್‌ನ ಬಹುತೇಕ ಕಡೆ ವಿದ್ಯುತ್ ಕಡಿತ: ರೈಲು ಸಂಚಾರದಲ್ಲಿ ವ್ಯತ್ಯಯ

**ಮ್ಯಾಡ್ರಿಡ್:** ಫ್ರಾನ್ಸ್, ಪೋರ್ಚುಗಲ್ ಹಾಗೂ ದಕ್ಷಿಣ ಫ್ರಾನ್ಸ್ ನಲ್ಲಿಂದು ಏಕಕಾಲಕ್ಕೆ ವಿದ್ಯುತ್ ಕಡಿತಗೊಂಡಿದ್ದು , ಲಕ್ಷಾಂತರ ಜನರು ಪರದಾಡುವಂತಾಗಿದೆ. ಅಲ್ಲದೇ ಈ ವಿದ್ಯುತ್ ಕಡಿತವು ರೈಲು ಸಂಚಾರ ಹಾಗೂ ವಿಮಾನ ಹಾರಾಟದ ಮೇಲೆ ಪರಿಣಾಮ ಬೀರಿದೆ ಎಂದು ವರದಿಗಳು ತಿಳಿಸಿವೆ.

ಮೂರು ಯೂರೋಪಿಯನ್ ದೇಶಗಳಲ್ಲಿ ವಿದ್ಯುತ್ ಕಡಿತ ಸಂಭವಿಸಿದ್ದು, ಲಕ್ಷಾಂತರ ಜನಕ್ಕೆ ಸಮಸ್ಯೆ ತಂದೊಡ್ಡಿದೆ. ಆದ್ರೆ ವಿದ್ಯುತ್ ಕಡಿತಕ್ಕೆ ಇನ್ನೂ ನಿಖರ ಕಾರಣ ತಿಳಿದುಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ನಡುವೆ ಸ್ಪ್ಯಾನಿಷ್ ಪ್ರಧಾನಿ ಪೆಡ್ರೋ ಸ್ಯಾಂಚೆಜ್ ಪರಿಸ್ಥಿತಿ ಮೇಲ್ವಿಚಾರಣೆ ನಡೆಸಲು ಗ್ರಿಡ್ ಆಪರೇಟರ್ ತುರ್ತು ಸಭೆ ಕರೆದಿದ್ದಾರೆ. ಇಂಧನ ಸಚಿವೆ ಸಾರಾ ಆಗೆಸೆನ್ ಕೂಡ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಸದ್ಯ ಈ ಕುರಿತು ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಸರ್ಕಾರಿ ಸ್ವಾಮ್ಯದ ವಿದ್ಯುತ್ ಕಂಪನಿ ರೆಡ್ ಎಲೆಕ್ಟ್ರಿಕಾ, ಶೀಘ್ರದಲ್ಲೇ ಸಮಸ್ಯೆ ಪರಿಹರಿಸಲು ನಮ್ಮ ತಂಡ ಕೆಲಸ ಮಾಡುತ್ತಿದೆ. ಜೊತೆಗೆ ವಿದ್ಯುತ್ ಕಡಿತಕ್ಕೆ ನಿಖರ ಕಾರಣವನ್ನೂ ಪರಿಶೀಲಿಸಲಾಗುತ್ತಿದೆ, ಅದಕ್ಕಾಗಿ ಯುರೋಪಿಯನ್ ನೆಟ್‌ವರ್ಕ್ ಆಫ್ ಟ್ರಾನ್ಸ್‌ಮಿಷನ್ ಸಿಸ್ಟಮ್ ಆಪರೇಟರ್‌ಗಳೊಂದಿಗೆ ಸಂಪರ್ಕದಲ್ಲಿದೆ ಎಂದು ಮಾಹಿತಿ ಹಂಚಿಕೊಂಡಿದೆ.

## ತೆರೆದ ಬಾವಿಗೆ ವ್ಯಾನ್ ಬಿದ್ದು 12 ಮಂದಿ ದುರ್ಮರಣ

**ಭೂಪಾಲ್:** ವೇಗವಾಗಿ ಬಂದ ವ್ಯಾನ್ ನಿಯಂತ್ರಣ ತಪ್ಪಿ ತೆರೆದ ಬಾವಿಗೆ ಬಿದ್ದ ಪರಿಣಾಮ 12 ಮಂದಿ ಸಾವನ್ನಪ್ಪಿರುವ ಘಟನೆ ಮಧ್ಯಪ್ರದೇಶದ ಮಂದಸೌರ್ ಜಿಲ್ಲೆಯಲ್ಲಿ ನಡೆದಿದೆ. ಈ ಅಪಘಾತದಲ್ಲಿ 12 ಜನರು ಸಾವನ್ನಪ್ಪಿದ್ದು, ಕೆಲವರು ಗಾಯಗೊಂಡಿದ್ದಾರೆ.

ಜಿಲ್ಲೆಯ ನಾರಾಯಣಗಢ ಪೊಲೀಸ್ ಠಾಣೆ ವ್ಯಾಪ್ತಿಯ ಕಚರಿಯಾ ಗ್ರಾಮದಲ್ಲಿ ವೇಗವಾಗಿ ಬಂದ ವ್ಯಾನ್ ನಿಯಂತ್ರಣ ತಪ್ಪಿ ಆಳವಾದ ಬಾವಿಗೆ ಬಿದ್ದ ಕಾರಣ ಈ ದುರ್ಘಟನೆ ನಡೆದಿದೆ. ಮೃತಪಟ್ಟ 12 ಮಂದಿಯಲ್ಲಿ ಬಾವಿಗೆ ಬಿದ್ದವರನ್ನು ರಕ್ಷಿಸಲು ಹೋದ ಯುವಕನು ಸೇರಿದ್ದಾನೆ ಎಂದು ಡಿಐಜಿ ಮನೋಜ್ ಸಿಂಗ್ ತಿಳಿಸಿದ್ದಾರೆ. ಉನ್ವೆಲ್ ಮತ್ತು ರತ್ನಂ ಜಿಲ್ಲೆಗಳ ಜನರು ವ್ಯಾನ್‌ನಲ್ಲಿ ಪ್ರಯಾಣಿಸುತ್ತಿದ್ದರು. ಅವರು ನೀಮುಚ್ ಜಿಲ್ಲೆಯ ದೇವಸ್ಥಾನಕ್ಕೆ ಭೇಟಿ ನೀಡಲು



ರತ್ನಾಮ್‌ನ ಖೋಜಂಖೇಡಾ ಗ್ರಾಮದಿಂದ ಹೋಗುತ್ತಿದ್ದರು. ನಂತರ ದಾರಿಯಲ್ಲಿ ವ್ಯಾನ್ ಬೈಕ್‌ಗೆ ಡಿಕ್ಕಿ ಹೊಡೆದಿದೆ.

ಇದಾದ ನಂತರ, ಅದು ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿದ್ದ ಮುಚ್ಚದ ಬಾವಿಗೆ ಬಿದ್ದಿತು. ವ್ಯಾನ್ ಬಾವಿಗೆ ಬಿದ್ದ ನಂತರ ಸ್ಥಳದಲ್ಲಿ ಗೊಂದಲ ಉಂಟಾಯಿತು. ಘಟನೆಯನ್ನು ನೋಡುತ್ತಿದ್ದ ಸ್ಥಳೀಯ ಯುವಕನೊಬ್ಬ ಧೈರ್ಯ ಪ್ರದರ್ಶಿಸಿ ಜನರನ್ನು ರಕ್ಷಿಸಲು ಬಾವಿಗೆ ಹಾರಿದ್ದಾನೆ. ಕೊನೆಗೆ ಆತನೂ ಸಾವನ್ನಪ್ಪಿದ್ದಾನೆ.

ಅಪಘಾತದ ಬಗ್ಗೆ ಮಾಹಿತಿ ಬಂದ ತಕ್ಷಣ, ಪೊಲೀಸರು ಸೇರಿದಂತೆ ಆಡಳಿತ ಸಿಬ್ಬಂದಿ ಸ್ಥಳಕ್ಕೆ ತಲುಪಿದರು. ಇದರೊಂದಿಗೆ ರಕ್ಷಣಾ ಕಾರ್ಯ ಆರಂಭವಾಯಿತು. ಬಾವಿಗೆ ಬಿದ್ದ ಜನರನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾಗ ಮನೋಹರ್ ಸಿಂಗ್ ಎಂಬ ಸ್ಥಳೀಯ ಯುವಕ ಸಾವನ್ನಪ್ಪಿದ್ದಾನೆ ಎಂದು ತಿಳಿಸಿದ್ದಾರೆ.

ವ್ಯಾನ್ ಬಾವಿಗೆ ಬಿದ್ದ ನಂತರ, ವ್ಯಾನ್‌ನಿಂದ ಎಲ್‌ಪಿಜಿ ಅನಿಲ ಸೋರಿಕೆಯಾಗಲು ಪ್ರಾರಂಭಿಸಿತು.

ಇದರಿಂದಾಗಿ ಒಳಗೆ ಸಿಲುಕಿದ್ದ ಜನರಿಗೆ ಉಸಿರುಗಟ್ಟುವಿಕೆ ಉಂಟಾಗಿತ್ತು. ಸ್ಥಳೀಯ ಯುವಕನೊಬ್ಬ ಬಾವಿಗೆ ಬಿದ್ದವರನ್ನು ರಕ್ಷಿಸಲು ಪ್ರಯತ್ನಿಸಿದನು. ಆದರೆ ಅನಿಲ ಸೋರಿಕೆಯಿಂದಾಗಿ ಉಸಿರುಗಟ್ಟಿ ಆತ ಕೂಡ ಸಾವನ್ನಪ್ಪಿದ್ದಾನೆ.

# ಭಾರತದ ದಾಳಿಯ ಭೀತಿ, ಭದ್ರತೆಯ ಕೊರತೆ

### ಸಾವಿರಾರು ಸಂಖ್ಯೆಯಲ್ಲಿ ಕೆಲಸಕ್ಕೆ ರಾಜೀನಾಮೆ ನೀಡುತ್ತಿರುವ ಪಾಕ್ ಸೈನಿಕರು

**ಇಸ್ಲಾಮಾಬಾದ್:** ಕಾಶ್ಮೀರದ ಪಹಲ್ಗಾಮ್ ನಲ್ಲಿನ ಭಯೋತ್ಪಾದಕ ಕೃತ್ಯದ ನಂತರ, ಪಾಕಿಸ್ತಾನ ಒಂದರ ಮೇಲೊಂದು ಸಮಸ್ಯೆಗಳನ್ನು ಎದುರಿಸುತ್ತಿದೆ. ಈಗಾಗಲೇ, ಭಾರತ ಸಿಂಧೂ ನದಿ ನೀರು ಹಂಚಿಕೆಯನ್ನು ಬಂದ್ ಮಾಡಿದೆ. ಇನ್ನೊಂದು ಕಡೆ, ಪಾಕಿಸ್ತಾನಿಗಳನ್ನು ಭಾರತ ಬಿಟ್ಟು ತೊಲಗುವಂತೆ ಸೂಚನೆ ನೀಡಿದೆ.

ಈ ಮಧ್ಯೆ, ಪಾಕಿಸ್ತಾನದ ಸೇನೆ ಮತ್ತೊಂದು ಗಂಭೀರ ಸಮಸ್ಯೆಯನ್ನು ಎದುರಿಸುತ್ತಿದ್ದು, ಸಾವಿರಾರು ಸಂಖ್ಯೆಯಲ್ಲಿ ಸೈನಿಕರು ತಮ್ಮ ಮಿಲಿಟರಿ ಸೇವೆಗೆ ರಾಜೀನಾಮೆ ಸಲ್ಲಿಸುತ್ತಿದ್ದಾರೆ ಎಂದು ವರದಿಯಾಗಿದೆ. ಇದಕ್ಕೆ ಒಂದು ಕಾರಣ, ಭಾರತದ ವಿರುದ್ಧ ಎದುರಾಗಿರುವ ಯುದ್ಧದ ಭೀತಿ.




ಒಂದು ಕಡೆ ಆರ್ಥಿಕ ಸಂಕಷ್ಟ, ಸರಿಯಾಗಿ ಬಿಡುಗಡೆಯಾಗದ ಸಂಬಳ, ಸೈನಿಕರ ಸಾಲುಸಾಲು ಸಾವು, ಭದ್ರತೆಯ ಕೊರತೆಯಿಂದಾಗಿ ಸೈನಿಕರು ರಾಜೀನಾಮೆಯನ್ನು ನೀಡುತ್ತಿದ್ದಾರೆ.

ಕೆಲಸಕ್ಕೆ ರಾಜೀನಾಮೆ ನೀಡುತ್ತಿರುವ ಪಾಕ್ ಸೈನಿಕರು, ಸೌದಿ ಅರೇಬಿಯಾ, ಕುವೈತ್ ಮುಂತಾದ ಕಡೆ ಕೆಲಸ ಅರಸಿಕೊಂಡು ಹೋಗುತ್ತಿದ್ದಾರೆ. ಪಾಕ್ ಸೈನಿಕರನ್ನು ಗುರಿಯಾಗಿಸಿಕೊಂಡು ಬಿಎಲ್‌ಎ ನಡೆಸುತ್ತಿರುವ ದಾಳಿಯು, ಪಾಕಿಸ್ತಾನದಮಿಲಿಟರಿ ಪಡೆಗಳಿಗೆ ಸದ್ಯ ದೊಡ್ಡ ತಲೆನೋವಾಗಿ ಪರಿಣಮಿಸುತ್ತಿದೆ.

- ವಿಶ್ವಾಸಾರ್ಹ ಮೂಲಗಳನ್ನು ಉಲ್ಲೇಖಿಸಿ ಕಾಬೂಲ್ ಫ್ರಂಟ್ ಲೈನ್ ಸುದ್ದಿಸಂಸ್ಥೆ ವರದಿಯನ್ನು ಮಾಡಿದೆ
- ಸುಮಾರು 2,500 ಸೈನಿಕರು ಒಂದು ವಾರದ ಅವಧಿಯಲ್ಲಿ ಕೆಲಸವನ್ನು ತೊರೆದಿದ್ದಾರೆ
- ಪ್ರಾಣವನ್ನು ಅಪಾಯಕ್ಕೆ ದೂಡುವ ಬದಲು, ಆರ್ಥಿಕವಾಗಿ ಬಲಿಷ್ಠವಾಗುವ ಆಯ್ಕೆ

## ಫ್ಲೋರಿಡಾದಲ್ಲಿ 2 ದೋಣಿಗಳ ನಡುವೆ ಮುಖಾಮುಖಿ ಡಿಕ್ಕಿ : ಓರ್ವ ಸಾವು

**ವಾಷಿಂಗ್ಟನ್:** ಅಮೆರಿಕದ ಫ್ಲೋರಿಡಾದಲ್ಲಿ 2 ದೋಣಿಗಳು ಮುಖಾಮುಖಿ ಡಿಕ್ಕಿಯಾದ ಪರಿಣಾಮ ಓರ್ವ ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿರುವ ಘಟನೆ ಕ್ಲಿಯರ್‌ವಾಟರ್ ನಗರದ ಮೆಮೋರಿಯಲ್ ಕಾಸ್‌ವೇ ಸೇತುವೆಯ ಬಳಿ ನಡೆದಿದೆ.

ಇಬ್ಬರು ಸಿಬ್ಬಂದಿ ಸೇರಿದಂತೆ 45 ಜನರನ್ನು ಹೊತ್ತೊಯ್ಯುತ್ತಿದ್ದ ದೋಣಿಗೆ ಇನ್ನೊಂದು ದೋಣಿಯು ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ಇನ್ನೊಂದು ದೋಣಿಯು ಘಟನಾ ಸ್ಥಳದಿಂದ ಕಾಣೆಯಾಗಿದೆ ಎಂದು ಕ್ಲಿಯರ್‌ವಾಟರ್ ಪೊಲೀಸರು ತಿಳಿಸಿದ್ದಾರೆ. ಮೂಲಗಳ ಪ್ರಕಾರ, ರಾತ್ರಿ 10 ಗಂಟೆ ಸುಮಾರಿಗೆ 2 ದೋಣಿಗಳು ಮುಖಾಮುಖಿ ಡಿಕ್ಕಿ ಹೊಡೆದ ನಂತರ ಸೇತುವೆಯ ದಕ್ಷಿಣ ದಡದಲ್ಲಿ ಬಂದು ನಿಂತಿತು. ಆ ಕೂಡಲೇ ಗಾಯಾಳುಗಳನ್ನು ಹೊರತೆಗೆಯಲಾಯಿತು ಎಂದು ತಿಳಿಸಿದೆ.

## ಪಾಕ್ ಪ್ರಜೆಗಳ ಗಡಿಪಾರು, ಜೀವನ ಅಸ್ತವ್ಯಸ್ತ

**ಜೈಪುರ:** ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಭಾರತ-ಪಾಕಿಸ್ತಾನ ಸಂಬಂಧ ಮತ್ತಷ್ಟು ಹಳಸಿದ್ದು, ಉಭಯ ರಾಷ್ಟ್ರಗಳ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯು ಅಸಂಖ್ಯಾತ ಸಾಮಾನ್ಯ ಜನರ ಜೀವನವನ್ನು ಅಸ್ತವ್ಯಸ್ತಗೊಳಿಸಿದೆ.

ಉಗ್ರರ ದಾಳಿ ಬಳಿಕ ಕಠಿಣ ನಿಲುವು ತಳೆದ ಭಾರತ ಸರ್ಕಾರ, ಪಾಕಿಸ್ತಾನಿ ನಾಗರಿಕರ ವೀಸಾಗಳನ್ನು ರದ್ದುಗೊಳಿಸಿ, ಅವರನ್ನು ತಮ್ಮ ದೇಶಕ್ಕೆ ಮರಳುವಂತೆ ನಿರ್ದೇಶಿಸಿದೆ. ಈ ನಿರ್ಧಾರವು ಇತ್ತೀಚೆಗೆ ಪಾಕಿಸ್ತಾನದಿಂದ ರಾಜಸ್ಥಾನಕ್ಕೆ ಬಂದಿರುವ ಹಲವಾರು ಪಾಕಿಸ್ತಾನಿ ನಾಗರಿಕರು ಮತ್ತು ಅವರ ಕುಟುಂಬಗಳ ಜೀವನವನ್ನು ಅಸ್ತವ್ಯಸ್ತಗೊಳ್ಳುವಂತೆ ಮಾಡಿದೆ.

ರಾಜಸ್ಥಾನದ ಜೈಸಲ್ಮೇರ್‌ನ ದೇವಿಕೋಟ್‌ನ ನಿವಾಸಿಗಳಾದ ಸೋದರ ಸಂಬಂಧಿಗಳಾದ ಸಲೇಹ್ ಮೊಹಮ್ಮದ್ ಮತ್ತು ಮುಷ್ತಾಕ್ ಅಲಿ, ಜುಲೈ 2023 ರಲ್ಲಿ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಘೋಟ್ಕಿ ಜಿಲ್ಲೆಯಲ್ಲಿ ತಮ್ಮ ಚಿಕ್ಕಮ್ಮನನ್ನು ಭೇಟಿಯಾಗಲು ಹೋಗಿದ್ದು, ಈ ವೇಳೆ ಅಲ್ಲಿನ ಕರಮ್ ಖತುನ್ (21) ಮತ್ತು ಸಚುಲ್ (22) ಎಂಬ ಇಬ್ಬರು ಯುವತಿಯರ ಪ್ರೀತಿಗೆ ಬಿದ್ದು, 2023ರ ಆಗಸ್ಟ್ ತಿಂಗಳನಲ್ಲಿ ಕುಟುಂಬಸ್ಥರ ಒಪ್ಪಿಗೆ ಮೇರೆಗೆ ಅವರನ್ನು ವಿವಾಹವಾಗಿದ್ದರು. ಬಳಿಕ 2023ರ ಸೆಪ್ಟೆಂಬರ್ ತಿಂಗಳಿನಲ್ಲಿ ಯುವಕರು ಭಾರತಕ್ಕೆ ವಾಪಸ್ಸಾಗಲೇಬೇಕಾಗಿತ್ತು. ವಿವಾಹದ ಹೊರತಾಗಿಯೂ ಯುವತಿಯರಿಗೆ ಭಾರತಕ್ಕೆ ಬರಲು ವೀಸಾ ಸಿಕ್ಕಿರಲಿಲ್ಲ. ಸುಮಾರು ಒಂದೂವರೆ ವರ್ಷಗಳ ಕಾಯುವಿಕೆಯ ನಂತರ, ಯುವತಿಯರಿಗೆ ವೀಸಾ ಸಿಕ್ಕಿತ್ತು.

ಇದರಂತೆ ಏ.11 ರಂದು ಜೈಸಲ್ಮೇರ್‌ಗೆ ಬಂದಿಳಿದು, ತಮ್ಮ ಪತಿಗಳ ಜೊತೆ ಜೀವನ ಪ್ರಾರಂಭಿಸಿದ್ದರು. ಆದರೆ, 10 ದಿನಗಳ ನಂತರ ಪಹಲ್ಗಾಮ್ ನಲ್ಲಿ ನಡೆದ ಉಗ್ರರ ದಾಳಿ ಈ ಜೋಡಿಗಳ ದಾಂಪತ್ಯ ಜೀವನದ ಸಂತಸವನ್ನು ಕಸಿದುಕೊಂಡಿದೆ. ಪಾಕಿಸ್ತಾನಿ ಪ್ರಜೆಗಳು ಅವರ ದೇಶಕ್ಕೆ ವಾಪಸ್ಸಾಗುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಈ ಜೋಡಿಗಳು ಸಂಕಷ್ಟ ಎದುರಿಸುವಂತಾಗಿದೆ.

## ರಕ್ಷಣಾ ಸಾಮಾಗ್ರಿ ಹೊತ್ತುಕೊಂಡು ಟರ್ಕಿ ವಿಮಾನ ಪಾಕ್‌ನಲ್ಲಿ ಲ್ಯಾಂಡ್

**ಇಸ್ಲಾಮಾಬಾದ್:** ಪಹಲ್ಗಾಮ್ ಉಗ್ರರ ದಾಳಿ ಬಳಿಕ ಭಾರತದ ವಿರುದ್ಧ ವಿಷ ಕಾರುತ್ತಿರುವ ಪಾಕಿಸ್ತಾನಕ್ಕೆ ಟರ್ಕಿ ಬೆಂಬಲ ನೀಡಿದೆ. ಯುದ್ಧ ಉಪಕರಣಗಳನ್ನು ಹೊತ್ತುಕೊಂಡು ಟರ್ಕಿಶ್ ವಾಯುಪಡೆಯ ಸಿ -130 ಹರ್ಕ್ಯುಲಸ್ ಮಿಲಿಟರಿ ಸಾರಿಗೆ ವಿಮಾನವು ಭಾನುವಾರ ಕರಾಚಿಯಲ್ಲಿ ಲ್ಯಾಂಡ್ ಆಗಿದೆ.

ಕರಾಚಿಯನ್ನು ಹೊರತುಪಡಿಸಿ ಆರು ಟರ್ಕಿಶ್ ಸಿ -130 ವಿಮಾನಗಳು ಇಸ್ಲಾಮಾಬಾದ್‌ನ ಮಿಲಿಟರಿ ನೆಲೆಯಲ್ಲಿ ಬಂದಿಳಿದಿವೆ ಎಂದು ವರದಿಯಾಗಿದೆ. ಭಾರತದ ವಿಚಾರ ಬಂದಾಗ ಟರ್ಕಿ ಮೊದಲಿನಿಂದಲೂ ಪಾಕಿಸ್ತಾನದ ಪರವೇ ತನ್ನ ನಿರ್ಧಾರವನ್ನು ಪ್ರಕಟಿಸಿಕೊಂಡೇ ಬಂದಿದೆ. ವಿಶ್ವಸಂಸ್ಥೆಯಲ್ಲಿ ಪಾಕ್ ಪರವೇ ಮತವನ್ನು ಚಲಾಯಿಸುತ್ತಿದೆ. ಎರಡು ವಾರಗಳ ಹಿಂದೆ ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಟರ್ಕಿಗೆ ಭೇಟಿ ನೀಡಿ ಮಾತುಕತೆ ನಡೆಸಿದ್ದರು. ಈ ಹಿಂದೆ ಮದ್ದು ಗುಂಡುಗಳು, ಡ್ರೋನ್ ಸೇರಿದಂತೆ ಹಲವಾರು ರಕ್ಷಣಾ ಸಾಮಾಗ್ರಿಗಳನ್ನು ಟರ್ಕಿ ಪಾಕ್‌ಗೆ ಈ ಹಿಂದೆ ನೀಡಿತ್ತು.



### ಅಮೆರಿಕದ ಶಾಂತಿ ಪ್ರಸ್ತಾವನೆಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಪ್ರತಿಕ್ರಿಯೆಗೆ ಟ್ರಂಪ್-ಝೆಲೆನ್ಸ್ಕಿ ಕಿಡಿ

# ವ್ಯಾಟಿಕನ್‌ನಲ್ಲಿ ಕೈಗೆ ಸಿಕ್ಕ ಕುರ್ಚಿ ಎಳೆದು ಮಾತಿಗೆ ಕುಳಿತ ಟ್ರಂಪ್-ಝೆಲೆನ್ಸ್ಕಿ

**ವ್ಯಾಟಿಕನ್:** ರಷ್ಯಾ-ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿದಂತೆ ಅಮೆರಿಕದ ಕದನ ವಿರಾಮ ಒಪ್ಪಂದ ಪ್ರಸ್ತಾವನೆಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಆರೋಪ ಮಾಡಿದ್ದಾರೆ.

ಪೋಪ್ ಫ್ರಾನ್ಸಿಸ್ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ವ್ಯಾಟಿಕನ್ ಸಿಟಿಗೆ ಆಗಮಿಸಿದ್ದ ಡೊನಾಲ್ಡ್ ಟ್ರಂಪ್ ಮತ್ತು ವೊಲೊಡಿಮಿರ್ ಝೆಲೆನ್ಸ್ಕಿ, ಕೆಲಕಾಲ ಖಾಸಗಿಯಾಗಿ ಮಾತುಕತೆ ನಡೆಸಿದ್ದು, ವ್ಲಾಡಿಮಿರ್ ಪುಟಿನ್ ಅವರ ನಡೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

**ಪುಟಿನ್ ಬಗ್ಗೆ ಗುಸುಗುಸು**

ಝೆಲೆನ್ಸ್ಕಿ ಭೇಟಿ ಬಳಿಕ ಮಾತನಾಡಿದ ಟ್ರಂಪ್ ಪುಟಿನ್ ಉಕ್ರೇನ್‌ನಲ್ಲಿ ಯುದ್ಧವನ್ನು ನಿಲ್ಲಿಸಲು ಸಿದ್ಧರಾಗಿರುವುದು ಅನುಮಾನ ಎಂದು ಅಸಮಾಧಾನ ಹೊರಹಾಕಿದ್ದಾರೆ. ಮುಂದುವರೆದು, ಪುಟಿನ್ ಕದನ ವಿರಾಮ ಒಪ್ಪಂದವನ್ನು ಜಾರಿಗೊಳಿಸಲು ಮುಂದಾಗದಿರುವುದು, ನಾವು ಅವರನ್ನು ಬೇರೆ ರೀತಿಯಲ್ಲಿ ನೋಡಿಕೊಳ್ಳುವ ಅನಿವಾರ್ಯತೆಯನ್ನು ಸೃಷ್ಟಿಸಿದ್ದಾರೆ ಎಂದು ಸೂಚ್ಯವಾಗಿ ಹೇಳಿದ್ದಾರೆ.

ರಷ್ಯಾ ಅಧ್ಯಕ್ಷ ಯುದ್ಧವನ್ನು ನಿಲ್ಲಿಸುವ ಯಾವುದೇ



ಇರಾದೆ ಹೊಂದಿಲ್ಲ ಎಂಬುದು ನಮಗೆ ಸ್ಪಷ್ಟವಾಗಿದೆ. ಹೀಗಾಗಿ ರಷ್ಯಾ ಮೇಲೆ ಕಠಿಣ ನಿರ್ಬಂಧಗಳನ್ನು ಹೇರುವ ಮೂಲಕ ಪುಟಿನ್ ಮೇಲೆ ಒತ್ತಡ ಹೇರುವ ತಂತ್ರವನ್ನು ನಾವು ಅನುಸರಿಸಬೇಕಿದೆ.

ಪುಟಿನ್ ಅವರನ್ನು ಬೇರೆ ರೀತಿಯಲ್ಲಿ ನೋಡಿಕೊಳ್ಳುವ ಸಮಯ ಬಂದಿದೆ ಎಂದು ಡೊನಾಲ್ಡ್ ಟ್ರಂಪ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಇತ್ತೀಚೆಗೆ ಉಕ್ರೇನ್ ರಾಜಧಾನಿ ಕೈವ್ ಮೇಲೆ ರಷ್ಯಾ ಕ್ಷಿಪಣಿ ದಾಳಿ ನಡೆಸಿದೆ. ಈ ದಾಳಿಯಲ್ಲಿ 12 ಜನರು ಮೃತಪಟ್ಟು, 87 ಜನರು ಗಾಯಗೊಂಡಿದ್ದಾರೆ. ಈ ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಅಮೆರಿಕ ಅಧ್ಯಕ್ಷ, ಕದನ ವಿರಾಮ ಒಪ್ಪಂದಕ್ಕೆ ಆಸಕ್ತಿ ತೋರಿದ್ದ ಪುಟಿನ್, ಇದೀಗ ಮತ್ತೆ ಉಕ್ರೇನ್ ಮೇಲೆ ದಾಳಿ ಮಾಡುತ್ತಿರುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಕಿಡಿಕಾರಿದ್ದಾರೆ. ಡೊನಾಲ್ಡ್ ಟ್ರಂಪ್ ಅವರ ಸತತ ಬೆದರಿಕೆಗೂ ಜಗ್ಗದ ವ್ಲಾಡಿಮಿರ್ ಪುಟಿನ್, ಉಕ್ರೇನ್ ಮೇಲಿನ ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಿದ್ದಾರೆ.

ಕಳೆದ ಆಗಸ್ಟ್‌ನಲ್ಲಿ ಉಕ್ರೇನ್ ವಶಪಡಿಸಿಕೊಂಡಿದ್ದ ಕುರ್ಸ್ಕ್ ನಗರವನ್ನು ಮರಳಿ ಪಡೆದುಕೊಂಡಿದ್ದೇವೆ ಎಂದು ರಷ್ಯಾ ಅಧ್ಯಕ್ಷರು ಘೋಷಿಸಿದ್ದಾರೆ.

ಉಕ್ರೇನ್ ಶಾಂತಿ ಮಾತುಕತೆಗಾಗಿ ಒಂದು ತಿಂಗಳ ಕದನ ವಿರಾಮಕ್ಕೆ ಅನುವು ಮಾಡಿಕೊಡುವ ಡೊನಾಲ್ಡ್ ಟ್ರಂಪ್ ಅವರ ಯೋಜನೆಗೆ ಬೆಂಬಲ ಸೂಚಿಸಿದೆ. ಆದರೆ ರಷ್ಯಾ ಮಾತ್ರ ಉಕ್ರೇನ್‌ನ ಇಂಧನ ಮೂಲಸೌಕರ್ಯವನ್ನು ಗುರಿಯಾಗಿಸಿಕೊಂಡು ಸೀಮಿತ ಕದನ ವಿರಾಮವನ್ನು ಘೋಷಿಸಿತ್ತು.


ಆದರೆ ಡೊನಾಲ್ಡ್ ಟ್ರಂಪ್ ಅವರು ಕ್ರೈಮಿಯಾವನ್ನು ರಷ್ಯಾದ ಭಾಗ ಎಂದು ಒಪ್ಪಿಕೊಳ್ಳುವಂತೆ ನೀಡಿದ್ದ ಸಲಹೆಯನ್ನು ಉಕ್ರೇನ್ ಸ್ಪಷ್ಟವಾಗಿ ತಿರಸ್ಕರಿಸಿದೆ. ಕ್ರೈಮಿಯಾವನ್ನು ಹೊರತುಪಡಿಸಿದ ಉಕ್ರೇನ್‌ನನ್ನು ಊಹಿಸುವುದು ಕಷ್ಟ ಎಂದು ವೊಲೊಡಿಮಿರ್ ಝೆಲೆನ್ಸ್ಕಿ ಹೇಳಿರುವುದು ಅಮೆರಿಕ ಅಧ್ಯಕ್ಷರ ಅಸಮಾಧಾನಕ್ಕೆ ಕಾರಣವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

- ವ್ಯಾಟಿಕನ್ ಸಿಟಿಯಲ್ಲಿ ಖಾಸಗಿ ಚರ್ಚೆ ನಡೆಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ
- ಅಮೆರಿಕದ ಶಾಂತಿ ಪ್ರಸ್ತಾವನೆಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಪ್ರತಿಕ್ರಿಯೆಗೆ ಟ್ರಂಪ್-ಝೆಲೆನ್ಸ್ಕಿ ಕಿಡಿ
- ಪುಟಿನ್ ಅವರನ್ನು ಬೇರೆ ರೀತಿಯಲ್ಲಿ ನೋಡಿಕೊಳ್ಳಬೇಕಿದೆ ಎಂಬ ಡೊನಾಲ್ಡ್ ಟ್ರಂಪ್ ಮಾತಿನ ಅರ್ಥವೇನು?

### ತೀವ್ರ ಮಾತಿನ ಚಕಮಕಿ

**ಸೇಂಟ್ ಪೀಟರ್ಸ್ ಬೆಸಿಲಿಕಾದಲ್ಲಿ ವೊಲೊಡಿಮಿರ್ ಝೆಲೆನ್ಸ್ಕಿ ಅವರೊಂದಿಗೆ 15 ನಿಮಿಷಗಳ ಮಾತುಕತೆಯ ನಂತರ, ಡೊನಾಲ್ಡ್ ಟ್ರಂಪ್ ಅವರು ರಷ್ಯಾ ಅಧ್ಯಕ್ಷರ ವಿರುದ್ಧ ಗುಡುಗಿರುವುದು ಇದೀಗ ಜಾಗತಿಕವಾಗಿ ಗಮನ ಸೆಳೆದಿದೆ. ಕಳೆದ ಫೆಬ್ರವರಿಯಲ್ಲಿ ಅಮೆರಿಕದ ಓವಲ್ ಕಚೇರಿಯಲ್ಲಿ ನಡೆದ ತೀವ್ರ ಮಾತಿನ ಚಕಮಕಿ ಬಳಿಕ, ಉಭಯ ನಾಯಕರು ಇದೇ ಮೊದಲ ಬಾರಿಗೆ ನೇರವಾಗಿ ಭೇಟಿಯಾಗಿರುವುದು ವಿಶೇಷ.**

# ಮಾಜಿ ಪತ್ನಿ ಮನೆಗೆ ಗೆಳತಿಯೊಂದಿಗೆ ಬಂದ ಅಮೀರ್ ಖಾನ್




ಬಾಲಿವುಡ್ ನಟ ಆಮೀರ್ ಖಾನ್ ಅವರು ಗೆಳತಿ ಗೌರಿಯೊಂದಿಗೆ ಮಾಜಿ ಪತ್ನಿ ರೀನಾ ದತ್ತಾ ಮನೆಗೆ ಭೇಟಿ ನೀಡಿದ್ದಾರೆ. ಭೇಟಿ ಮಾಡಿರುವ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ. ಆಮೀರ್ ಮತ್ತು ಗೆಳತಿ ಗೌರಿ ಭಾನುವಾರದ ವಿಶೇಷವಾಗಿ ಮಾಜಿ ಪತ್ನಿ ಮನೆಗೆ ಭೇಟಿ ನೀಡಿದ್ದಾರೆ. ಈ ವೇಳೆ, ಆಮೀರ್ ಪುತ್ರ ಜುನೈದ್ ಖಾನ್ ಕೂಡ ಜೊತೆಗಿದ್ದಾರೆ. ಆಮೀರ್ ಖಾನ್ ಗೆಳತಿಯನ್ನು ಮಗನ ಮುಂದೆಯೇ ಮೊದಲ ಪತ್ನಿಯ ಮನೆಗೆ ಕರೆದುಕೊಂಡು ಹೋಗುತ್ತಿರುವ ದೃಶ್ಯವನ್ನು ನೋಡಿ ನೆಟ್ಟಿಗರು ಹುಬ್ಬೇರಿಸಿದ್ದಾರೆ. ಅಂದಹಾಗೆ, ಆಮೀರ್ ಖಾನ್ 60ನೇ ವರ್ಷದ ಹುಟ್ಟುಹಬ್ಬ ಆಚರಿಸಿದ ಸಂದರ್ಭದಲ್ಲಿ ಮಾಧ್ಯಮಕ್ಕೆ ಡೇಟಿಂಗ್ ಬಗ್ಗೆ ಅಧಿಕೃತವಾಗಿ ತಿಳಿಸಿದ್ದರು. ಗೌರಿ ಜೊತೆ 1 ವರ್ಷದಿಂದ ಡೇಟಿಂಗ್ ಮಾಡುತ್ತಿದ್ದೇನೆ. ಅವರನ್ನು ಕಳೆದ 25 ವರ್ಷಗಳಿಗಿಂತ ಹೆಚ್ಚಿನ ಕಾಲದಿಂದ ಪರಿಚಿತರು ಎಂದಿದ್ದರು. ಗೌರಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದು, ತಮ್ಮದೇ ನಿರ್ಮಾಣದ ಸಂಸ್ಥೆಯಡಿಯಲ್ಲಿ ಕೆಲಸ ಮಾಡುತ್ತಿರೋದಾಗಿ ಆಮೀರ್ ಮಾಹಿತಿ ನೀಡಿದ್ದರು. ಗೌರಿಗೆ 6 ವರ್ಷದ ಮಗನಿದ್ದು, ನಾನು ಅವರೊಂದಿಗೆ ವಾಸಿಸುತ್ತಿದ್ದೇನೆ. ನಮ್ಮ ಕುಟುಂಬಸ್ಥರನ್ನು ಆಕೆ ಭೇಟಿಯಾಗಿದ್ದಾರೆ. ನಮ್ಮ ಸಂಬಂಧದ ಬಗ್ಗೆ ಮನೆಯವರಿಗೂ ಖುಷಿಯಿದೆ ಎಂದು ಹಂಚಿಕೊಂಡಿದ್ದರು. 2021ರಲ್ಲಿ ಕಿರಣ್ ರಾವ್‌ಗೆ ಆಮೀರ್ ಡಿವೋರ್ಸ್ ನೀಡಿದರು.

**ಗೌರಿ ಜೊತೆ 1 ವರ್ಷದಿಂದ ಡೇಟಿಂಗ್**



# ಕಾಶ್ಮೀರ ಎಂದಿಗೂ ಭಾರತಕ್ಕೆ ಸೇರಿದ್ದು



ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಗೆ 26 ಮಂದಿ ಅಮಾಯಕರು ಬಲಿಯಾಗಿದ್ದಾರೆ. ಈ ಕುರಿತು ಹಲವು ನಟ, ನಟಿಯರು ಖಂಡಿಸಿದ್ದಾರೆ. ಇದೀಗ ಕಾರ್ಯಕ್ರಮವೊಂದರಲ್ಲಿ ವಿಜಯ್ ದೇವರಕೊಂಡ ಮಾತನಾಡಿ, ಕಾಶ್ಮೀರ ಎಂದಿಗೂ ಭಾರತಕ್ಕೆ ಸೇರಿದ್ದು, ಪಾಕ್ ಮೇಲೆ ದಾಳಿ ಮಾಡುವ ಅವಶ್ಯಕತೆಯಿಲ್ಲ ಎಂದಿದ್ದಾರೆ.ಸೂರ್ಯ ನಟನೆಯ 'ರೆಟ್ರೋ' ಸಿನಿಮಾ ಪ್ರೀ- ರಿಲೀಸ್ ಕಾರ್ಯಕ್ರಮಕ್ಕೆ ವಿಜಯ್ ಅತಿಥಿಯಾಗಿ ಭಾಗಿಯಾಗಿದ್ರು. ಈ ವೇಳೆ ಮಾತನಾಡಿದ ವಿಜಯ್ ದೇವರಕೊಂಡ, ಉಗ್ರರ ದಾಳಿಗೆ ಅಮಾಯಕರ ಪ್ರಾಣಪಕ್ಷಿ ಹಾರಿ ಹೋಗಿದೆ. ಮತ್ತೆ ಇಂಥಹ ಕೃತ್ಯ ಮರುಕಳಿಸಬಾರದು ಅಂದರೆ ಶತ್ರುಗಳ ಬಾಲ ಕಟ್ ಮಾಡಲೇಬೇಕು. ಅದಕ್ಕಾಗಿ ಭಾರತೀಯ ಸೈನ್ಯ ಉಗ್ರರನ್ನು ಪತ್ತೆ ಮಾಡುತ್ತಿದ್ದಾರೆ. ಕಾಶ್ಮೀರ ಎಂದೆಂದಿಗೂ ಭಾರತಕ್ಕೆ ಸೇರಿದ್ದು, ಭಾರತೀಯರಿಗೆ ಮಾತ್ರವೇ ಸೇರಿದ್ದು ಅನ್ನೋದು ಸತ್ಯ ಎಂದಿದ್ದಾರೆ.

ಭಯೋತ್ಪಾದಕರಿಗೆ ಶಿಕ್ಷಣವಿಲ್ಲ. ಅವರಿಗೆ ಯಾವುದೇ ಮೂಲಭೂತ ಸೌಕರ್ಯಗಳು ಸರಿಯಾಗಿಲ್ಲದ ಕಾರಣ ಅವರ ಸಮಸ್ಯೆಗಳನ್ನು ಅವರಿಗೆ ಪರಿಹರಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಿದ್ದರೂ ಕಾಶ್ಮೀರದ ಮೇಲೆ ಉದ್ಧಟತನ ಮಾಡ್ತಿದ್ದಾರೆ. ಪಾಕಿಸ್ತಾನದ ಮೇಲೆ ಭಾರತ ದಾಳಿ ಮಾಡುವ ಅವಶ್ಯಕತೆ ಇಲ್ಲ. ಪರಿಸ್ಥಿತಿ ಹೀಗೆ ಮುಂದುವರೆದರೆ ಅಲ್ಲಿನ ಜನರೇ ಅಲ್ಲಿನ ಸರ್ಕಾರದ ವಿರುದ್ಧ ತಿರುಗಿ ಬೀಳ್ತಾರೆ ಎಂದಿದ್ದಾರೆ. ನಾನು 2 ವರ್ಷಗಳ ಹಿಂದೆ ಕಾಶ್ಮೀರಕ್ಕೆ 'ಖುಷಿ' ಸಿನಿಮಾ ಚಿತ್ರೀಕರಣಕ್ಕಾಗಿ ಹೋಗಿದ್ದೆ, ತುಂಬಾ ಒಳ್ಳೆಯ ಸಮಯವನ್ನು ನಾನಲ್ಲಿ ಕಳೆದಿದ್ದೇನೆ ಎಂದು ಸ್ಮರಿಸಿದ್ದಾರೆ ವಿಜಯ್ ದೇವರಕೊಂಡ. ಅಂದಹಾಗೆ, ಸೂರ್ಯ ಮತ್ತು ಪೂಜಾ ಹೆಗ್ಡೆ ನಟನೆಯ 'ರೆಟ್ರೋ' ತಮಿಳು ಚಿತ್ರ ಇದೇ ಮೇ 1ರಂದು ರಿಲೀಸ್‌ಗೆ ಸಿದ್ಧವಾಗಿದೆ.

# ನಿರ್ಮಾಪಕಿಯಾದ ಯಶ್ ತಾಯಿ





ರಾಕಿಂಗ್ ಸ್ಟಾರ್ ಯಶ್ ಅವರು ನಟ ಕಮ್ ನಿರ್ಮಾಪಕನಾಗಿ ಬ್ಯುಸಿಯಾಗಿದ್ದಾರೆ. ಇದೀಗ ಯಶ್ ಅವರ ತಾಯಿ ಪುಷ್ಪ ಅರುಣ್ ಕುಮಾರ್ ಅವರು ಸಿನಿಮಾ ನಿರ್ಮಾಣಕ್ಕಿಳಿದಿದ್ದಾರೆ. ಈ ಮೂಲಕ ರಾಕಿ ಭಾಯ್ ಫ್ಯಾನ್ಸ್‌ಗೆ ಗುಡ್ ನ್ಯೂಸ್ ಸಿಕ್ಕಿದೆ. ನಟ ಯಶ್ ಅವರ ತಾಯಿ ಪುಷ್ಪ ಅರುಣ್ ಕುಮಾರ್ ಅವರು 'ಪಿಎ ಪ್ರೊಡಕ್ಷನ್ಸ್' ಎಂಬ ಹೊಸ ನಿರ್ಮಾಣ ಸಂಸ್ಥೆ ಆರಂಭಿಸಿದ್ದಾರೆ. ಯಶ್ ತಾಯಿ ಹೆಸರು ಪುಷ್ಪ, ತಂದೆ ಅರುಣ್ ಕುಮಾರ್ ಹೀಗಾಗಿ ನಿರ್ಮಾಣ ಸಂಸ್ಥೆಗೆ ?ಪಿಎ ಪ್ರೋಡಕ್ಷನ್ಸ್? ಎಂದು ಇಡಲಾಗಿದೆ. ಇದರ ಮೂಲಕ ಹೊಸ ಪ್ರತಿಭೆಗಳ ಕನಸಿಗೆ ಸಾಥ್ ನೀಡ್ತಿದ್ದಾರೆ. ಈ ಸಂಸ್ಥೆಯ ಮೂಲಕ ಈಗಾಗಲೇ ಸಿನಿಮಾ ಕೆಲಸ ಶುರುವಾಗಿದೆ. ಏ.29ರಂದು ಬೆಳಗ್ಗೆ 11 ಗಂಟೆಗೆ ಚಿತ್ರದ ಟೈಟಲ್ ಮತ್ತು ಫಸ್ಟ್ ಲುಕ್ ಅನಾವರಣ ಮಾಡೋದಾಗಿ ತಿಳಿಸಿದ್ದಾರೆ. ವಿಶೇಷ ಅಂದ್ರೆ, ಪುಷ್ಪ ಅವರ ನಿರ್ಮಾಣದ ಚೊಚ್ಚಲ ಸಿನಿಮಾದಲ್ಲಿ 'ದಿಯಾ' ಖ್ಯಾತಿಯ ಪೃಥ್ವಿ ಅಂಬರ್ ನಾಯಕನಾಗಿ ನಟಿಸುತ್ತಿದ್ದಾರೆ. ಅವರೊಂದಿಗೆ 'ಕೆಂಡಸಂಪಿಗೆ' ಖ್ಯಾತಿಯ ಕಾವ್ಯ ಶೈವ, ಗೋಪಾಲ ಕೃಷ್ಣ ದೇಶಪಾಂಡೆ ಸೇರಿದಂತೆ ಅನೇಕರು ಕಾಣಿಸಿಕೊಳ್ತಿದ್ದಾರೆ. ಸಿನಿಮಾ ಬಗ್ಗೆ ಹೆಚ್ಚಿನ ಮಾಹಿತಿ ಏ.29ರಂದು ಸಿಗಲಿದೆ.

ಅಂದಹಾಗೆ, 'ಟಾಕ್ಸಿಕ್' ಚಿತ್ರಕ್ಕೆ ನಾಯಕ ಕಮ್ ಸಹ ನಿರ್ಮಾಪಕನಾಗಿ ಯಶ್ ಕಾರ್ಯ ನಿರ್ವಹಿಸುತ್ತಿದ್ದಾರೆ. 'ರಾಮಾಯಣ' ಚಿತ್ರದಲ್ಲಿ ರಾವಣನಾಗಿ ರಾಕಿ ಭಾಯ್ ನಟಿಸಲಿದ್ದಾರೆ.

# ಬೀಚ್ ಬಳಿ ತೃಪ್ತಿ ದಿಮ್ರಿ ಹಾಟ್ ಪೋಸ್

'ಅನಿಮಲ್' ಖ್ಯಾತಿಯ ತೃಪ್ತಿ ದಿಮ್ರಿ ಅವರು ವೆಕೇಷನ್ ಮೂಡ್‌ನಲ್ಲಿದ್ದಾರೆ. ಬೀಚ್ ಬಳಿ ತೃಪ್ತಿ ಮಸ್ತ್ ಆಗಿ ಪೋಸ್ ಕೊಟ್ಟಿದ್ದಾರೆ. ನಟಿಯ ಮೈಮಾಟ ನೋಡಿ ಪಡ್ಡೆಹುಡುಗರು ಫಿದಾ ಆಗಿದ್ದಾರೆ. ಸಿನಿಮಾ ಮತ್ತು ಸಾಮಾಜಿಕ ಜಾಲತಾಣದಲ್ಲಿ ತೃಪ್ತಿ ಸಖತ್ ಆಕ್ಟೀವ್ ಆಗಿರುತ್ತಾರೆ. ಈ ನಡುವೆ ಸಿನಿಮಾ ಕೆಲಸಕ್ಕೆ ಬ್ರೇಕ್ ಸಿಕ್ಕ ಬೆನ್ನಲ್ಲೇ ವೆಕೇಷನ್‌ನಲ್ಲಿ ಅವರು ಬ್ಯುಸಿಯಾಗಿದ್ದಾರೆ. ಕಡಲ ತೀರದಲ್ಲಿ ನಟಿ ತುಂಡು ಬಟ್ಟೆ ಧರಿಸಿ ಸಖತ್ ಹಾಟ್ ಆಂಡ್ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಾರೆ. ವಿವಿಧ ಭಂಗಿಯಲ್ಲಿ ಪೋಸ್ ಕೊಟ್ಟಿರೋ ತೃಪ್ತಿ ದಿಮ್ರಿ ಅವರನ್ನು ನೋಡಿ ಅಭಿಮಾನಿಗಳು ಖುಷಿಪಟ್ಟಿದ್ದಾರೆ. ಸೂರ್ಯನ ಕಿರಣಕ್ಕೆ ನಟಿ ಮೈಯೊಡ್ಡಿ ನಿಂತಿದ್ದಾರೆ. 2017ರಲ್ಲಿ 'ಮೋಮ್' ಚಿತ್ರದ ಮೂಲಕ ಬಾಲಿವುಡ್‌ಗೆ ಎಂಟ್ರಿ ಕೊಟ್ಟರು. 'ಲೈಲಾ ಮಜ್ನು' ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದರು. ಆದರೆ 'ಅನಿಮಲ್' ಚಿತ್ರದಲ್ಲಿ ರಣಬೀರ್ ಕಪೂರ್‌ಗೆ 2ನೇ ನಾಯಕಿಯಾಗಿ ನಟಿಸಿದರು. ಬಾಬಿ 2 ಎಂದೇ ತೃಪ್ತಿ ಫೇಮಸ್ ಆದರು. 'ಅನಿಮಲ್' ಸಿನಿಮಾದಲ್ಲಿ ರಣಬೀರ್‌ಗೆ ರಶ್ಮಿಕಾ ಮಂದಣ್ಣ ಮತ್ತು ತೃಪ್ತಿ ನಾಯಕಿಯರಾಗಿ ನಟಿಸಿದ್ದರು. ಚಿತ್ರದಲ್ಲಿ ಹಾಟ್ ದೃಶ್ಯಗಳಲ್ಲಿ ಕಾಣಿಸಿಕೊಂಡು ಟಾಕ್ ಆಫ್ ದಿ ಟೌನ್ ಆಗಿದ್ದರು.

# ಥಾಮಾ ಚಿತ್ರಕ್ಕಾಗಿ ಊಟಿಯಲ್ಲಿ ಬೀಡುಬಿಟ್ಟ ರಶ್ಮಿಕಾ



ಕೊಡಗಿನ ಕುವರಿ ರಶ್ಮಿಕಾ ಮಂದಣ್ಣ 'ಸಿಕಂದರ್' ಸೋಲಿನ ಬಳಿಕ 'ಥಾಮಾ' ಚಿತ್ರದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ. ಈ ಚಿತ್ರದ ಶೂಟಿಂಗ್‌ಗಾಗಿ ಊಟಿಯಲ್ಲಿ ನಟಿ ಬೀಡುಬಿಟ್ಟಿದ್ದಾರೆ. ಈ ಕುರಿತು ಸ್ವತಃ ರಶ್ಮಿಕಾ ಮಾಹಿತಿ ಹಂಚಿಕೊಂಡಿದ್ದಾರೆ. ಆಯುಷ್ಮಾನ್ ಖುರಾನ ನಟನೆಯ 'ಥಾಮಾ' ಸಿನಿಮಾಗೆ ನಾಯಕಿಯಾಗಿ ರಶ್ಮಿಕಾ ನಟಿಸುತ್ತಿದ್ದಾರೆ. ಈಗಾಗಲೇ ಈ ಸಿನಿಮಾದ ಚಿತ್ರೀಕರಣ ಶುರುವಾಗಿದೆ. ಸದ್ಯ ಚಿತ್ರತಂಡದ ಜೊತೆ ತಮಿಳುನಾಡಿನ ಊಟಿಯಲ್ಲಿ 'ಥಾಮಾ' ಶೂಟಿಂಗ್ ಭರದಿಂದ ನಡೆಯುತ್ತಿದೆ. ಊಟಿಯ ಫೋಟೋ ಶೇರ್ ಮಾಡಿ, ಕೆಲವು ದಿನಗಳ ಕಾಲ ಊಟಿ ಎಂದು ರಶ್ಮಿಕಾ ಇನ್ಸ್ಟಾಗ್ರಾಂ ಸ್ಟೋರಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಚಿತ್ರದ ಅಪ್‌ಡೇಟ್ ಕೇಳಿ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ. ಚಿತ್ರರಂಗದಲ್ಲಿ ರಶ್ಮಿಕಾ ಮಂದಣ್ಣಗೆ ಭಾರೀ ಬೇಡಿಕೆಯಿದೆ. ಇತ್ತೀಚಿನ ಅನಿಮಲ್, ಪುಷ್ಪ 2, ಛಾವಾ ಈ 3 ಸಿನಿಮಾಗಳು ಭರ್ಜರಿ ಸಕ್ಸಸ್ ಕಂಡಿದೆ. 'ಸಿಕಂದರ್' ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಮಕಾಡೆ ಮಲಗಿದ್ರೂ, ರಶ್ಮಿಕಾಗಿರುವ ಬೇಡಿಕೆ ಕಮ್ಮಿಯಾಗಿಲ್ಲ. ದಿ ಗರ್ಲ್‌ಫ್ರೆಂಡ್, ಪುಷ್ಪ 3, ರೈನ್‌ಬೋ, ಶಾಹಿದ್ ಕಪೂರ್ ಜೊತೆಗಿನ ಕಾಕ್‌ಟೈಲ್ 2 ಸೇರಿದಂತೆ ಹಲವು ಸಿನಿಮಾಗಳು ರಶ್ಮಿಕಾ ಕೈಯಲ್ಲಿವೆ.

**ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್**

# ವೈಭವ್ ವಿಶ್ವರೂಪ ದರ್ಶನ!

## ಗುಜರಾತ್ ಟೈಟಾನ್ಸ್ ಚೆಂಡಾಡಿದ 14ರ ಬಾಲಕ



ಕ್ರಿಕೆಟ್ ಜಗತ್ತು ಇಂತಹ ಕ್ರಿಕೆಟ್ ಅನ್ನು ಯಾವತ್ತೂ ನೋಡಿಲ್ಲ. 17 ಎಸೆತದಲ್ಲಿ 50! 35 ಎಸೆತದಲ್ಲಿ 100! ಅದೂ 14ರ ಹರೆಯದ ಹುಡುಗ! 11 ಸಿಕ್ಸರ್ 7 ಬೌಂಡರಿ! 283.33 ಸ್ಟ್ರೈಕ್ ರೇಟ್! ಐಪಿಎಲ್ ಇತಿಹಾಸದ ಎರಡನೇ ಅತ್ಯಂತ ವೇಗದ ಶತಕ.

ಐಪಿಎಲ್‌ನಲ್ಲಿ ಭಾರತೀಯ ಬ್ಯಾಟರ್ ಒಬ್ಬನ ಅತಿ ವೇಗದ ಶತಕ, ಕಿರಿಯ ಬ್ಯಾಟರ್‌ನಿಂದ ಅತಿ ವೇಗದ ಶತಕ ಹೀಗೆ ಒಂದೋ ಎರಡೋ, ಜೈಪುರದ ಸವಾಯಿ ಮಾನ್ ಸಿಂಗ್ ಕ್ರೀಡಾಂಗಣದಲ್ಲಿ ಸೋಮವಾರ ಹತ್ತು ಹಲವು ದಾಖಲೆಗಳು ದೂಳೀಪಟ! ಹೊಡೆದದ್ದು ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಇಶಾಂತ್ ಶರ್ಮಾ ರಶೀದ್ ಖಾನ್ ಮೊದಲಾದ ಘಟಾನುಘಟಿ ಬೌಲರ್‌ಗಳಿಗೆ!

– ಇದು ಅಕ್ಷರಶಃ ವೈಭವ್ ಸೂರ್ಯವಂಶಿ ಎಂಬ 14ರ ಹರೆಯದ ಹುಡುಗನ ವಿಶ್ವರೂಪ ದರ್ಶನ. ವೃತ್ತಿಪರ ಕ್ರಿಕೆಟ್ ನಲ್ಲಿ ಈ ಬಾಲಕ ಏನು ಮಾಡಿಯಾನು ಪ್ರಶ್ನೆಗೆ ಈ ಬಾಲಕ ಇಂದು ಉತ್ತರ ಕೊಟ್ಟಿದ್ದಾನೆ. ಕ್ರಿಕೆಟ್ ಜಗತ್ತೇ ನಿಬ್ಬೆರಗಾಗುವಂತೆ ಮಾಡಿದ್ದಾನೆ! ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರ ಅದ್ಭುತ ಬ್ಯಾಟಿಂಗ್ ಪ್ರದರ್ಶನದಿಂದಾಗಿ ರಾಜಸ್ಥಾನ ರಾಯಲ್ಸ್ ತಂಡ ಗುಜರಾತ್ ಟೈಟಾನ್ಸ್ ಅನ್ನು 8 ವಿಕೆಟ್ ಗಳಿಂದ ಬಗ್ಗು ಬಡಿದಿದೆ.

ಜೈಪುರದಲ್ಲಿ ಸೋಮವಾರ ಸಂಜೆ ನಡೆದ ಪಂದ್ಯದಲ್ಲಿ ಗೆಲ್ಲಲು 210 ರನ್ ಗಳ ಗುರಿ ಪಡೆದಿದ್ದ ರಾಜಸ್ಥಾನ ರಾಯಲ್ಸ್ 25 ಎಸೆತಗಳು ಬಾಕಿ ಇರುವಾಗಲೇ ಜಯಭೇರಿ ಬಾರಿಸಿತು. ಇದು ಐಪಿಎಲ್ ಇತಿಹಾಸದಲ್ಲಿ ದೊಡ್ಡ ಮೊತ್ತವನ್ನು ಅತಿ ವೇಗವಾಗಿ ಗುರಿ ತಲುಪಿದ ಪಂದ್ಯ ಸಹ ಆಗಿ ದಾಖಲಾಯಿತು.

**ರಾಜಸ್ಥಾನಕ್ಕೆ ರಾಯಲ್ ಜಯಭೇರಿ**

ಈ ಮೂಲಕ ಆಡಿದ 10 ಪಂದ್ಯಗಳಲ್ಲಿ 3ನೇ ಗೆಲುವು ದಾಖಲಿಸಿದ ರಾಜಸ್ಥಾನ ಬಳಗ 6 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 9ರಿಂದ 8ನೇ ಸ್ಥಾನಕ್ಕೇರಿದೆ. ಇದೇವೇಳೆ ಆರ್ ಸಿಬಿಯನ್ನು ಕೆಳಕ್ಕೆ ತಳ್ಳಿ ಮತ್ತೆ ಅಗ್ರಸ್ಥಾನಕ್ಕೇರುವ ಆಸೆ ಹೊತ್ತುಕೊಂಡಿದ್ದ ಗುಜರಾತ್ ಟೈಟಾನ್ಸ್ 9 ಪಂದ್ಯಗಳಲ್ಲಿ 12 ಅಂಕಗಳೊಂದಿಗೆ 2ನೇ ಸ್ಥಾನದಲ್ಲೇ ಮುಂದುವರಿದಿದೆ.

# ಐಪಿಎಲ್‌ನಲ್ಲಿ ಹೊಸ ಇತಿಹಾಸ ರಚಿಸಿದ ಮುಂಬೈ ಇಂಡಿಯನ್ಸ್

ಇಂಡಿಯನ್ ಪ್ರೀಮಿಯರ್ ಲೀಗ್‌ನ 45ನೇ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ (ಒಖ) ತಂಡ ಜಯ ಸಾಧಿಸಿದೆ. ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ಈ ಪಂದ್ಯದಲ್ಲಿ ಟಾಸ್ ಗೆದ್ದ ಲಕ್ನೋ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಬೌಲಿಂಗ್ ಆಯ್ದುಕೊಂಡಿದ್ದರು.

ಅದರಂತೆ ಮೊದಲು ಬ್ಯಾಟ್ ಮಾಡಿದ ಮುಂಬೈ ಇಂಡಿಯನ್ಸ್ ಪರ ಆರಂಭಿಕ ದಾಂಡಿಗ ರಯಾನ್ ರಿಕೆಲ್ಟನ್ (58) ಅರ್ಧಶತಕ



ಬಾರಿಸಿದರು. ಇನ್ನು ಮಧ್ಯಮ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಸೂರ್ಯಕುಮಾರ್ ಯಾದವ್ 28 ಎಸೆತಗಳಲ್ಲಿ 4 ಸಿಕ್ಸ್ ಹಾಗೂ 4 ಫೋರ್‌ಗಳೊಂದಿಗೆ 54 ರನ್ ಚಚ್ಚಿದರು. ಈ ಮೂಲಕ ಮುಂಬೈ ಇಂಡಿಯನ್ಸ್ ತಂಡ 20 ಓವರ್‌ಗಳಲ್ಲಿ 215 ರನ್ ಕಲೆಹಾಕಿತು.

ಈ ಗುರಿಯನ್ನು ಬೆನ್ನತ್ತಿದ ಲಕ್ನೋ ಸೂಪರ್ ಜೈಂಟ್ಸ್ ತಂಡವು ನಿರೀಕ್ಷಿತ ಆರಂಭ ಪಡೆದಿರಲಿಲ್ಲ. ಇದಾಗ್ಯೂ ಎಲ್ ಎಸ್‌ಜಿ ಪಡೆ 10 ಓವರ್‌ಗಳಲ್ಲಿ 100 ರನ್‌ಗಳ ಗಡಿ ತಲುಪಿತ್ತು. ಆದರೆ ಆ ಬಳಿಕ ದಿಢೀರ್ ಕುಸಿತಕ್ಕೊಳಗಾದ ಲಕ್ನೋ ಸೂಪರ್ ಜೈಂಟ್ಸ್ ತಂಡವು 161 ರನ್

ಈ ಗೆಲುವಿನೊಂದಿಗೆ ಐಪಿಎಲ್ ಇತಿಹಾಸದಲ್ಲಿ 150 ಪಂದ್ಯಗಳಲ್ಲಿ ಜಯ ಸಾಧಿಸಿದ ಮೊದಲ ತಂಡವೆಂಬ ಕೀರ್ತಿಯನ್ನು ಮುಂಬೈ ಇಂಡಿಯನ್ಸ್ ತನ್ನದಾಗಿಸಿಕೊಂಡಿದೆ. ಮುಂಬೈ ಪಡೆ ಐಪಿಎಲ್‌ನಲ್ಲಿ ಈವರೆಗೆ 271 ಪಂದ್ಯಗಳನ್ನಾಡಿದ್ದು, ಈ ವೇಳೆ 150 ಪಂದ್ಯಗಳಲ್ಲಿ ಗೆಲುವು ಹಾಗೂ 119 ಮ್ಯಾಚ್‌ಗಳಲ್ಲಿ ಸೋಲನುಭವಿಸಿದೆ.

ಇನ್ನು ಐಪಿಎಲ್‌ನಲ್ಲಿ ಅತೀ ಹೆಚ್ಚು ಪಂದ್ಯಗಳನ್ನು ಗೆದ್ದ ತಂಡಗಳ ಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿರುವುದು ಚೆನ್ನೈ ಸೂಪರ್ ಕಿಂಗ್ಸ್. ಸಿಎಸ್‌ಕೆ ತಂಡವು ಈವರೆಗೆ 248 ಪಂದ್ಯಗಳನ್ನಾಡಿದ್ದು, ಈ ವೇಳೆ 140 ಪಂದ್ಯಗಳಲ್ಲಿ ಜಯ ಸಾಧಿಸಿದೆ. ಇನ್ನು 105 ಮ್ಯಾಚ್‌ಗಳಲ್ಲಿ ಸೋಲನುಭವಿಸಿದೆ.

ಹಾಗೆಯೇ ಈ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವುದು ಕೊಲ್ಕತ್ತಾ ನೈಟ್ ರೈಡರ್ಸ್ ತಂಡ. ಕೆಕೆಆರ್ ತಂಡವು ಈವರೆಗೆ 261 ಪಂದ್ಯಗಳನ್ನಾಡಿದ್ದು, ಈ ವೇಳೆ 134 ಪಂದ್ಯಗಳಲ್ಲಿ ಜಯ ಸಾಧಿಸಿದರೆ, 122 ಪಂದ್ಯಗಳಲ್ಲಿ ಸೋಲನುಭವಿಸಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಪಟ್ಟಿಯಲ್ಲಿ 4ನೇ ಸ್ಥಾನ ಅಲಂಕರಿಸಿದೆ. ಆರ್‌ಸಿಬಿ ತಂಡ ಈವರೆಗೆ 266 ಪಂದ್ಯಗಳನ್ನಾಡಿದ್ದು, ಈ ವೇಳೆ 129 ಪಂದ್ಯಗಳಲ್ಲಿ ಜಯ ಸಾಧಿಸಿದರೆ, 131 ಮ್ಯಾಚ್‌ಗಳಲ್ಲಿ ಪರಾಜಯಗೊಂಡಿದೆ.

# ಈ ಸಲ ಕ್ಯಾಪ್ ನಮ್ದೆ



ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಭರ್ಜರಿ ಪ್ರದರ್ಶನ ಮುಂದುವರೆದಿದೆ. ಈವರೆಗೆ ಆಡಿದ 10 ಪಂದ್ಯಗಳಲ್ಲಿ 7 ಗೆಲುವು ದಾಖಲಿಸಿರುವ ಆರ್‌ಸಿಬಿ ಅಂಕ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಹಾಗೆಯೇ ಆಯರೆಂಜ್ ಕ್ಯಾಪ್ ಹಾಗೂ ಪರ್ಪಲ್ ಕ್ಯಾಪ್ ಪಟ್ಟಿಯಲ್ಲೂ ಆರ್‌ಸಿಬಿ ಆಟಗಾರರು ಅಗ್ರಸ್ಥಾನದಲ್ಲಿದ್ದಾರೆ. ಆರೆಂಜ್ ಕ್ಯಾಪ್ ಪಟ್ಟಿಯಲ್ಲಿ ಆರ್‌ಸಿಬಿ ತಂಡದ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ 51 ರನ್ ಬಾರಿಸುವುದೊಂದಿಗೆ ಕೊಹ್ಲಿ ಎಲ್ಲಾರನ್ನು ಹಿಂದಿಕ್ಕಿದ್ದಾರೆ. ಈವರೆಗೆ 10 ಇನಿಂಗ್ಸ್ ಆಡಿರುವ ವಿರಾಟ್ ಕೊಹ್ಲಿ 6 ಅರ್ಧಶತಕಗಳೊಂದಿಗೆ ಒಟ್ಟು 443 ರನ್ ಕಲೆಹಾಕಿದ್ದಾರೆ. ಇನ್ನು ಈ ಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿರುವುದು ಮುಂಬೈ ಇಂಡಿಯನ್ಸ್ ತಂಡದ ಸೂರ್ಯಕುಮಾರ್ ಯಾದವ್. ಈವರೆಗೆ 10 ಇನಿಂಗ್ಸ್ ಆಡಿರುವ ಸೂರ್ಯ 3 ಅರ್ಧಶತಕಗಳೊಂದಿಗೆ 427 ರನ್ ಕಲೆಹಾಕಿದ್ದಾರೆ. ಈ ಮೂಲಕ ಆರೆಂಜ್ ಕ್ಯಾಪ್ ರೇಸ್‌ನಲ್ಲಿ ವಿರಾಟ್ ಕೊಹ್ಲಿಗೆ ಉತ್ತಮ ಪೈಪೋಟಿ ನೀಡುತ್ತಿದ್ದಾರೆ. ಪರ್ಪಲ್ ಕ್ಯಾಪ್ ಪಟ್ಟಿಯಲ್ಲಿ ಆರ್‌ಸಿಬಿ ತಂಡದ ವೇಗಿ ಜೋಶ್ ಹ್ಯಾಝಲ್‌ವುಡ್ ಮೊದಲ ಸ್ಥಾನದಲ್ಲಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ 10 ಇನಿಂಗ್ಸ್‌ಗಳಲ್ಲಿ 36.5 ಓವರ್‌ಗಳನ್ನು ಎಸೆದಿರುವ ಹ್ಯಾಝಲ್‌ವುಡ್ 18 ವಿಕೆಟ್‌ಗಳನ್ನು ಕಬಳಿಸಿ ಪರ್ಪಲ್ ಕ್ಯಾಪ್ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ.

ಇನ್ನು ಈ ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿರುವುದು ಕನ್ನಡಿಗ ಪ್ರಸಿದ್ಧ್ ಕೃಷ್ಣ. ಗುಜರಾತ್ ಟೈಟಾನ್ಸ್ ಪರ 8 ಪಂದ್ಯಗಳಲ್ಲಿ 31 ಓವರ್‌ಗಳನ್ನು ಎಸೆದಿರುವ ಪ್ರಸಿದ್ಧ್ ಕೃಷ್ಣ 16 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಈ ಮೂಲಕ ಪರ್ಪಲ್ ಕ್ಯಾಪ್ ರೇಸ್‌ನಲ್ಲಿ ಹ್ಯಾಝಲ್‌ವುಡ್ ಜೊತೆ ಪೈಪೋಟಿ ನಡೆಸುತ್ತಿದ್ದಾರೆ.

**ಆರೆಂಜ್ ಕ್ಯಾಪ್ ವಿರಾಟ್ ಕೊಹ್ಲಿ ಅಗ್ರಸ್ಥಾನ**

# ಕೆಎಲ್ ರಾಹುಲ್‌ಗೆ ಭಾರತ ಟಿ20 ತಂಡದಲ್ಲಿ ಸ್ಥಾನ ನೀಡಿ



ಕೆಎಲ್ ರಾಹುಲ್ ಬ್ಯಾಟ್ ರನ್‌ಗಳ ಮಳೆ ಹರಿಸುತ್ತಿದೆ. ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪರ ಆಡುತ್ತಿರುವ ಈ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ತಂಡಕ್ಕಾಗಿ ಅನೇಕ ಪಂದ್ಯಗಳನ್ನು ಏಕಾಂಗಿಯಾಗಿ ಗೆಲ್ಲಿಸಿಕೊಟ್ಟಿದ್ದಾರೆ. ಈ ಸೀಸನ್‌ನಲ್ಲಿ ರಾಹುಲ್ ಎಂಟು ಪಂದ್ಯಗಳಲ್ಲಿ 60.66 ರ ಸರಾಸರಿಯಲ್ಲಿ 364 ರನ್ ಗಳಿಸಿದ್ದಾರೆ. ಈ ಸೀಸನ್‌ನ 46 ನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ, ತಂಡದ ಎಲ್ಲಾ ಬ್ಯಾಟ್ಸ್‌ಮನ್ ಗಳು ಕಷ್ಟಪಡುತ್ತಿದ್ದಾಗ ರಾಹುಲ್ 41 ರನ್‌ಗಳ ಉಪಯುಕ್ತ ಇನ್ನಿಂಗ್ಸ್ ಆಡಿ ಡೆಲ್ಲಿ ತಂಡವನ್ನು ಗೌರವಾನ್ವಿತ ಸ್ಕೋರ್‌ಗೆ ಕೊಂಡೊಯ್ದರು. ಅವರ ಅದ್ಭುತ ಬ್ಯಾಟಿಂಗ್ ಗಮನಿಸಿದ ಡೆಲ್ಲಿ ಕ್ಯಾಪಿಟಲ್ಸ್‌ನ ಮಾರ್ಗದರ್ಶಕ ಹಾಗೂ ಮಾಜಿ ಆರ್‌ಸಿಬಿ ನಾಯಕ ಕೆವಿನ್ ಪೀಟರ್ಸನ್, ಟೀಂ ಇಂಡಿಯಾದ ಟಿ20 ತಂಡದಲ್ಲಿ ರಾಹುಲ್ ಅವರನ್ನು ಸೇರಿಸಿಕೊಳ್ಳಬೇಕೆಂದು ಪ್ರತಿಪಾದಿಸಿದ್ದಾರೆ.

**ಮಾಜಿ ಆರ್‌ಸಿಬಿ ನಾಯಕನ ಒತ್ತಾಯ**

ಟೀಂ ಇಂಡಿಯಾದ ಏಕದಿನ ತಂಡದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿರುವ ಕೆಎಲ್ ರಾಹುಲ್ 2022 ರಿಂದ ಟಿ20 ತಂಡದಿಂದ ಹೊರಗುಳಿದಿದ್ದಾರೆ. ಐಪಿಎಲ್ 2025 ರಲ್ಲಿ ರಾಹುಲ್ ಉತ್ತಮ ಫಾರ್ಮ್‌ನಲ್ಲಿದ್ದು, ಡೆಲ್ಲಿ ತಂಡದ ಮಾರ್ಗದರ್ಶಕ ಕೆವಿನ್ ಪೀಟರ್ಸನ್, ರಾಹುಲ್ ಅವರನ್ನು ಭಾರತದ ಟಿ20 ತಂಡಕ್ಕೆ ಸೇರಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ. ನಾಲ್ಕನೇ ಕ್ರಮಾಂಕದಲ್ಲಿ ಕೆಎಲ್ ರಾಹುಲ್‌ಗಿಂತ ಉತ್ತಮ ಬ್ಯಾಟ್ಸ್‌ಮನ್ ಯಾರೂ ಇರಲು ಸಾಧ್ಯವಿಲ್ಲ. ಅವರು ವಿಕೆಟ್ ಕೀಪಿಂಗ್ ಕೂಡ ಮಾಡುತ್ತಾರೆ. ಅಗ್ರ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ನಂತರ, ಕೆಎಲ್ ರಾಹುಲ್ ನಾಲ್ಕನೇ ಸ್ಥಾನದಲ್ಲಿ ಭಾರತದ ಟಿ20 ತಂಡದಲ್ಲಿ ಆಡಲು ಸಂಪೂರ್ಣವಾಗಿ ಅರ್ಹರು ಎಂದು ನಾನು ನಂಬುತ್ತೇನೆ ಎಂದು ಪೀಟರ್ಸನ್ ಹೇಳಿದ್ದಾರೆ.

**ಕೆಎಲ್ ರಾಹುಲ್ ಪರ ಪೀಟರ್ಸನ್ ವಕಾಲತ್ತು:** ಈ ಸೀಸನ್‌ನಲ್ಲಿ ಕೆಎಲ್ ರಾಹುಲ್ ಡೆಲ್ಲಿ ಕ್ಯಾಪಿಟಲ್ಸ್ ಜೆರ್ಸಿ ಧರಿಸಿ ಮೈದಾನಕ್ಕೆ ಇಳಿದಾಗಿನಿಂದ ಅವರ ಬ್ಯಾಟ್ ಘರ್ಜಿಸುತ್ತಿದೆ. ಇಲ್ಲಿಯವರೆಗೆ, ರಾಹುಲ್ ಡೆಲ್ಲಿ ಕ್ಯಾಪಿಟಲ್ಸ್ ಪರ ಆಡಿರುವ ಎಂಟು ಪಂದ್ಯಗಳಲ್ಲಿ 60.66 ರ ಸರಾಸರಿಯಲ್ಲಿ 364 ರನ್ ಗಳಿಸಿದ್ದಾರೆ. ಆರ್‌ಸಿಬಿ ವಿರುದ್ಧದ ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ , ಕೆವಿನ್ ಪೀಟರ್ಸನ್, 'ನಾನು ಬಿಸಿಸಿಐನಲ್ಲಿದ್ದರೆ, ಭಾರತದ ಟಿ20 ತಂಡದಲ್ಲಿ ಕೆಎಲ್ ರಾಹುಲ್ ಅವರನ್ನು ನಾಲ್ಕನೇ ಸ್ಥಾನದಲ್ಲಿ ಸೇರಿಸಿಕೊಳ್ಳುತ್ತಿದ್ದೆ. ಭಾರತಕ್ಕೆ ಅಗ್ರ ಕ್ರಮಾಂಕದಲ್ಲಿ ಹಲವು ಆಯ್ಕೆಗಳಿವೆ ಎಂದು ನಾನು ಭಾವಿಸುತ್ತೇನೆ ಮತ್ತು ಸೂರ್ಯಕುಮಾರ್ ಯಾದವ್ ಕೂಡ ಅಗ್ರ ಕ್ರಮಾಂಕದಲ್ಲಿ ಆಡುತ್ತಿದ್ದಾರೆ. ನಿಮ್ಮಲ್ಲಿ ಬಹಳಷ್ಟು ಆಟಗಾರರಿದ್ದಾರೆ ಆದರೆ ಕೆಎಲ್ ರಾಹುಲ್ ಈಗ ಕ್ರಿಕೆಟ್ ಆಡುತ್ತಿರುವ ರೀತಿ ನೋಡಿದರೆ, ನಾಲ್ಕನೇ ಸ್ಥಾನದಲ್ಲಿ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿ ಅವರು ನನ್ನ ಮೊದಲ ಆಯ್ಕೆಯಾಗಿರುತ್ತಿದ್ದರು.



**ಟಿ20 ಕೇವಲ ಬೌಂಡರಿ, ಸಿಕ್ಸರ್‌ಗಳ ಆಟ:** ಐಪಿಎಲ್ 2025 ಕ್ಕೂ ಮೊದಲು ಕೆಎಲ್ ರಾಹುಲ್ ಕೂಡ ಟಿ20 ಟೀಂ ಇಂಡಿಯಾಗೆ ಮರಳುವ ಬಗ್ಗೆ ಹೇಳಿದ್ದರು, 'ಎಲ್ಲೋ ನಾನು ಬೌಂಡರಿ ಮತ್ತು ಸಿಕ್ಸರ್‌ಗಳನ್ನು ಹೊಡೆಯುವುದನ್ನು ಆನಂದಿಸಲು ಮರೆತಿದ್ದೆ. ನನ್ನ ಆಟವನ್ನು ಬಹಳ ಡಿದೂರ ತೆಗೆದುಕೊಂಡು ಹೋಗಬೇಕೆಂದು ನಾನು ಬಯಸಿದ್ದೆ. ಈ ವಿಷಯ ನನ್ನ ಮನಸ್ಸಿನಲ್ಲಿಯೇ ಉಳಿದುಕೊಂಡಿತ್ತು. ಆದರೆ ಈಗ ನಾನು ಹಿಂದೆ ಸರಿದು ಬೌಂಡರಿ ಮತ್ತು ಸಿಕ್ಸರ್‌ಗಳನ್ನು ಹೊಡೆಯುವುದರ ಮೇಲೆ ಹೆಚ್ಚು ಗಮನಹರಿಸಬೇಕು ಎಂದು ನನಗೆ ಅರಿವಾಗಿದೆ. ಏಕೆಂದರೆ ಟಿ20 ಈಗ ಬಹಳಷ್ಟು ಬದಲಾಗಿದೆ ಎಂದು ಕೆಎಲ್ ರಾಹುಲ್ ಹೇಳಿಕೊಂಡಿದ್ದರು.


**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**